भारत का राजपत्र
The Gazette of India

ಭಾರತ ರಾಜಪತ್ರ

**(Extraordinary)**
(ವಿಶೇಷ ಸಂಚಿಕೆ)

भाग IX अनुभाग 1
**PART IX SECTION 1**
ಭಾಗ IX ವಿಭಾಗ 1

प्राधिकार से प्रकाशित
**Published by Authority**
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ

| | | |
|---|---|---|
| सं 1, नई दिल्ली, शुक्रवार, मई 17, 2024<br>No.1, New Delhi, Friday, May 17, 2024<br>ನಂ.1, ನವದೆಹಲಿ, ಶುಕ್ರವಾರ, ಮೇ 17, 2024 | वैशाख 09, 1946 (शक)<br>Vaishakha 09, 1946 (saka)<br>ವೈಶಾಖ 09, 1946 (ಶಕ) | खंड.55<br>Vol. 55<br>ಸಂಪುಟ.55 |


**Ministry of Law and Justice**
(Legislative Department)
New Delhi, 17th May, 2024

**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

**ನವದೆಹಲಿ, 17ನೇ ಮೇ, 2024**

The Translation in Kannada of the following Acts, namely:- (1) THE DISASTER MANAGEMENT ACT, 2005 (NO.53 OF 2005) (2) THE STREET VENDORS (PROTECTION OF LIVELIHOOD AND REGULATION OF STREET VENDING) ACT, 2014 (NO.7 OF 2014) (3)THE COMMERCIAL COURTS ACT, 2015 (NO.4 OF 2016) (4) THE TRIBUNALS REFORMS ACT, 2021 (NO.33 OF 2021) (5) THE SURROGACY (REGULATION) ACT, 2021 (NO.47 OF 2021) - are hereby published under the authority of the President and shall be deemed to be authoritative text thereof in Kannada under clause (a) of section 2 of the Authoritative Texts (Central Laws) Act, 1973 (50 of 1973).

## ವಾಣಿಜ್ಯ ನ್ಯಾಯಾಲಯಗಳ ಅಧಿನಿಯಮ, 2015

## (2016ರ ಸಂಖ್ಯೆ 4)

[31ನೇ ಡಿಸೆಂಬರ್, 2015.]

ಉಚ್ಚ ನ್ಯಾಯಾಲಯಗಳಲ್ಲಿ, ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದಗಳ ನ್ಯಾಯನಿರ್ಣಯಕ್ಕಾಗಿ ವಾಣಿಜ್ಯ ನ್ಯಾಯಾಲಯಗಳನ್ನು, ವಾಣಿಜ್ಯ ಅಪೀಲು ನ್ಯಾಯಾಲಯಗಳನ್ನು, ವಾಣಿಜ್ಯ ವಿಭಾಗ ಮತ್ತು ವಾಣಿಜ್ಯ ಅಪೀಲು ವಿಚಾರಣಾ ವಿಭಾಗವನ್ನು ರಚಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಅರವತ್ತಾರನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

### ಅಧ್ಯಾಯ I

### ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ವಾಣಿಜ್ಯ ನ್ಯಾಯಾಲಯಗಳ ಅಧಿನಿಯಮ, 2015 ಎಂದು ಕರೆಯತಕ್ಕದ್ದು.

(2) ಇದು, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, 2015ರ ಅಕ್ಟೋಬರ್ 23ನೇ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.–** (1) ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ವಾಣಿಜ್ಯ ಅಪೀಲು ನ್ಯಾಯಾಲಯಗಳು" ಎಂದರೆ, 3ಎ ಪ್ರಕರಣದ ಮೇರೆಗೆ ಗೊತ್ತುಪಡಿಸಲಾದ ವಾಣಿಜ್ಯ ಅಪೀಲು ನ್ಯಾಯಾಲಯಗಳು;

(ಎಎ) "ವಾಣಿಜ್ಯ ಅಪೀಲು ವಿಭಾಗ" ಎಂದರೆ, 5ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದಲ್ಲಿ ರಚಿಸಿದ ವಾಣಿಜ್ಯ ಅಪೀಲು ವಿಭಾಗ;

(ಬಿ) "ವಾಣಿಜ್ಯ ನ್ಯಾಯಾಲಯ" ಎಂದರೆ, 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರಚಿಸಿದ ವಾಣಿಜ್ಯ ನ್ಯಾಯಾಲಯ;

(ಸಿ) "ವಾಣಿಜ್ಯ ವಿವಾದ" ಎಂದರೆ:–

(i) ವರ್ತಕರ, ಬ್ಯಾಂಕರ್‌ಗಳ, ಹಣಕಾಸುದಾರರ ಮತ್ತು ವ್ಯಾಪಾರಿಗಳ ವಾಣಿಜ್ಯ ದಸ್ತಾವೇಜುಗಳಿಗೆ ಸಂಬಂಧಪಟ್ಟಂತೆ, ಅಂಥ ದಸ್ತಾವೇಜುಗಳನ್ನು ಜಾರಿಗೊಳಿಸುವುದು ಮತ್ತು ಅರ್ಥೈಸುವುದೂ ಒಳಗೊಂಡಂತೆ, ಅವುಗಳಿಗೆ ಸಂಬಂಧಿಸಿದ ಸಾಮಾನ್ಯ ವ್ಯವಹಾರಗಳಿಂದ;

(ii) ವಾಣಿಜ್ಯ ಸರಕುಗಳ ರಫ್ತು ಮಾಡುವುದರಿಂದ ಅಥವಾ ಆಮದು ಮಾಡಿಕೊಳ್ಳುವುದರಿಂದ ಅಥವಾ ಸೇವೆಗಳಿಂದ;

(iii) ಸಾಗರ ನ್ಯಾಯಾಡಳಿತ ಸಮುದ್ರ ಮತ್ತು ನೌಕಾಯಾನ ಕಾನೂನಿಗೆ ಸಂಬಂಧಪಟ್ಟ ವಿಷಯಗಳಿಂದ;

(iv) ವಿಮಾನಗಳ, ವಿಮಾನ ಇಂಜಿನ್‌ಗಳ, ವಿಮಾನ ಉಪಕರಣಗಳ ಮತ್ತು ಹೆಲಿಕಾಪ್ಟರ್‌ಗಳ ವ್ಯವಹಾರಗಳು, ಮಾರಾಟ, ಗುತ್ತಿಗೆ ಮತ್ತು ಅದಕ್ಕಾಗಿ ಹಣಕಾಸು ಒದಗಿಸುವುದು ಒಳಗೊಂಡಂತೆ ಅವುಗಳಿಗೆ ಸಂಬಂಧಪಡುವ ವ್ಯವಹಾರಗಳಿಂದ;

(v) ಸರಕುಗಳ ಸಾಗಣೆಯಿಂದ;

(vi) ಟೆಂಡರ್‌ಗಳೂ ಒಳಗೊಂಡಂತೆ, ನಿರ್ಮಾಣ ಮತ್ತು ಮೂಲಭೂತ ಸೌಕರ್ಯಗಳ ಕರಾರುಗಳಿಂದ;

(vii) ವ್ಯಾಪಾರ ಅಥವಾ ವಾಣಿಜ್ಯ ವ್ಯವಹಾರದಲ್ಲಿ ಮಾತ್ರ ಬಳಕೆಯಾದ ಸ್ಥಿರಸ್ವತ್ತಿಗೆ ಸಂಬಂಧಪಟ್ಟಿರುವ ಒಪ್ಪಂದಗಳಿಂದ;

(viii) ಫ್ರಾಂಚೈಸಿಂಗ್ ಒಪ್ಪಂದಗಳಿಂದ;

(ix) ವಿತರಣೆ ಮತ್ತು ಲೈಸೆನ್ಸ್ ನೀಡಿಕೆ ಒಪ್ಪಂದಗಳಿಂದ;

(x) ವ್ಯವಸ್ಥಾಪನೆ ಮತ್ತು ಸಮಾಲೋಚನಾ ಒಪ್ಪಂದಗಳಿಂದ;

(xi) ಜಂಟಿ ಉದ್ಯಮ ಒಪ್ಪಂದಗಳಿಂದ;

(xii) ಷೇರುದಾರರ ಒಪ್ಪಂದಗಳಿಂದ;

(xiii) ಹೊರಗುತ್ತಿಗೆ ಸೇವೆಗಳು ಮತ್ತು ಹಣಕಾಸಿನ ಸೇವೆಗಳು ಒಳಗೊಂಡಂತೆ, ಕೈಗಾರಿಕಾ ಸೇವೆಗಳಿಗೆ ಸಂಬಂಧಿಸಿದ ವಂತಿಗೆ ಮತ್ತು ಬಂಡವಾಳ ಹೂಡಿಕೆ ಒಪ್ಪಂದಗಳಿಂದ;

(xiv) ವಾಣಿಜ್ಯ ಏಜೆನ್ಸಿ ಮತ್ತು ವಾಣಿಜ್ಯ ರೂಢಿಯಿಂದ;

(xv) ಪಾಲುದಾರಿಕೆ ಒಪ್ಪಂದಗಳಿಂದ;

(xvi) ತಂತ್ರಜ್ಞಾನ ಅಭಿವೃದ್ಧಿ ಒಪ್ಪಂದಗಳಿಂದ;

(xvii) ನೋಂದಾಯಿತ ಮತ್ತು ನೋಂದಾಯಿತವಲ್ಲದ ವ್ಯಾಪಾರ ಚಿಹ್ನೆಗಳು, ಕೃತಿಸ್ವಾಮ್ಯ, ಪೇಟೆಂಟ್, ವಿನ್ಯಾಸ, ಕಾರ್ಯಕ್ಷೇತ್ರದ ಹೆಸರುಗಳು, ಭೌಗೋಳಿಕ ಗುರುತುಗಳು ಮತ್ತು ಸೆಮಿಕಂಡಕ್ಟರ್ ಇಂಟಿಗ್ರೇಟೆಡ್ ಸರ್ಕ್ಯೂಟ್‌ಗಳಿಗೆ ಸಂಬಂಧಪಟ್ಟ ಬೌದ್ಧಿಕ ಸ್ವತ್ತಿನ ಹಕ್ಕುಗಳಿಂದ;

(xviii) ಸರಕುಗಳ ಮಾರಾಟಕ್ಕಾಗಿ ಅಥವಾ ಸೇವೆಗಳನ್ನು ಒದಗಿಸುವುದಕ್ಕಾಗಿನ ಒಪ್ಪಂದಗಳಿಂದ;

(xix) ಇಲೆಕ್ಟ್ರೋಮ್ಯಾಗ್ನೆಟಿಕ್ ಸ್ಪೆಕ್ಟ್ರಮ್ ಒಳಗೊಂಡಂತೆ, ತೈಲ ಮತ್ತು ಅನಿಲ ನಿಕ್ಷೇಪ ಅಥವಾ ಇತರೆ ಸ್ವಾಭಾವಿಕ ಸಂಪನ್ಮೂಲಗಳನ್ನು ಬರಿದುಮಾಡುವುದರಿಂದ;

(xx) ವಿಮೆ ಮತ್ತು ಮರು–ವಿಮೆಯಿಂದ;

(xxi) ಮೇಲಿನ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಏಜೆನ್ಸಿಯ ಕರಾರುಗಳಿಂದ; ಮತ್ತು

(xxii) ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಇತರೆ ವಾಣಿಜ್ಯ ವಿಷಯಗಳಿಂದ

– ಉದ್ಭವಿಸುವ ವಿವಾದ.

*ವಿವರಣೆ.*– ವಾಣಿಜ್ಯ ವಿವಾದವು,–

(ಎ) ಇದು, ಸ್ಥಿರ ಸ್ವತ್ತನ್ನು ವಶಕ್ಕೆ ಪಡೆಯುವುದಕ್ಕಾಗಿ ಅಥವಾ ಭದ್ರತೆಯಾಗಿ ನೀಡಲಾದ ಸ್ಥಿರ ಸ್ವತ್ತಿನ ಪೈಕಿಯಿಂದ ಹಣ ವಸೂಲಿ ಮಾಡುವ ಕ್ರಮವನ್ನು ಸಹ ಒಳಗೊಳ್ಳುವುದರಿಂದ ಅಥವಾ ಸ್ಥಿರ ಸ್ವತ್ತಿಗೆ ಸಂಬಂಧಿಸಿದ ಇತರೆ ಯಾವುದೇ ಪರಿಹಾರವನ್ನು ಒಳಗೊಳ್ಳುವುದರಿಂದ;

(ಬಿ) ಕರಾರು ಮಾಡಿಕೊಳ್ಳುವ ಪಕ್ಷಕಾರರಲ್ಲಿ ರಾಜ್ಯವು ಅಥವಾ ಅದರ ಯಾವುದೇ ಏಜೆನ್ಸಿಯು ಅಥವಾ ಏಜೆಂಟನು ಅಥವಾ ಸಾರ್ವಜನಿಕ ಸಮಾರಂಭಗಳನ್ನು ನಡೆಸುವ ಖಾಸಗಿ ನಿಕಾಯವು ಒಂದು ಪಕ್ಷಕಾರವಾಗಿರುವುದರಿಂದ

– ಮಾತ್ರವೇ, ಅದು ಕೇವಲ ವಾಣಿಜ್ಯ ವಿವಾದವಾಗಿ ನಿಂತುಹೋಗತಕ್ಕದ್ದಲ್ಲ;

(ಡಿ) "ವಾಣಿಜ್ಯ ವಿಭಾಗ" ಎಂದರೆ, 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಉಚ್ಚ ನ್ಯಾಯಾಲಯದಲ್ಲಿ ರಚಿಸಿದ ವಾಣಿಜ್ಯ ವಿಭಾಗ;

(ಇ) "ಜಿಲ್ಲಾ ನ್ಯಾಯಾಧೀಶ" ಎಂಬ ಪದವು, ಭಾರತ ಸಂವಿಧಾನದ 236ನೇ ಅನುಚ್ಛೇದದ (ಎ) ಖಂಡದಲ್ಲಿ ಅದಕ್ಕೆ ನೀಡಲಾದ ಅರ್ಥವನ್ನೇ ಹೊಂದಿರತಕ್ಕದ್ದು;

(ಎಫ್) "ದಸ್ತಾವೇಜು" ಎಂದರೆ, ಯಾವುದೇ ವಿಷಯವನ್ನು ದಾಖಲಿಸುವ ಉದ್ದೇಶಕ್ಕಾಗಿ ಬಳಸಬೇಕೆಂದು ಉದ್ದೇಶಿಸಿದ ಅಥವಾ ಬಳಸಬಹುದಾಗಿರುವ ಅಕ್ಷರಗಳು, ಅಂಕಿಗಳು ಅಥವಾ ಗುರುತುಗಳ ಸಾಧನಗಳು ಅಥವಾ ವಿದ್ಯುನ್ಮಾನ ಸಾಧನಗಳ ಮೂಲಕ ಅಥವಾ ಅವುಗಳ ಪೈಕಿ ಒಂದಕ್ಕಿಂತ ಹೆಚ್ಚು ಸಾಧನಗಳ ಮೂಲಕ, ಆ ವಸ್ತುವಿಷಯದ ಬಗ್ಗೆ ವ್ಯಕ್ತಪಡಿಸಿದ ಅಥವಾ ವಿವರಿಸಿದ ಯಾವುದೇ ವಿಷಯ;

(ಜಿ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಮತ್ತು ಅದರ ಸಜಾತೀಯ ಅರ್ಥಗಳು ಮತ್ತು ವ್ಯಾಕರಣ ವ್ಯತ್ಯಾಸಗಳೊಂದಿಗೆ "ಅಧಿಸೂಚಿಸು" ಎಂಬ ಪದಾವಳಿಯನ್ನು ತದನುಸಾರವಾಗಿ ಅರ್ಥೈಸತಕ್ಕದ್ದು;

(ಹೆಚ್) "ಅನುಸೂಚಿ" ಎಂದರೆ, ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ; ಮತ್ತು

(ಐ) ವಾಣಿಜ್ಯ ವಿವಾದದ ಸಂಬಂಧದಲ್ಲಿ "ನಿರ್ದಿಷ್ಟಪಡಿಸಿದ ಮೌಲ್ಯ" ಎಂದರೆ, 12ನೇ ಪ್ರಕರಣಕ್ಕೆ ಅನುಸಾರವಾಗಿ ನಿರ್ಧರಿಸಲಾದಂತೆ ದಾವೆಯ ಸಂಬಂಧದಲ್ಲಿನ ವಸ್ತು ವಿಷಯದ ಮೌಲ್ಯ. ಇದು ಮೂರು ಲಕ್ಷ ರೂಪಾಯಿಗಳಿಗಿಂತ ಅಥವಾ ಕೇಂದ್ರ ಸರ್ಕಾರವು ಅಧಿಸೂಚಿಸಬಹುದಾದಂಥ ಹೆಚ್ಚಿನ ಮೌಲ್ಯಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

(2) ಈ ಅಧಿನಿಯಮದಲ್ಲಿ ಬಳಸಲಾದ ಮತ್ತು ಪರಿಭಾಷಿಸಿಲ್ಲದ ಆದರೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಮತ್ತು ಭಾರತ ಸಾಕ್ಷ್ಯ ಅಧಿನಿಯಮ, 1872 (1872ರ 1)ರಲ್ಲಿ ಪರಿಭಾಷಿಸಿದ ಪದಗಳು ಮತ್ತು ಪದಾವಳಿಗಳು, ಆ ಸಂಹಿತೆ ಮತ್ತು ಅಧಿನಿಯಮದಲ್ಲಿ, ಅವುಗಳಿಗೆ ಅನುಕ್ರಮವಾಗಿ ನೀಡಲಾದ ಅರ್ಥಗಳನ್ನೇ ಹೊಂದಿರತಕ್ಕದ್ದು.

## ಅಧ್ಯಾಯ II

## ವಾಣಿಜ್ಯ ನ್ಯಾಯಾಲಯಗಳು, ವಾಣಿಜ್ಯ ಅಪೀಲು ನ್ಯಾಯಾಲಯಗಳು, ವಾಣಿಜ್ಯ ವಿಭಾಗಗಳು ಮತ್ತು ವಾಣಿಜ್ಯ ಅಪೀಲು ವಿಭಾಗಗಳು

**3. ವಾಣಿಜ್ಯ ನ್ಯಾಯಾಲಯಗಳ ರಚನೆ.–** (1) ರಾಜ್ಯ ಸರ್ಕಾರವು, ಸಂಬಂಧಪಟ್ಟ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಈ ಅಧಿನಿಯಮದ ಮೇರೆಗೆ ವಾಣಿಜ್ಯ ನ್ಯಾಯಾಲಯಗಳಿಗೆ ಪ್ರದತ್ತವಾದ ಅಧಿಕಾರವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ, ಜಿಲ್ಲಾಮಟ್ಟದಲ್ಲಿ ಅವಶ್ಯವೆಂದು ತಾನು ಭಾವಿಸಬಹುದಾದಷ್ಟು ಸಂಖ್ಯೆಯ, ವಾಣಿಜ್ಯ ನ್ಯಾಯಾಲಯಗಳನ್ನು ಅಧಿಸೂಚನೆಯ ಮೂಲಕ ರಚಿಸಬಹುದು:

ಪರಂತು, ಸಾಮಾನ್ಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಉಚ್ಚ ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು, ಸಂಬಂಧಪಟ್ಟ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆಯ ಮೂಲಕ ಜಿಲ್ಲಾ ನ್ಯಾಯಾಧೀಶರ ಮಟ್ಟದಲ್ಲಿ ವಾಣಿಜ್ಯ ನ್ಯಾಯಾಲಯಗಳನ್ನು ರಚಿಸಬಹುದು:

ಮತ್ತೂ ಪರಂತು, ಉಚ್ಚ ನ್ಯಾಯಾಲಯಗಳು, ಯಾವ ಪ್ರದೇಶಗಳ ಸಂಬಂಧದಲ್ಲಿ ಸಾಮಾನ್ಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಹೊಂದಿರುವವೋ, ಆ ಪ್ರದೇಶಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮೂರು

ಲಕ್ಷ ರೂಪಾಯಿಗಳಿಗಿಂತ ಕಡಿಮೆ ಇರತಕ್ಕದ್ದಲ್ಲದಂಥ ಮತ್ತು ಅವಶ್ಯವೆಂದು ತಾನು ಪರಿಗಣಿಸಬಹುದಾದಂತೆ, ಜಿಲ್ಲಾ ನ್ಯಾಯಾಲಯಗಳು ಚಲಾಯಿಸಬಹುದಾದ ಆರ್ಥಿಕ ಅಧಿಕಾರವ್ಯಾಪ್ತಿಗಿಂತ ಹೆಚ್ಚಿರತಕ್ಕದ್ದಲ್ಲದಂಥ ಆರ್ಥಿಕ ಮೌಲ್ಯವನ್ನು ನಿರ್ದಿಷ್ಟಪಡಿಸಬಹುದು.

(1ಎ) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ರಾಜ್ಯ ಸರ್ಕಾರವು, ಸಂಬಂಧಪಟ್ಟ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆಯ ಮೂಲಕ ಇಡೀ ರಾಜ್ಯಕ್ಕಾಗಿ ಅಥವಾ ಅದರ ಭಾಗಕ್ಕಾಗಿ ಮೂರು ಲಕ್ಷ ರೂಪಾಯಿಗಳಿಗಿಂತ ಅಥವಾ ಅದು ಅವಶ್ಯವೆಂದು ಪರಿಗಣಿಸಬಹುದಾದಂಥ ಹೆಚ್ಚಿನ ಮೌಲ್ಯಕ್ಕಿಂತ ಕಡಿಮೆ ಇರದಂಥ ಹೆಚ್ಚಿನ ಆರ್ಥಿಕ ಮೌಲ್ಯವನ್ನು ನಿರ್ದಿಷ್ಟಪಡಿಸಬಹುದು.

(2) ರಾಜ್ಯ ಸರ್ಕಾರವು, ಸಂಬಂಧಪಟ್ಟ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ವಾಣಿಜ್ಯ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಬರುವ ಪ್ರದೇಶದ ಸ್ಥಳೀಯ ಪರಿಮಿತಿಗಳನ್ನು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸತಕ್ಕದ್ದು ಮತ್ತು ವಿಸ್ತರಿಸತಕ್ಕದ್ದು ಮತ್ತು ಅಂಥ ಸ್ಥಳೀಯ ಪರಿಮಿತಿಗಳನ್ನು ಕಾಲಕಾಲಕ್ಕೆ ಹೆಚ್ಚಿಸಬಹುದು, ಕಡಿಮೆ ಮಾಡಬಹುದು ಅಥವಾ ಮಾರ್ಪಾಟು ಮಾಡಬಹುದು.

(3) ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯ ಸಮ್ಮತಿಯೊಂದಿಗೆ, ವಾಣಿಜ್ಯ ವಿವಾದಗಳ ಬಗ್ಗೆ ವ್ಯವಹರಿಸುವಲ್ಲಿ ಅನುಭವ ಹೊಂದಿರುವ ಜಿಲ್ಲಾ ನ್ಯಾಯಾಧೀಶರ ದರ್ಜೆಯ ಅಥವಾ ಜಿಲ್ಲಾ ನ್ಯಾಯಾಧೀಶರ ದರ್ಜೆಕ್ಕಿಂತ ಕಡಿಮೆ ದರ್ಜೆಯ ನ್ಯಾಯಾಲಯದ ಒಬ್ಬರು ಅಥವಾ ಹೆಚ್ಚಿನ ನ್ಯಾಯಾಧೀಶರನ್ನು ವಾಣಿಜ್ಯ ನ್ಯಾಯಾಲಯದ ನ್ಯಾಯಾಧೀಶನಾಗಿ ಅಥವಾ ನ್ಯಾಯಾಧೀಶರಾಗಿ ನೇಮಕ ಮಾಡಬಹುದು.

**3ಎ. ವಾಣಿಜ್ಯ ಅಪೀಲು ನ್ಯಾಯಾಲಯಗಳನ್ನು ಗೊತ್ತುಪಡಿಸುವುದು.–** ಯಾವ ಪ್ರದೇಶಗಳ ಮೇಲೆ ಉಚ್ಚ ನ್ಯಾಯಾಲಯಗಳು ಸಾಮಾನ್ಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಹೊಂದಿರುವವೋ, ಆ ಪ್ರದೇಶಗಳನ್ನು ಹೊರತುಪಡಿಸಿ, ರಾಜ್ಯ ಸರ್ಕಾರವು, ಸಂಬಂಧಪಟ್ಟ ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿದ ತರುವಾಯ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಮೇರೆಗೆ ವಾಣಿಜ್ಯ ಅಪೀಲು ನ್ಯಾಯಾಲಯಗಳಿಗೆ ಪ್ರದತ್ತವಾದ ಅಧಿಕಾರವ್ಯಾಪ್ತಿ ಮತ್ತು ಅಧಿಕಾರಗಳನ್ನು ಚಲಾಯಿಸುವ ಉದ್ದೇಶಗಳಿಗಾಗಿ ಜಿಲ್ಲಾ ನ್ಯಾಯಾಧೀಶರ ದರ್ಜೆಯಲ್ಲಿ ತಾನು ಅವಶ್ಯವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ವಾಣಿಜ್ಯ ಅಪೀಲು ನ್ಯಾಯಾಲಯಗಳನ್ನು ಗೊತ್ತುಪಡಿಸಬಹುದು.

**4. ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗದ ರಚನೆ.–** (1) ಸಾಮಾನ್ಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿ ಹೊಂದಿರುವ ಎಲ್ಲ ಉಚ್ಚ ನ್ಯಾಯಾಲಯಗಳಲ್ಲಿ, ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು ಆದೇಶದ ಮೂಲಕ, ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಅದರ ಅಧಿಕಾರವ್ಯಾಪ್ತಿಯನ್ನು ಮತ್ತು ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ, ಏಕ ನ್ಯಾಯಾಧೀಶನನ್ನು ಒಳಗೊಂಡ ಒಂದು ಅಥವಾ ಒಂದಕ್ಕಿಂತ ಹೆಚ್ಚು ನ್ಯಾಯಪೀಠಗಳನ್ನು ಒಳಗೊಂಡಿರುವ ವಾಣಿಜ್ಯ ವಿಭಾಗವನ್ನು ರಚಿಸಬಹುದು.

(2) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು, ವಾಣಿಜ್ಯ ವಿಭಾಗದ ನ್ಯಾಯಾಧೀಶನನ್ನಾಗಿ ವಾಣಿಜ್ಯ ವಿವಾದಗಳನ್ನು ವ್ಯವಹರಿಸುವಲ್ಲಿ ಅನುಭವ ಹೊಂದಿರುವಂಥ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ನಾಮನಿರ್ದೇಶನ ಮಾಡತಕ್ಕದ್ದು.

**5. ವಾಣಿಜ್ಯ ಅಪೀಲು ವಿಚಾರಣಾ ವಿಭಾಗದ ರಚನೆ.–** (1) 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಅಧಿಸೂಚನೆಯನ್ನು ಅಥವಾ 4ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಹೊರಡಿಸಿದ ತರುವಾಯ, ಸಂಬಂಧಪಟ್ಟ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು, ಅಧಿನಿಯಮದ ಮೂಲಕ ಪ್ರದತ್ತವಾದ ಅದರ ಅಧಿಕಾರವ್ಯಾಪ್ತಿ ಮತ್ತು ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ ಆದೇಶದ ಮೂಲಕ ಒಂದು ಅಥವಾ ಒಂದಕ್ಕಿಂತ ಹೆಚ್ಚು ವಿಭಾಗೀಯ ನ್ಯಾಯಪೀಠಗಳನ್ನು ಹೊಂದಿರುವ ವಾಣಿಜ್ಯ ಅಪೀಲು ವಿಭಾಗವನ್ನು ರಚಿಸತಕ್ಕದ್ದು.

(2) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯು, ವಾಣಿಜ್ಯ ವಿವಾದಗಳ ಬಗ್ಗೆ ವ್ಯವಹರಿಸುವಲ್ಲಿ ಅನುಭವ ಹೊಂದಿರುವಂಥ ಉಚ್ಚ ನ್ಯಾಯಾಲಯದ ನ್ಯಾಯಾಧೀಶರನ್ನು ವಾಣಿಜ್ಯ ಅಪೀಲು ವಿಭಾಗದ ನ್ಯಾಯಾಧೀಶರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದು.

6. **ವಾಣಿಜ್ಯ ನ್ಯಾಯಾಲಯದ ಅಧಿಕಾರವ್ಯಾಪ್ತಿ.–** ವಾಣಿಜ್ಯ ನ್ಯಾಯಾಲಯವು, ರಾಜ್ಯದ ಯಾವ ಪ್ರದೇಶದ ಮೇಲೆ ಅದಕ್ಕೆ ಪ್ರಾದೇಶಿಕ ಅಧಿಕಾರವ್ಯಾಪ್ತಿಯನ್ನು ನಿಹಿತಗೊಳಿಸಲಾಗಿದೆಯೋ ಆ ಇಡೀ ಪ್ರದೇಶದಿಂದ ಉದ್ಭವಿಸುವ, ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದಕ್ಕೆ ಸಂಬಂಧಪಟ್ಟ ಎಲ್ಲ ದಾವೆಗಳನ್ನು ಮತ್ತು ಅರ್ಜಿಗಳನ್ನು ಅಧಿವಿಚಾರಣೆ ಮಾಡಲು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದು.

*ವಿವರಣೆ.–* ಈ ಪ್ರಕರಣದ ಉದ್ದೇಶಗಳಿಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ 16 ರಿಂದ 20 ರವರೆಗಿನ ಪ್ರಕರಣಗಳ ಉಪಬಂಧಗಳ ಅನುಸಾರ, ಅಂಥ ವಾಣಿಜ್ಯ ವಿವಾದಕ್ಕೆ ಸಂಬಂಧಪಟ್ಟ ದಾವೆಯನ್ನು ಅಥವಾ ಅರ್ಜಿಯನ್ನು ಹೂಡಲಾಗಿದ್ದರೆ, ರಾಜ್ಯದ ಯಾವ ಪ್ರದೇಶದ ಮೇಲೆ ವಾಣಿಜ್ಯ ನ್ಯಾಯಾಲಯಕ್ಕೆ ಅಧಿಕಾರವ್ಯಾಪ್ತಿಯನ್ನು ನಿಹಿತಗೊಳಿಸಲಾಗಿದೆಯೋ, ಆ ಇಡೀ ಪ್ರದೇಶದಿಂದ ವಾಣಿಜ್ಯ ವಿವಾದವು ಉದ್ಭವಿಸಿದೆ ಎಂದು ಪರಿಗಣಿಸತಕ್ಕದ್ದು.

7. **ಉಚ್ಚ ನ್ಯಾಯಾಲಯಗಳ ವಾಣಿಜ್ಯ ವಿಭಾಗಗಳ ಅಧಿಕಾರವ್ಯಾಪ್ತಿ.–** ಸಾಮಾನ್ಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿ ಹೊಂದಿರುವ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದಗಳಿಗೆ ಸಂಬಂಧಪಟ್ಟ ಎಲ್ಲ ದಾವೆಗಳನ್ನು ಮತ್ತು ಅರ್ಜಿಗಳನ್ನು, ಆ ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗವು ವಿಚಾರಣೆ ಮಾಡತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು:

ಪರಂತು, ಅಧಿನಿಯಮದ ಮೂಲಕ ಗೊತ್ತುಪಡಿಸಿದ ಜಿಲ್ಲಾ ನ್ಯಾಯಾಲಯಕ್ಕಿಂತ ಕಡಿಮೆ ದರ್ಜೆಯಲ್ಲದ ನ್ಯಾಯಾಲಯದಲ್ಲಿ ದಾವೆ ಹೂಡಲು ಮತ್ತು ಉಚ್ಚ ನ್ಯಾಯಾಲಯದ ಮೂಲ ವಿಭಾಗದಲ್ಲಿ ದಾಖಲಿಸಿದ ಅಥವಾ ಇತ್ಯರ್ಥದಲ್ಲಿರುವ ವಾಣಿಜ್ಯ ವಿವಾದಗಳಿಗೆ ಸಂಬಂಧಪಟ್ಟ ಎಲ್ಲ ದಾವೆಗಳು ಮತ್ತು ಅರ್ಜಿಗಳನ್ನು, ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗವು ವಿಚಾರಣೆ ನಡೆಸತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು:

ಮತ್ತೂ ಪರಂತು, ವಿನ್ಯಾಸಗಳ ಅಧಿನಿಯಮ, 2000 (2000ದ 16)ದ 22ನೇ ಪ್ರಕರಣದ (4)ನೇ ಉಪಪ್ರಕರಣದ ಅಥವಾ ಪೇಟೆಂಟ್‌ಗಳ ಅಧಿನಿಯಮ, 1970 (1970ರ 39)ರ 104ನೇ ಪ್ರಕರಣದ ಬಲದಿಂದಾಗಿ ಉಚ್ಚ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿರುವ ಎಲ್ಲ ದಾವೆಗಳನ್ನು ಮತ್ತು ಅರ್ಜಿಗಳನ್ನು, ಯಾವ ಪ್ರದೇಶದ ಮೇಲೆ ಉಚ್ಚ ನ್ಯಾಯಾಲಯವು ಸಾಮಾನ್ಯ ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಚಲಾಯಿಸುತ್ತದೆಯೋ, ಆ ಎಲ್ಲ ಪ್ರದೇಶಗಳಲ್ಲಿ ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗವು ವಿಚಾರಣೆ ಮಾಡತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

8. **ಪುನರೀಕ್ಷಣಾ ಅರ್ಜಿಯ ವಿರುದ್ಧ ಪ್ರತಿಷೇಧ ಅಥವಾ ವಾದಕಾಲೀನ ಆದೇಶದ ವಿರುದ್ಧ ಅರ್ಜಿ.–** ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಅಧಿಕಾರವ್ಯಾಪ್ತಿಯ ವಿವಾದವೂ ಒಳಗೊಂಡಂತೆ, ವಾಣಿಜ್ಯ ನ್ಯಾಯಾಲಯದ ಯಾವುದೇ ವಾದಕಾಲೀನ ಆದೇಶದ ವಿರುದ್ಧ, ಯಾವುದೇ ಸಿವಿಲ್ ಪುನರೀಕ್ಷಣಾ ಅರ್ಜಿಯನ್ನು ಅಥವಾ ಮನವಿಯನ್ನು ಪುರಸ್ಕರಿಸತಕ್ಕದ್ದಲ್ಲ ಮತ್ತು 13ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ವಾಣಿಜ್ಯ ನ್ಯಾಯಾಲಯದ ಡಿಕ್ರಿಯ ವಿರುದ್ಧದ ಅಪೀಲಿನಲ್ಲಿ ಮಾತ್ರವೇ ಅಂಥ ಯಾವುದೇ ಆಕ್ಷೇಪಣೆಯನ್ನು ಎತ್ತತಕ್ಕದ್ದು.

9. [**ಬಿಟ್ಟುಬಿಡಲಾಗಿದೆ.**]

10. **ಮಧ್ಯಸ್ಥಿಕೆ ವಿಷಯಗಳ ಸಂಬಂಧದಲ್ಲಿ ಅಧಿಕಾರವ್ಯಾಪ್ತಿ.–** ಮಧ್ಯಸ್ಥಿಕೆಯ ವಸ್ತು–ವಿಷಯವು ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದವಾಗಿರುವಲ್ಲಿ ಮತ್ತು,–

(1) ಅಂಥ ಮಧ್ಯಸ್ಥಿಕೆಯು ಅಂತರರಾಷ್ಟ್ರೀಯ ವಾಣಿಜ್ಯ ಮಧ್ಯಸ್ಥಿಕೆಯಾಗಿದ್ದರೆ, ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ ಉಪಬಂಧಗಳ ಮೇರೆಗೆ, ಅಂಥ ಮಧ್ಯಸ್ಥಿಕೆಯಿಂದ ಉದ್ಭವಿಸುವ ಎಲ್ಲ ಅರ್ಜಿಗಳನ್ನು ಅಥವಾ ಅಪೀಲುಗಳನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದರೆ, ಅಂಥ ಉಚ್ಚ ನ್ಯಾಯಾಲಯದಲ್ಲಿ ಅಂಥ ವಾಣಿಜ್ಯ ವಿಭಾಗವನ್ನು ರಚಿಸಲಾಗಿದ್ದಲ್ಲಿ, ಆ ವಾಣಿಜ್ಯ ವಿಭಾಗವು ಆ ಅರ್ಜಿಗಳನ್ನು ಅಥವಾ ಅಪೀಲುಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

(2) ಅಂಥ ಮಧ್ಯಸ್ಥಿಕೆಯು, ಅಂತರರಾಷ್ಟ್ರೀಯ ವಾಣಿಜ್ಯ ಮಧ್ಯಸ್ಥಿಕೆಯ ಹೊರತಾಗಿದ್ದರೆ, ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ ಉಪಬಂಧಗಳ ಮೇರೆಗೆ ಅಂಥ ಮಧ್ಯಸ್ಥಿಕೆಯಿಂದ ಉದ್ಭವಿಸುವ ಎಲ್ಲ ಅರ್ಜಿಗಳನ್ನು ಅಥವಾ ಅಪೀಲುಗಳನ್ನು, ಉಚ್ಚ ನ್ಯಾಯಾಲಯದ ಮೂಲ ವಿಭಾಗದಲ್ಲಿ ಸಲ್ಲಿಸಲಾಗಿದ್ದರೆ ಅಂಥ ಉಚ್ಚ ನ್ಯಾಯಾಲಯದಲ್ಲಿ, ಅಂಥ ವಾಣಿಜ್ಯ ವಿಭಾಗವನ್ನು ರಚಿಸಲಾಗಿದ್ದಲ್ಲಿ, ವಾಣಿಜ್ಯ ವಿಭಾಗವು ಆ ಅರ್ಜಿಗಳನ್ನು ಅಥವಾ ಅಪೀಲುಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

(3) ಅಂಥ ಮಧ್ಯಸ್ಥಿಕೆಯು, ಅಂತರರಾಷ್ಟ್ರೀಯ ವಾಣಿಜ್ಯ ಮಧ್ಯಸ್ಥಿಕೆಯ ಹೊರತಾಗಿದ್ದರೆ, ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ ಉಪಬಂಧಗಳ ಮೇರೆಗೆ ಮಧ್ಯಸ್ಥಿಕೆಯಿಂದ ಉದ್ಭವಿಸುವ ಎಲ್ಲ ಅರ್ಜಿಗಳನ್ನು ಅಥವಾ ಅಪೀಲುಗಳನ್ನು ಅವುಗಳನ್ನು ಜಿಲ್ಲೆಯಲ್ಲಿ ಉಚ್ಚ ನ್ಯಾಯಾಲಯವಾಗಿರದ ಮೂಲ ಅಧಿಕಾರವ್ಯಾಪ್ತಿಯುಳ್ಳ ಯಾವುದೇ ಪ್ರಧಾನ ಸಿವಿಲ್ ನ್ಯಾಯಾಲಯದ ಮುಂದೆ ಸಲ್ಲಿಸಬಹುದಾಗಿದ್ದಲ್ಲಿ, ಅಂಥ ವಾಣಿಜ್ಯ ನ್ಯಾಯಾಲಯವನ್ನು ರಚಿಸಲಾಗಿದ್ದಲ್ಲಿ, ಅಂಥ ಮಧ್ಯಸ್ಥಿಕೆ ವಿಷಯಗಳ ಮೇಲೆ ಪ್ರಾದೇಶಿಕ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವ ವಾಣಿಜ್ಯ ನ್ಯಾಯಾಲಯವು, ಆ ಅರ್ಜಿಗಳನ್ನು ಅಥವಾ ಅಪೀಲುಗಳನ್ನು ವಿಚಾರಣೆ ಮಾಡತಕ್ಕದ್ದು ಮತ್ತು ವಿಲೆ ಮಾಡತಕ್ಕದ್ದು.

**11. ವಾಣಿಜ್ಯ ನ್ಯಾಯಾಲಯಗಳು ಮತ್ತು ವಾಣಿಜ್ಯ ವಿಭಾಗಗಳ ಅಧಿಕಾರವ್ಯಾಪ್ತಿಯ ಪ್ರತಿಷೇಧ.–** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ವಾಣಿಜ್ಯ ನ್ಯಾಯಾಲಯ ಅಥವಾ ವಾಣಿಜ್ಯ ವಿಭಾಗವು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನ ಮೇರೆಗೆ, ಯಾವ ವಿಷಯದ ಸಂಬಂಧದಲ್ಲಿ ಸಿವಿಲ್ ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ಸ್ಪಷ್ಟವಾಗಿಯಾಗಲೀ ಅಥವಾ ಇಂಗಿತವಾಗಿಯಾಗಲೀ ಪ್ರತಿಷೇಧಿಸಲಾಗಿದೆಯೋ ಆ ವಿಷಯದ ಸಂಬಂಧದಲ್ಲಿ ಯಾವುದೇ ವಾಣಿಜ್ಯ ವಿವಾದಕ್ಕೆ ಸಂಬಂಧಪಟ್ಟ ಯಾವುದೇ ದಾವೆ, ಅರ್ಜಿ ಅಥವಾ ವ್ಯವಹರಣೆಗಳನ್ನು ಪುರಸ್ಕರಿಸತಕ್ಕದ್ದಲ್ಲ ಅಥವಾ ತೀರ್ಮಾನಿಸತಕ್ಕದ್ದಲ್ಲ.

## ಅಧ್ಯಾಯ III

## ನಿರ್ದಿಷ್ಟಪಡಿಸಿದ ಮೌಲ್ಯ

**12. ನಿರ್ದಿಷ್ಟಪಡಿಸಿದ ಮೌಲ್ಯದ ನಿರ್ಧರಣೆ.–** (1) ವಾಣಿಜ್ಯ ವಿವಾದದ ವಸ್ತು–ವಿಷಯದ ದಾವೆಯಲ್ಲಿ, ಅಪೀಲಿನಲ್ಲಿ ಅಥವಾ ಅರ್ಜಿಯಲ್ಲಿ ನಿರ್ದಿಷ್ಟಪಡಿಸಿದ ಮೌಲ್ಯವನ್ನು ಈ ಕೆಳಕಂಡ ರೀತಿಯಲ್ಲಿ ತೀರ್ಮಾನಿಸತಕ್ಕದ್ದು,–

(ಎ) ದಾವೆಯಲ್ಲಿ ಅಥವಾ ಅರ್ಜಿಯಲ್ಲಿ ಕೋರಿದ ಪರಿಹಾರವು, ಹಣದ ವಸೂಲಾತಿಗಾಗಿ ಆಗಿದ್ದರೆ, ದಾವೆಯಲ್ಲಿ ಅಥವಾ ಅರ್ಜಿಯಲ್ಲಿ ವಸೂಲು ಮಾಡಬೇಕೆಂದು ಕೋರುವ ಹಣ ಬಡ್ಡಿಯೂ ಒಳಗೊಂಡಂತೆ ಯಾವುದಾದರೂ ಇದ್ದರೆ, ಸಂದರ್ಭಾನುಸಾರ ದಾವೆಯನ್ನು ಅಥವಾ ಅರ್ಜಿಯನ್ನು ಸಲ್ಲಿಸಿದ ದಿನಾಂಕದವರೆಗೆ ಲೆಕ್ಕಹಾಕಿ, ಅಂಥ ನಿರ್ದಿಷ್ಟಪಡಿಸಿದ ಮೌಲ್ಯವನ್ನು ತೀರ್ಮಾನಿಸುವುದಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು;

(ಬಿ) ದಾವೆಯಲ್ಲಿ, ಅಪೀಲಿನಲ್ಲಿ ಅಥವಾ ಅರ್ಜಿಯಲ್ಲಿ ಕೋರಿದ ಪರಿಹಾರವು ಚರಾಸ್ತಿಗೆ ಅಥವಾ ಅದರಲ್ಲಿನ ಹಕ್ಕಿಗೆ ಸಂಬಂಧಿಸಿರುವಲ್ಲಿ, ಸಂದರ್ಭಾನುಸಾರ, ಆ ದಾವೆಯನ್ನು, ಅಪೀಲನ್ನು ಅಥವಾ ಅರ್ಜಿಯನ್ನು ಸಲ್ಲಿಸಿದ ದಿನಾಂಕದಂದು ಇರುವಂತೆ ಚರಾಸ್ತಿಯ ಮಾರುಕಟ್ಟೆ ಮೌಲ್ಯವನ್ನು, ಅಂಥ ನಿರ್ದಿಷ್ಟಪಡಿಸಿದ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು;

(ಸಿ) ದಾವೆಯಲ್ಲಿ, ಅಪೀಲಿನಲ್ಲಿ ಅಥವಾ ಅರ್ಜಿಯಲ್ಲಿ ಕೋರಿದ ಪರಿಹಾರವು, ಚರಾಸ್ತಿಗೆ ಅಥವಾ ಅದರಲ್ಲಿನ ಹಕ್ಕಿಗೆ ಸಂಬಂಧಿಸಿರುವಲ್ಲಿ ಸಂದರ್ಭಾನುಸಾರ ಆ ದಾವೆ, ಅಪೀಲು ಅಥವಾ ಅರ್ಜಿಯನ್ನು ಸಲ್ಲಿಸಿದ ದಿನಾಂಕದಂದು ಇರುವಂತೆ, ಚರಾಸ್ತಿಯ ಮಾರುಕಟ್ಟೆ ಮೌಲ್ಯವನ್ನು ನಿರ್ದಿಷ್ಟಪಡಿಸಿದ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು; ಮತ್ತು

(ಡಿ) ದಾವೆಯಲ್ಲಿ, ಅಪೀಲಿನಲ್ಲಿ ಅಥವಾ ಅರ್ಜಿಯಲ್ಲಿ ಕೋರಿದ ಪರಿಹಾರವು, ಇತರೆ ಯಾವುದೇ ಅಮೂರ್ತ ಹಕ್ಕಿಗೆ ಸಂಬಂಧಿಸಿರುವಲ್ಲಿ, ವಾದಿಯು ಅಂದಾಜು ಮಾಡಿದಂತೆ ಸದರಿ ಹಕ್ಕುಗಳ ಮಾರುಕಟ್ಟೆ ಮೌಲ್ಯವನ್ನು, ನಿರ್ದಿಷ್ಟಪಡಿಸಿದ ಮೌಲ್ಯವನ್ನು ನಿರ್ಧರಿಸುವುದಕ್ಕಾಗಿ ಗಣನೆಗೆ ತೆಗೆದುಕೊಳ್ಳತಕ್ಕದ್ದು.

(2) ವಾಣಿಜ್ಯ ವಿವಾದದ ಮಧ್ಯಸ್ಥಿಕೆಯಲ್ಲಿ, ಕ್ಲೇಮು ಮತ್ತು ಎದುರು ಕ್ಲೇಮು ಯಾವುದಾದರೂ ಇದ್ದರೆ ಅದರ ವಿವರಣಪತ್ರದಲ್ಲಿ ನಿರೂಪಿತವಾದಂತೆ ಆ ಕ್ಲೇಮಿನ ಮತ್ತು ಎದುರು ಕ್ಲೇಮಿನ ಒಟ್ಟು ಮೌಲ್ಯವು ಅಂಥ ಮಧ್ಯಸ್ಥಿಕೆಯು, ಸಂದರ್ಭಾನುಸಾರ ವಾಣಿಜ್ಯ ವಿಭಾಗದ, ವಾಣಿಜ್ಯ ಅಪೀಲು ವಿಭಾಗದ ಅಥವಾ ವಾಣಿಜ್ಯ ನ್ಯಾಯಾಲಯದ ಅಧಿಕಾರವ್ಯಾಪ್ತಿಗೆ ಒಳಪಟ್ಟಿದೆಯೇ ಎಂಬುದನ್ನು ನಿರ್ಧರಿಸುವುದಕ್ಕೆ ಆಧಾರವಾಗಿರತಕ್ಕದ್ದು.

(3) ವಾಣಿಜ್ಯ ವಿಭಾಗವು ಅಥವಾ ವಾಣಿಜ್ಯ ನ್ಯಾಯಾಲಯವು, ವಾಣಿಜ್ಯ ವಿವಾದಗಳನ್ನು ವಿಚಾರಣೆ ಮಾಡುವ ಅಧಿಕಾರವ್ಯಾಪ್ತಿಯು ತನಗೆ ಇದೆಯೆಂದು ತೀರ್ಮಾನಿಸಿ ಮಾಡಿದ ಆದೇಶದ ವಿರುದ್ಧ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ 115ನೇ ಪ್ರಕರಣದ ವಿರುದ್ಧ ಸಂದರ್ಭಾನುಸಾರ ಅಪೀಲನ್ನು ಅಥವಾ ಸಿವಿಲ್ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

## ಅಧ್ಯಾಯ IIIಎ

## ಪೂರ್ವ–ಹೂಡಿಕೆ ಮಧ್ಯಸ್ಥಿಕೆ ಮತ್ತು ಇತ್ಯರ್ಥ

**12ಎ. ಪೂರ್ವ–ಹೂಡಿಕೆ ಮಧ್ಯಸ್ಥಿಕೆ ಮತ್ತು ಇತ್ಯರ್ಥ.–** (1) ಈ ಅಧಿನಿಯಮದ ಮೇರೆಗೆ ಯಾವುದೇ ತುರ್ತು ಮಧ್ಯಂತರ ಪರಿಹಾರವನ್ನು ಉದ್ದೇಶಿಸಿಲ್ಲದಿರುವ ದಾವೆಯನ್ನು, ಕೇಂದ್ರ ಸರ್ಕಾರವು ರಚಿಸಿದ ನಿಯಮಗಳ ಮೂಲಕ ನಿಯಮಿಸಬಹುದಾದಂಥ ರೀತಿ ಮತ್ತು ಕಾರ್ಯವಿಧಾನಕ್ಕೆ ಅನುಸಾರವಾಗಿ ವಾದಿಯು ಪೂರ್ವ–ಹೂಡಿಕೆ ಮಧ್ಯಸ್ಥಿಕೆಯ ಪರಿಹಾರದ ಎಲ್ಲ ಅವಕಾಶಗಳನ್ನು ಸಂಪೂರ್ಣವಾಗಿ ಬಳಸಿದ್ದ ಹೊರತು ಹೂಡತಕ್ಕದ್ದಲ್ಲ.

(2) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಪೂರ್ವ–ಹೂಡಿಕೆ ಮಧ್ಯಸ್ಥಿಕೆಯ ಉದ್ದೇಶಗಳಿಗಾಗಿ, ಕಾನೂನು ಸೇವೆಗಳ ಪ್ರಾಧಿಕಾರಗಳ ಅಧಿನಿಯಮ, 1987 (1987ರ 39)ರ ಮೇರೆಗೆ ರಚಿಸಲಾದ ಪ್ರಾಧಿಕಾರಗಳನ್ನು ಅಧಿಕೃತಗೊಳಿಸಬಹುದು.

(3) ಕಾನೂನು ಸೇವೆಗಳ ಪ್ರಾಧಿಕಾರಗಳ ಅಧಿನಿಯಮ, 1987 (1987ರ 39)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ, (2)ನೇ ಉಪಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ಅಧಿಕೃತಗೊಳಿಸಿದ ಪ್ರಾಧಿಕಾರವು, (1)ನೇ ಉಪಪ್ರಕರಣದ ಮೇರೆಗೆ ವಾದಿಯು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಮೂರು ತಿಂಗಳ ಅವಧಿಯೊಳಗೆ ಮಧ್ಯಸ್ಥಿಕೆಯ ಪ್ರಕ್ರಿಯೆಯನ್ನು ಪೂರ್ಣಗೊಳಿಸತಕ್ಕದ್ದು:

ಪರಂತು, ಮಧ್ಯಸ್ಥಿಕೆಯ ಅವಧಿಯನ್ನು, ಪಕ್ಷಕಾರರ ಸಮ್ಮತಿಯಿಂದ ಎರಡು ತಿಂಗಳುಗಳ ಮತ್ತಷ್ಟು ಅವಧಿಯವರೆಗೆ ವಿಸ್ತರಿಸಬಹುದು:

ಮತ್ತು ಪರಂತು, ಪೂರ್ವ–ಹೂಡಿಕೆ ಮಧ್ಯಸ್ಥಿಕೆಯಿಂದ ಪಕ್ಷಕಾರರು ಹೂಡಿಕೆ ಮಧ್ಯಸ್ಥಿಕೆ ಕಾರ್ಯದಲ್ಲಿ ನಿರತರಾಗಿದ್ದ ಅವಧಿಯನ್ನು, ಕಾಲಪರಿಮಿತಿ ಅಧಿನಿಯಮ, 1963 (1963ರ 36)ರ ಮೇರೆಗೆ ಕಾಲಪರಿಮಿತಿಯ ಉದ್ದೇಶಕ್ಕಾಗಿ ಅಂಥ ಅವಧಿಯನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

(4) ವಾಣಿಜ್ಯ ವಿವಾದದ ಪಕ್ಷಕಾರರು, ಇತ್ಯರ್ಥವನ್ನು ಒಪ್ಪಿಕೊಂಡರೆ, ಅದನ್ನು ಲಿಖಿತದಲ್ಲಿ ದಾಖಲಿಸತಕ್ಕದ್ದು ಮತ್ತು ವಿವಾದದ ಪಕ್ಷಕಾರರು ಮತ್ತು ಮಧ್ಯಸ್ಥಗಾರನು ಅದಕ್ಕೆ ಸಹಿ ಮಾಡತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಒಪ್ಪಿಕೊಂಡ ಇತ್ಯರ್ಥವನ್ನು, ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ 30ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ಒಪ್ಪಿತ ನಿಬಂಧನೆಗಳ ಮೇಲೆ ಮಧ್ಯಸ್ಥಿಕೆ ಐತೀರ್ಪು ಆಗಿದ್ದರೆ ಹೇಗೋ ಹಾಗೆ ಅದೇ ಸ್ಥಾನಮಾನ ಮತ್ತು ಪರಿಣಾಮವನ್ನು ಹೊಂದಿರತಕ್ಕದ್ದು.

## ಅಧ್ಯಾಯ IV

## ಅಪೀಲುಗಳು

**13. ವಾಣಿಜ್ಯ ನ್ಯಾಯಾಲಯ ಮತ್ತು ವಾಣಿಜ್ಯ ವಿಭಾಗಗಳ ಡಿಕ್ರಿಗಳಿಂದ ಅಪೀಲುಗಳು.–** (1) ಜಿಲ್ಲಾ ನ್ಯಾಯಾಧೀಶನ ಮಟ್ಟಕ್ಕಿಂತ ಕೆಳದರ್ಜೆಯ ವಾಣಿಜ್ಯ ನ್ಯಾಯಾಲಯದ ತೀರ್ಪು ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ತೀರ್ಪು ಅಥವಾ ಆದೇಶ ಹೊರಡಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ ವಾಣಿಜ್ಯ ಅಪೀಲು ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು.

(1ಎ) ವಾಣಿಜ್ಯ ನ್ಯಾಯಾಲಯದ ತೀರ್ಪಿನಿಂದ ಅಥವಾ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಸಂದರ್ಭಾನುಸಾರ, ಮೂಲ ಸಿವಿಲ್ ಅಧಿಕಾರವ್ಯಾಪ್ತಿಯನ್ನು ಚಲಾಯಿಸುವ ಜಿಲ್ಲಾ ನ್ಯಾಯಾಧೀಶನ ಅಥವಾ ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗವು ಹೊರಡಿಸಿದ ದಿನಾಂಕದಿಂದ ಆ ತೀರ್ಪನ್ನು ಅಥವಾ ಆದೇಶವನ್ನು ಅರವತ್ತು ದಿನಗಳ ಅವಧಿಯೊಳಗೆ ಆ ಉಚ್ಚ ನ್ಯಾಯಾಲಯದ ವಾಣಿಜ್ಯ ಅಪೀಲು ವಿಭಾಗಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಈ ಅಧಿನಿಯಮದ ಮತ್ತು ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ 37ನೇ ಪ್ರಕರಣದ ಮೂಲಕ ತಿದ್ದುಪಡಿಯಾದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಕ್ರಮಾದೇಶ XLIIIರ ಮೇರೆಗೆ ನಿರ್ದಿಷ್ಟವಾಗಿ ನಮೂದಿಸಿದ ವಾಣಿಜ್ಯ ವಿಭಾಗ ಅಥವಾ ವಾಣಿಜ್ಯ ನ್ಯಾಯಾಲಯವು ಹೊರಡಿಸಲಾದಂಥ ಆದೇಶಗಳ ವಿರುದ್ಧ ಅಪೀಲನ್ನು ಹೂಡತಕ್ಕದ್ದು.

(2) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಥವಾ ಉಚ್ಚ ನ್ಯಾಯಾಲಯದ ಪೇಟೆಂಟ್ ಪತ್ರಗಳಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಅಧಿನಿಯಮದ ಉಪಬಂಧಗಳಿಗೆ ಅನುಸಾರವಾಗಿ ಅಲ್ಲದೆ ಅನ್ಯಥಾ ವಾಣಿಜ್ಯ ವಿಭಾಗ ಅಥವಾ ವಾಣಿಜ್ಯ ನ್ಯಾಯಾಲಯದ ಯಾವುದೇ ಆದೇಶ ಅಥವಾ ಡಿಕ್ರಿಯ ವಿರುದ್ಧ ಯಾವುದೇ ಅಪೀಲನ್ನು ಹೂಡತಕ್ಕದ್ದಲ್ಲ.

**14. ಅಪೀಲುಗಳ ಶೀಘ್ರ ವಿಲೇವಾರಿ.–** ವಾಣಿಜ್ಯ ಅಪೀಲು ನ್ಯಾಯಾಲಯವು ಮತ್ತು ವಾಣಿಜ್ಯ ಅಪೀಲು ವಿಭಾಗವು ತನ್ನ ಮುಂದೆ ಸಲ್ಲಿಸಿದ ಅಪೀಲುಗಳನ್ನು ಅಂಥ ಅಪೀಲನ್ನು ಸಲ್ಲಿಸಿದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ವಿಲೇವಾರಿ ಮಾಡಲು ಪ್ರಯತ್ನಿಸತಕ್ಕದ್ದು.

## ಅಧ್ಯಾಯ V

## ಇತ್ಯರ್ಥದಲ್ಲಿರುವ ದಾವೆಗಳ ವರ್ಗಾವಣೆ

**15. ಇತ್ಯರ್ಥದಲ್ಲಿರುವ ಪ್ರಕರಣಗಳ ವರ್ಗಾವಣೆ.–** (1) ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ ಮೇರೆಗಿನ ಅರ್ಜಿಗಳೂ ಒಳಗೊಂಡಂತೆ, ಇತ್ಯರ್ಥಪಡಿಸಿದ ಮೌಲ್ಯದ ವಾಣಿಜ್ಯ ವಿವಾದಕ್ಕೆ ಸಂಬಂಧಪಡುವ ಎಲ್ಲ ದಾವೆಗಳನ್ನು ಮತ್ತು ಅರ್ಜಿಗಳನ್ನು, ಉಚ್ಚ ನ್ಯಾಯಾಲಯದಲ್ಲಿ ವಾಣಿಜ್ಯ ವಿಭಾಗವನ್ನು ರಚಿಸಿದ್ದರೆ, ಅದರ ವಾಣಿಜ್ಯ ವಿಭಾಗಕ್ಕೆ ವರ್ಗಾಯಿಸತಕ್ಕದ್ದು.

(2) ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ ಮೇರೆಗಿನ ಅರ್ಜಿಗಳೂ ಒಳಗೊಂಡಂತೆ, ಯಾವ ಜಿಲ್ಲೆಯ ಅಥವಾ ಪ್ರದೇಶದ ಸಂಬಂಧದಲ್ಲಿ ವಾಣಿಜ್ಯ ನ್ಯಾಯಾಲಯವನ್ನು ಸ್ಥಾಪಿಸಲಾಗಿದೆಯೋ ಆ ಜಿಲ್ಲೆಯಲ್ಲಿ ಅಥವಾ ಪ್ರದೇಶದಲ್ಲಿ

ಇರುವ ಸಿವಿಲ್ ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿರುವ ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದಕ್ಕೆ ಸಂಬಂಧಪಟ್ಟ ಎಲ್ಲಾ ದಾವೆಗಳನ್ನು ಮತ್ತು ಅರ್ಜಿಗಳನ್ನು ಅಂಥ ವಾಣಿಜ್ಯ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು:

ಪರಂತು, ವಾಣಿಜ್ಯ ವಿಭಾಗ ಅಥವಾ ವಾಣಿಜ್ಯ ನ್ಯಾಯಾಲಯದ ಸ್ಥಾಪನೆಗೂ ಮುಂಚೆ ನ್ಯಾಯಾಲಯವು ಅಂತಿಮ ತೀರ್ಪನ್ನು ಕಾಯ್ದಿರಿಸಿರುವಲ್ಲಿ, (1)ನೇ ಉಪಪ್ರಕರಣದ ಮೇರೆಗೆ ಆಗಲಿ ಅಥವಾ (2)ನೇ ಉಪಪ್ರಕರಣದ ಮೇರೆಗೆ ಆಗಲಿ ಯಾವುದೇ ದಾವೆ ಅಥವಾ ಅರ್ಜಿಯನ್ನು ವರ್ಗಾಯಿಸತಕ್ಕದ್ದಲ್ಲ.

(3) ಮಧ್ಯಸ್ಥಿಕೆ ಮತ್ತು ಸಂಧಾನ ಅಧಿನಿಯಮ, 1996 (1996ರ 26)ರ ಮೇರೆಗಿನ ಅರ್ಜಿಯೂ ಒಳಗೊಂಡಂತೆ, ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದಕ್ಕೆ ಸಂಬಂಧಪಟ್ಟ ಯಾವುದೇ ದಾವೆ ಅಥವಾ ಅರ್ಜಿಯು (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ವಾಣಿಜ್ಯ ವಿಭಾಗ ಅಥವಾ ವಾಣಿಜ್ಯ ನ್ಯಾಯಾಲಯಕ್ಕೆ ವರ್ಗಾವಣೆಗೊಳ್ಳತಕ್ಕದ್ದು. ಈ ಅಧಿನಿಯಮದ ಉಪಬಂಧಗಳು, ವರ್ಗಾವಣೆಯ ಕಾಲದಲ್ಲಿ ಪೂರ್ಣಗೊಂಡಿರದಿದ್ದ ಆ ಕಾರ್ಯವಿಧಾನಗಳಿಗೆ ಅನ್ವಯವಾಗತಕ್ಕದ್ದು.

(4) ಸಂದರ್ಭಾನುಸಾರ ವಾಣಿಜ್ಯ ವಿಭಾಗವು ಅಥವಾ ವಾಣಿಜ್ಯ ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಕ್ರಮಾದೇಶ XV-ಎ ಗೆ ಅನುಸಾರವಾಗಿ, ಅಂಥ ದಾವೆ ಅಥವಾ ಅರ್ಜಿಯನ್ನು ತ್ವರಿತವಾಗಿ ಮತ್ತು ಪರಿಣಾಮಕಾರಿ ವಿಲೇವಾರಿಗಾಗಿ ಹೊಸ ಕಾಲಮಿತಿಯನ್ನು ಅಥವಾ ಅವಶ್ಯವಿರಬಹುದಾದಂಥ ಹೆಚ್ಚಿನ ನಿರ್ದೇಶನಗಳನ್ನು ನಿಗದಿಪಡಿಸುವ ಸಲುವಾಗಿ, ಅಂಥ ವರ್ಗಾಯಿತ ದಾವೆ ಅಥವಾ ಅರ್ಜಿಯ ಸಂಬಂಧದಲ್ಲಿ ಪ್ರಕರಣ ನಿರ್ವಹಣೆ ವಿಚಾರಣೆಗಳನ್ನು ನಡೆಸಬಹುದು:

ಪರಂತು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಕ್ರಮಾದೇಶ Vರ ನಿಯಮ 1ರ ಉಪನಿಯಮ (1)ರ ಪರಂತುಕವು, ಅಂಥ ವರ್ಗಾಯಿತ ದಾವೆಗೆ ಅಥವಾ ಅರ್ಜಿಗೆ ಅನ್ವಯವಾಗತಕ್ಕದ್ದಲ್ಲ ಮತ್ತು ನ್ಯಾಯಾಲಯವು ತನ್ನ ವಿವೇಚನೆಯಲ್ಲಿ, ಯಾವ ಕಾಲಾವಧಿಯೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸತಕ್ಕದ್ದೋ ಆ ಕಾಲಾವಧಿಯನ್ನು ನಿಯಮಿಸಬಹುದು.

(5) ಉಪಪ್ರಕರಣ (1), (2)ನೇ ಉಪಪ್ರಕರಣ ಅಥವಾ (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ, ಅಂಥ ದಾವೆ ಅಥವಾ ಅರ್ಜಿಯು ವರ್ಗಾಯಿತವಾಗಿರದಂಥ ಸಂದರ್ಭದಲ್ಲಿ, ಉಚ್ಚ ನ್ಯಾಯಾಲಯದ ವಾಣಿಜ್ಯ ಅಪೀಲು ವಿಭಾಗವು, ದಾವೆಯ ಯಾರೇ ಪಕ್ಷಕಾರರು ದಾವೆಗೆ ಅರ್ಜಿಯನ್ನು ಸಲ್ಲಿಸಿದ ಮೇಲೆ, ಯಾವ ನ್ಯಾಯಾಲಯದ ಮುಂದೆ ಪ್ರಕರಣವು ಇತ್ಯರ್ಥದಲ್ಲಿರುವುದೋ ಆ ನ್ಯಾಯಾಲಯದಿಂದ ಅಂಥ ದಾವೆ ಅಥವಾ ಅರ್ಜಿಯನ್ನು ಹಿಂಪಡೆಯಬಹುದು ಮತ್ತು ಸಂದರ್ಭಾನುಸಾರ, ಅಂಥ ದಾವೆ ಮೇಲೆ ಪ್ರಾದೇಶಿಕ ಅಧಿಕಾರವ್ಯಾಪ್ತಿ ಹೊಂದಿರುವ ವಾಣಿಜ್ಯ ವಿಭಾಗಕ್ಕೆ ಅಥವಾ ವಾಣಿಜ್ಯ ನ್ಯಾಯಾಲಯಕ್ಕೆ ಅಧಿವಿಚಾರಣೆ ಮಾಡುವುದಕ್ಕಾಗಿ ಅಥವಾ ವಿಲೇವಾರಿಗಾಗಿ ಅದನ್ನು ವರ್ಗಾಯಿಸತಕ್ಕದ್ದು ಮತ್ತು ಅಂಥ ವರ್ಗಾವಣೆಯ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಬದ್ಧವಾಗಿರತಕ್ಕದ್ದು.

## ಅಧ್ಯಾಯ VI

### ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಉಪಬಂಧಗಳಿಗೆ ತಿದ್ದುಪಡಿಗಳು

**16. ಸಿವಿಲ್ ಪ್ರಕ್ರಿಯಾ ಸಂಹಿತೆ, 1908ನ್ನು ವಾಣಿಜ್ಯ ವಿವಾದಗಳಿಗೆ ಅನ್ವಯಿಸುವಲ್ಲಿ ಅದಕ್ಕೆ ತಿದ್ದುಪಡಿಗಳು.–** (1) ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದದ ಸಂಬಂಧದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಉಪಬಂಧಗಳನ್ನು ಅನ್ವಯಿಸುವಲ್ಲಿ, ಆ ಉಪಬಂಧಗಳು ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದಂಥ ರೀತಿಯಲ್ಲಿ ತಿದ್ದುಪಡಿಗೊಳ್ಳತಕ್ಕದ್ದು.

(2) ವಾಣಿಜ್ಯ ವಿಭಾಗ ಮತ್ತು ವಾಣಿಜ್ಯ ನ್ಯಾಯಾಲಯವು, ಈ ಅಧಿನಿಯಮಕ್ಕೆ ತಿದ್ದುಪಡಿಯಾದಂತೆ, ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದದ ಸಂಬಂಧದಲ್ಲಿ ದಾವೆಯನ್ನು ಅಧಿವಿಚಾರಣೆ ಮಾಡುವಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಉಪಬಂಧಗಳನ್ನು ಅನುಸರಿಸತಕ್ಕದ್ದು.

(3) ರಾಜ್ಯ ಸರ್ಕಾರವು, ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಉಚ್ಚ ನ್ಯಾಯಾಲಯದ ಯಾವುದೇ ನಿಯಮದ ಯಾವುದೇ ಉಪಬಂಧಗಳು ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ಕ್ಕೆ ಮಾಡಿದ ಯಾವುದೇ ತಿದ್ದುಪಡಿಯು, ಈ ಅಧಿನಿಯಮದ ಮೂಲಕ ತಿದ್ದುಪಡಿಯಾದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಉಪಬಂಧಗಳಿಗೆ ವಿರುದ್ಧವಾಗಿರುವಲ್ಲಿ, ಈ ಅಧಿನಿಯಮಕ್ಕೆ ಮಾಡಿದ ತಿದ್ದುಪಡಿಯಾದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಉಪಬಂಧಗಳು ಪ್ರಭಾವವುಳ್ಳವುಗಳಾಗಿರತಕ್ಕದ್ದು.

## ಅಧ್ಯಾಯ VII

### ಸಂಕೀರ್ಣ

17. **ವಾಣಿಜ್ಯ ನ್ಯಾಯಾಲಯಗಳು, ವಾಣಿಜ್ಯ ಅಪೀಲು ನ್ಯಾಯಾಲಯಗಳು, ವಾಣಿಜ್ಯ ವಿಭಾಗವು ಮತ್ತು ವಾಣಿಜ್ಯ ಅಪೀಲು ವಿಭಾಗಗಳಿಂದ ದತ್ತಾಂಶ ಸಂಗ್ರಹಣೆ ಮತ್ತು ಬಹಿರಂಗಪಡಿಸುವಿಕೆ.–** ಸಂದರ್ಭಾನುಸಾರ, ವಾಣಿಜ್ಯ ನ್ಯಾಯಾಲಯಗಳು, ವಾಣಿಜ್ಯ ಅಪೀಲು ನ್ಯಾಯಾಲಯಗಳು, ವಾಣಿಜ್ಯ ವಿಭಾಗ ಅಥವಾ ವಾಣಿಜ್ಯ ಅಪೀಲು ವಿಭಾಗ ಇವುಗಳ ಮುಂದೆ ಸಲ್ಲಿಸಿದ ದಾವೆಗಳು, ಅರ್ಜಿಗಳು, ಅಪೀಲುಗಳು ಅಥವಾ ರಿಟ್ ಅರ್ಜಿಗಳ ಸಂಖ್ಯೆಯನ್ನು ಕುರಿತ ಅಂಕಿಅಂಶಗಳ ದತ್ತಾಂಶವು, ಇತ್ಯರ್ಥದಲ್ಲಿರುವ ಅಂಥ ಪ್ರಕರಣಗಳು, ಪ್ರತಿಯೊಂದು ಪ್ರಕರಣದ ಸ್ಥಿತಿಗತಿ ಮತ್ತು ವಿಲೆ ಮಾಡಲಾದ ಪ್ರಕರಣಗಳ ಸಂಖ್ಯೆಯನ್ನು ನಿರ್ವಹಿಸತಕ್ಕದ್ದು ಮತ್ತು ಈ ಸಂಖ್ಯೆಯನ್ನು ಪ್ರತಿಯೊಂದು ವಾಣಿಜ್ಯ ನ್ಯಾಯಾಲಯಗಳು, ವಾಣಿಜ್ಯ ಅಪೀಲು ನ್ಯಾಯಾಲಯಗಳು, ವಾಣಿಜ್ಯ ವಿಭಾಗ, ವಾಣಿಜ್ಯ ಅಪೀಲು ವಿಭಾಗವು ಪ್ರತಿ ತಿಂಗಳು ಅದನ್ನು ಇಂದೀಕರಿಸತಕ್ಕದ್ದು ಮತ್ತು ಸಂಬಂಧಪಟ್ಟ ಉಚ್ಚ ನ್ಯಾಯಾಲಯದ ವೆಬ್‌ಸೈಟ್‌ನಲ್ಲಿ ಅದನ್ನು ಪ್ರಕಟಿಸತಕ್ಕದ್ದು.

18. **ನಿರ್ದೇಶನಗಳನ್ನು ನೀಡಲು ಉಚ್ಚ ನ್ಯಾಯಾಲಯದ ಅಧಿಕಾರ.–** ಉಚ್ಚ ನ್ಯಾಯಾಲಯವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಅಥವಾ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಅಧ್ಯಾಯ IIರ ಉಪಬಂಧಗಳನ್ನು ಪೂರಕಗೊಳಿಸಲು, ನಿರ್ದಿಷ್ಟಪಡಿಸಿದ ಮೌಲ್ಯದ ವಾಣಿಜ್ಯ ವಿವಾದಗಳ ವಿಚಾರಣೆಗೆ ಅನ್ವಯಿಸುವಷ್ಟರಮಟ್ಟಿಗೆ ವೃತ್ತಿಪರ ನಿರ್ದೇಶನಗಳನ್ನು ನೀಡಬಹುದು.

19. **ಮೂಲಭೂತ ಸೌಕರ್ಯ ಸೌಲಭ್ಯಗಳು.–** ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದ, ವಾಣಿಜ್ಯ ನ್ಯಾಯಾಲಯದ ಅಥವಾ ವಾಣಿಜ್ಯ ವಿಭಾಗದ ಕಾರ್ಯನಿರ್ವಹಣೆಗೆ ಅನುಕೂಲವಾಗುವಂಥ ಅವಶ್ಯಕ ಮೂಲಭೂತ ಸೌಕರ್ಯವನ್ನು ಒದಗಿಸತಕ್ಕದ್ದು.

20. **ತರಬೇತಿ ಮತ್ತು ನಿರಂತರ ಶಿಕ್ಷಣ.–** ರಾಜ್ಯ ಸರ್ಕಾರವು, ಉಚ್ಚ ನ್ಯಾಯಾಲಯದೊಂದಿಗೆ ಸಮಾಲೋಚಿಸಿ, ವಾಣಿಜ್ಯ ನ್ಯಾಯಾಲಯಗಳು, ವಾಣಿಜ್ಯ ಅಪೀಲು ನ್ಯಾಯಾಲಯಗಳು, ವಾಣಿಜ್ಯ ವಿಭಾಗ ಅಥವಾ ವಾಣಿಜ್ಯ ಅಪೀಲು ವಿಭಾಗಕ್ಕೆ ಯಾವ ನ್ಯಾಯಾಧೀಶರನ್ನು ನೇಮಕ ಮಾಡಬಹುದಾಗಿದೆಯೋ ಆ ನ್ಯಾಯಾಧೀಶರ ತರಬೇತಿಗಾಗಿ ಅವಶ್ಯಕ ಸೌಲಭ್ಯಗಳನ್ನು ಕಲ್ಪಿಸಬಹುದು.

21. **ಅಧಿನಿಯಮವು ಅಧ್ಯಾರೋಹಿ ಪರಿಣಾಮ ಹೊಂದಿರುವುದು.–** ಅನ್ಯಥಾ ಉಪಬಂಧಿಸಿದುದನ್ನುಳಿದು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮದ ಹೊರತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಕಾರಣದಿಂದಾಗಿ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತ ಪತ್ರದಲ್ಲಿ ಅದಕ್ಕೆ ಅಸಂಗತವಾದುದು ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಉಪಬಂಧಗಳು ಪರಿಣಾಮಕಾರಿಯಾಗಿರತಕ್ಕದ್ದು.

21ಎ. **ನಿಯಮಗಳನ್ನು ರಚಿಸಲು ಕೇಂದ್ರ ಸರ್ಕಾರದ ಅಧಿಕಾರ.–** (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಈ ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳನ್ನು ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 12ಎ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ಪೂರ್ವ–ಹೂಡಿಕೆ ಮಧ್ಯಸ್ಥಿಕೆಯ ರೀತಿ ಮತ್ತು ಕಾರ್ಯವಿಧಾನ;

(ಬಿ) ಕೇಂದ್ರ ಸರ್ಕಾರವು, ಯಾವ ವಿಷಯವನ್ನು ಅಗತ್ಯಪಡಿಸಬೇಕಾಗಿದೆಯೋ ಅಥವಾ ಅಗತ್ಯಪಡಿಸಬಹುದಾಗಿದೆಯೋ ಅಥವಾ ಯಾವ ವಿಷಯದ ಸಂಬಂಧದಲ್ಲಿ ನಿಯಮಗಳ ಮೂಲಕ ಉಪಬಂಧವನ್ನು ಕಲ್ಪಿಸಲಾಗಿದೆಯೋ ಅಥವಾ ಕಲ್ಪಿಸಬಹುದಾಗಿದೆಯೋ ಆ ಯಾವುದೇ ಇತರೆ ವಿಷಯ.

(3) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ, ಆ ನಿಯಮವು, ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**22. ತೊಂದರೆಗಳನ್ನು ನಿವಾರಿಸುವ ಅಧಿಕಾರ.–** (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಗಳು ಉದ್ಭವಿಸಿದರೆ, ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ, ಆ ತೊಂದರೆಗಳನ್ನು ನಿವಾರಿಸಲು ಅವಶ್ಯಕವೆಂದು ಅಥವಾ ವಿಹಿತವೆಂದು ತನಗೆ ಕಂಡುಬರುವಂಥ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಮಟ್ಟಿಗೆ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಎರಡು ವರ್ಷಗಳ ಅವಧಿಯ ಮುಕ್ತಾಯದ ನಂತರ ಈ ಪ್ರಕರಣದ ಮೇರೆಗೆ ಅಂಥ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ಮಾಡಿದ ಪ್ರತಿಯೊಂದು ಆದೇಶವನ್ನು ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.

**23. ನಿರಸನ ಮತ್ತು ಉಳಿಸುವಿಕೆ.–** (1) ಉಚ್ಚ ನ್ಯಾಯಾಲಯಗಳ ವಾಣಿಜ್ಯ ನ್ಯಾಯಾಲಯಗಳು, ವಾಣಿಜ್ಯ ವಿಭಾಗ ಮತ್ತು ವಾಣಿಜ್ಯ ಅಪೀಲು ವಿಭಾಗ ಅಧ್ಯಾದೇಶ, 2015 (2015 ರ ಅಧ್ಯಾದೇಶ 8)ಅನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನ ಏನೇ ಇದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

**ಅನುಸೂಚಿ**

**(16ನೇ ಪ್ರಕರಣವನ್ನು ನೋಡಿ)**

**1. 26ನೇ ಪ್ರಕರಣದ ತಿದ್ದುಪಡಿ.–** ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5)ರ (ಇಲ್ಲಿ ಇನ್ನು ಮುಂದೆ ಸಂಹಿತೆ ಎಂದು ಉಲ್ಲೇಖಿಸಲಾಗಿದೆ) 26ನೇ ಪ್ರಕರಣದಲ್ಲಿ (2)ನೇ ಉಪಪ್ರಕರಣದಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಅಂಥ ಅಫಿಡಾವಿಟ್, ಕ್ರಮಾದೇಶ VI, ನಿಯಮ 15ಎ ಅಡಿಯಲ್ಲಿ ನಿಯಮಿಸಲಾದ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಇರತಕ್ಕದ್ದು.".

**2. 35ನೇ ಪ್ರಕರಣಕ್ಕೆ ಬದಲಾಗಿ ಹೊಸ ಪ್ರಕರಣವನ್ನು ಪ್ರತ್ಯಾಯೋಜಿಸುವುದು.–** ಸಂಹಿತೆಯ 35ನೇ ಪ್ರಕರಣಕ್ಕೆ ಬದಲಾಗಿ ಈ ಮುಂದಿನ ಪ್ರಕರಣವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"**35. ಖರ್ಚುಗಳು.–** (1) ಯಾವುದೇ ವಾಣಿಜ್ಯ ವಿವಾದದ ಸಂಬಂಧದಲ್ಲಿ, ನ್ಯಾಯಾಲಯವು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಅಥವಾ ನಿಯಮದಲ್ಲಿ ಏನೇ ಒಳಗೊಂಡಿದ್ದರೂ,–

(ಎ) ಒಬ್ಬ ಪಕ್ಷಕಾರನಿಂದ ಇನ್ನೊಬ್ಬ ಪಕ್ಷಕಾರನಿಗೆ ಖರ್ಚುಗಳು ಸಂದಾಯವಾಗತಕ್ಕವುಗಳೇ ಎಂಬುದನ್ನು;

(ಬಿ) ಆ ಖರ್ಚುಗಳ ಪ್ರಮಾಣ; ಮತ್ತು

(ಸಿ) ಯಾವಾಗ ಅವುಗಳನ್ನು ಸಂದಾಯ ಮಾಡಬೇಕಾದುದು ಎಂಬುದನ್ನು

– ತೀರ್ಮಾನಿಸಲು ವಿವೇಚನಾಧಿಕಾರವನ್ನು ಹೊಂದಿರುತ್ತದೆ.

**ವಿವರಣೆ.–** ಖಂಡ (ಎ)ನ ಉದ್ದೇಶಕ್ಕಾಗಿ, "ಖರ್ಚುಗಳು" ಎಂದರೆ:–

(i) ಸಾಕ್ಷಿದಾರರು ಭರಿಸಿದ ಫೀಜುಗಳು ಮತ್ತು ವೆಚ್ಚಗಳಿಗೆ;

(ii) ಭರಿಸಿದ ಕಾನೂನು ಫೀಜುಗಳು ಮತ್ತು ವೆಚ್ಚಗಳಿಗೆ;

(iii) ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಭರಿಸಿದ ಯಾವುದೇ ಇತರ ವೆಚ್ಚಗಳಿಗೆ

– ಸಂಬಂಧಪಡುವ ಸೂಕ್ತ ವೆಚ್ಚಗಳು.

(2) ನ್ಯಾಯಾಲಯವು, ಖರ್ಚುಗಳ ಸಂದಾಯಕ್ಕಾಗಿ ಆದೇಶವನ್ನು ಮಾಡಲು ನಿರ್ಧರಿಸಿದರೆ, ಸೋತ ಪಕ್ಷಕಾರನು ಗೆದ್ದ ಪಕ್ಷಕಾರನ ಖರ್ಚುಗಳನ್ನು ಸಂದಾಯ ಮಾಡಬೇಕೆಂದು ಆದೇಶಿಸತಕ್ಕದ್ದೆಂಬುದು ಸಾಮಾನ್ಯ ನಿಯಮ:

ಪರಂತು, ನ್ಯಾಯಾಲಯವು, ಲಿಖಿತದಲ್ಲಿ ಕಾರಣಗಳನ್ನು ದಾಖಲ್ಮಾಡಿ ಸಾಮಾನ್ಯ ನಿಯಮವನ್ನು ಪಲ್ಲಟಗೊಳಿಸಿ ಆದೇಶ ಮಾಡಬಹುದು.

*ದೃಷ್ಟಾಂತ*

ವಾದಿಯು, ತನ್ನ ದಾವೆಯಲ್ಲಿ, ಕರಾರು ಉಲ್ಲಂಘನೆಗಾಗಿ ಮತ್ತು ಹಾನಿಯ ಹಣದ ಸಲುವಾಗಿ ಡಿಕ್ರಿ ನೀಡುವಂತೆ ಕೋರಿದ್ದರೆ, ವಾದಿಯ ಹಣಕ್ಕಾಗಿನ ಡಿಕ್ರಿಗೆ ಹಕ್ಕುಳ್ಳವನಾಗಿರುವನೆಂದು ತೀರ್ಮಾನಿಸುತ್ತದೆ. ಆದಾಗ್ಯೂ, ಹಾನಿಗಾಗಿನ ಕ್ಲೇಮು, ಕ್ಷುಲ್ಲಕ ಮತ್ತು ಕಿರುಕುಳಕಾರಿಯಾದುದೆಂದು ಕ್ಲೇಮನ್ನು ಹಿಂದಿರುಗಿಸುವ ತೀರ್ಮಾನಕ್ಕೆ ಬರಬಹುದು.

ಅಂಥ ಸಂದರ್ಭಗಳಲ್ಲಿ ವಾದಿಯು ಜಯಗಳಿಸಿದ್ದರೂ, ಹಾನಿಗಾಗಿ ಕ್ಷುಲ್ಲಕ ಕ್ಲೇಮನ್ನು ಎತ್ತಿದ್ದರಿಂದ ನ್ಯಾಯಾಲಯವು ವಾದಿಯ ಮೇಲೆ ಖರ್ಚುಗಳನ್ನು ವಿಧಿಸಬಹುದು.

(3) ಖರ್ಚುಗಳನ್ನು ಸಂದಾಯ ಮಾಡಲು ಆದೇಶವನ್ನು ಮಾಡುವಾಗ ನ್ಯಾಯಾಲಯವು, ಈ ಮುಂದಿನ ಪರಿಸ್ಥಿತಿಗಳನ್ನು ಎಂದರೆ:–

(ಎ) ಪಕ್ಷಕಾರರ ನಡತೆ;

(ಬಿ) ತನ್ನ ಮೊಕದ್ದಮೆಯಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಿರದಿದ್ದರೂ, ಪಕ್ಷಕಾರನು ತನ್ನ ಆ ಮೊಕದ್ದಮೆಯಲ್ಲಿ ಭಾಗಶಃ ಯಶಸ್ವಿಯಾಗಿರುವನೇ;

(ಸಿ) ಪಕ್ಷಕಾರನು ಮೊಕದ್ದಮೆಯ ವಿಲೆಗೆ ವಿಳಂಬವಾಗುವುದಕ್ಕೆ ಕಾರಣವಾಗಿರುವ ಕ್ಷುಲ್ಲಕ ಪ್ರತಿ ಕ್ಲೇಮನ್ನು ಮಾಡಿದ್ದಾನೆಯೇ;

(ಡಿ) ಇತ್ಯರ್ಥ ಮಾಡಿಕೊಳ್ಳುವ ಸಂಬಂಧದಲ್ಲಿ ಯಾವುದೇ ಸೂಕ್ತ ಬೇಡಿಕೆಯನ್ನು ಪಕ್ಷಕಾರನು ಮಾಡಿದ್ದಾನೆಯೇ ಮತ್ತು ಮತ್ತೊಬ್ಬ ಪಕ್ಷಕಾರನು ಕಾರಣವಿಲ್ಲದೇ ಅದನ್ನು ತಿರಸ್ಕರಿಸಿದ್ದಾನೆಯೇ; ಮತ್ತು

(ಇ) ಪಕ್ಷಕಾರನು ಕ್ಷುಲ್ಲಕ ಕ್ಲೇಮು ಮಾಡಿದ್ದಾನೆಯೇ ಮತ್ತು ನ್ಯಾಯಾಲಯದ ಸಮಯವನ್ನು ಹಾಳು ಮಾಡುವ ಕಿರುಕುಳಕಾರಿ ವ್ಯವಹರಣೆಯನ್ನು ಹೂಡಿದ್ದಾನೆಯೇ

– ಎಂಬುದನ್ನು ಒಳಗೊಂಡ ಸಂದರ್ಭ ಸನ್ನಿವೇಶಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

(4) ಈ ಉಪಬಂಧದ ಮೇರೆಗೆ ನ್ಯಾಯಾಲಯವು ಯಾವ ಆದೇಶಗಳನ್ನು ಮಾಡಬಹುದೋ ಆ ಆದೇಶವು, ಪಕ್ಷಕಾರನು ಕೆಳಗಿನವುಗಳನ್ನು ಸಂದಾಯ ಮಾಡಬೇಕೆಂಬುದನ್ನು ಒಳಗೊಂಡಿರಬೇಕು,–

(ಎ) ಮತ್ತೊಬ್ಬ ಪಕ್ಷಕಾರನ ಖರ್ಚಿನ ಪ್ರಮಾಣ;

(ಬಿ) ಮತ್ತೊಬ್ಬ ಪಕ್ಷಕಾರನ ಖರ್ಚುಗಳ ಸಂಬಂಧದಲ್ಲಿ ಸೂಚಿಸಿದ ಮೊಬಲಗು;

(ಸಿ) ನಿರ್ದಿಷ್ಟ ದಿನಾಂಕದಿಂದ ಅಥವಾ ನಿರ್ದಿಷ್ಟ ದಿನಾಂಕದವರೆಗಿನ ಖರ್ಚುಗಳು;

(ಡಿ) ವ್ಯವಹರಣೆಗಳ ಪ್ರಾರಂಭಕ್ಕೆ ಮುಂಚೆ ಭರಿಸಲಾದ ಖರ್ಚುಗಳು;

(ಇ) ವ್ಯವಹರಣೆಗಳ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಸಂಬಂಧಪಟ್ಟಂಥ ಖರ್ಚುಗಳು;

(ಎಫ್) ವ್ಯವಹರಣೆಗಳ ಬೇರೆ ಬೇರೆ ಭಾಗಕ್ಕೆ ಸಂಬಂಧಪಟ್ಟಂಥ ಖರ್ಚುಗಳು; ಮತ್ತು

(ಜಿ) ನಿರ್ದಿಷ್ಟ ದಿನಾಂಕದಿಂದ ಅಥವಾ ನಿರ್ದಿಷ್ಟ ದಿನಾಂಕದವರೆಗಿನ ಖರ್ಚುಗಳ ಮೇಲಿನ ಬಡ್ಡಿ.".

**3. 35ಎ ಪ್ರಕರಣದ ತಿದ್ದುಪಡಿ.–** ಸಂಹಿತೆಯ 35ಎ ಪ್ರಕರಣದಲ್ಲಿ, (2)ನೇ ಉಪಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**4. ಮೊದಲನೇ ಅನುಸೂಚಿಯ ತಿದ್ದುಪಡಿ.–** ಸಂಹಿತೆಯ ಮೊದಲ ಅನುಸೂಚಿಯಲ್ಲಿ,–

(ಎ) ಕ್ರಮಾದೇಶ Vರಲ್ಲಿ 1ನೇ ನಿಯಮದಲ್ಲಿ, (1)ನೇ ಉಪನಿಯಮದಲ್ಲಿ, ಎರಡನೇ ಪರಂತುಕದ ಬದಲಾಗಿ ಈ ಕೆಳಕಂಡ ಪರಂತುಕವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಸದರಿ ಮೂವತ್ತು ದಿನಗಳ ಅವಧಿಯೊಳಗೆ ಲಿಖಿತ ಹೇಳಿಕೆಯನ್ನು ದಾಖಲಿಸಲು ಪ್ರತಿವಾದಿಯು ವಿಫಲನಾದಲ್ಲಿ, ನ್ಯಾಯಾಲಯವು ಆ ಬಗ್ಗೆ ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ, ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ಇತರ ದಿನದಂದು ಮತ್ತು ನ್ಯಾಯಾಲಯವು ಸೂಕ್ತವೆಂದು ಭಾವಿಸಬಹುದಾದಂಥ ವೆಚ್ಚವನ್ನು ಸಂದಾಯ ಮಾಡಿದ ಮೇಲೆ, ಲಿಖಿತ ಹೇಳಿಕೆಯನ್ನು ದಾಖಲ್ಮಾಡಲು ಅವನಿಗೆ ಅನುಮತಿ ನೀಡತಕ್ಕದ್ದು, ಆದರೆ, ಅಂಥ ದಿನಾಂಕವು ಸಮನ್ ಜಾರಿಗೊಳಿಸಿದ ದಿನಾಂಕದಿಂದ ನೂರಾ ಇಪ್ಪತ್ತು ದಿನಗಳಿಗೆ ಮೀರದ ದಿನಾಂಕವಾಗಿರತಕ್ಕದ್ದು ಮತ್ತು ಸಮನ್ ಜಾರಿಗೊಳಿಸಿದ ನೂರಾ ಇಪ್ಪತ್ತು ದಿನಗಳು ಮುಕ್ತಾಯವಾದ ತರುವಾಯ ಪ್ರತಿವಾದಿಯು ಲಿಖಿತ ಹೇಳಿಕೆಯನ್ನು ದಾಖಲ್ಮಾಡುವ ಹಕ್ಕು ಮುಟ್ಟುಗೋಲು ಆಗತಕ್ಕದ್ದು ಮತ್ತು ನ್ಯಾಯಾಲಯವು ಲಿಖಿತ ಹೇಳಿಕೆಯನ್ನು ದಾಖಲಿಸಲು ಅನುಮತಿ ನೀಡತಕ್ಕದ್ದಲ್ಲ.";

(ಬಿ) ಕ್ರಮಾದೇಶ VIರಲ್ಲಿ,–

(i) 3ನೇ ನಿಯಮದ ತರುವಾಯ, ಈ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

"**3ಎ. ವಾಣಿಜ್ಯ ನ್ಯಾಯಾಲಯಗಳಲ್ಲಿ ವಾದ ಪತ್ರದ ನಮೂನೆಗಳು.–** ವಾಣಿಜ್ಯ ವಿವಾದದ ಉಚ್ಚ ನ್ಯಾಯಾಲಯ ನಿಯಮಗಳ ಮೇರೆಗೆ ಅಥವಾ ಅಂಥ ವಾಣಿಜ್ಯ ವಿವಾದಗಳ ಉದ್ದೇಶಕ್ಕಾಗಿ ಕಾರ್ಯವಿಧಾನ ನಿರ್ದೇಶನಗಳ ಮೇರೆಗೆ ವಾದಪತ್ರಗಳ ನಮೂನೆಗಳನ್ನು ನಿಯಮಿಸಿದಲ್ಲಿ, ವಾದ ಪ್ರತಿವಾದ ಪತ್ರಗಳು ಅಂಥ ನಮೂನೆಗಳಲ್ಲಿ ಇರತಕ್ಕದ್ದು.";

(ii) 15ನೇ ನಿಯಮದ ತರುವಾಯ, ಈ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

"**15ಎ. ವಾಣಿಜ್ಯ ವಿವಾದಗಳಲ್ಲಿ ವಾದ ಪತ್ರಗಳ ಸತ್ಯಾಪನೆ.–** (1) ನಿಯಮ 15ರಲ್ಲಿ ಏನೇ ಒಳಗೊಂಡಿದ್ದರೂ, ವಾಣಿಜ್ಯ ವಿವಾದದಲ್ಲಿಯ ಪ್ರತಿಯೊಂದು ವಾದಪತ್ರವನ್ನು ಈ ಅನುಸೂಚಿಯ ಪರಿಶಿಷ್ಟದಲ್ಲಿ ನಿಯಮಿಸಿದ ವಿಧಾನದಲ್ಲಿ ಅಫಿಡಾವಿಟ್ ಮೂಲಕ ಸತ್ಯಾಪನೆ ಮಾಡತಕ್ಕದ್ದು.

(2) ಉಪನಿಯಮ (1)ರ ಅಡಿಯಲ್ಲಿಯ ಅಫಿಡಾವಿಟ್‌ಗೆ, ಪಕ್ಷಕಾರನು ಅಥವಾ ವಾದ–ಪ್ರತಿವಾದ ಪತ್ರದ ಪಕ್ಷಕಾರರಲ್ಲಿ ಒಬ್ಬ ಪಕ್ಷಕಾರನು ಅಥವಾ ಯಾರು ಈ ಮೊಕದ್ದಮೆಯ ಸಂಗತಿಗಳನ್ನು ತಿಳಿದಿರುವರೆಂದು ನ್ಯಾಯಾಲಯಕ್ಕೆ ಮನವರಿಕೆಯಾಗುವಂತೆ ರುಜುವಾತಾಗಿದೆಯೋ ಆ ಯಾರೇ ವ್ಯಕ್ತಿಯು ಅಥವಾ ಅಂಥ ಪಕ್ಷಕಾರನು ಅಥವಾ ಪಕ್ಷಕಾರರು ವಿದ್ಯುಕ್ತವಾಗಿ ಪ್ರಾಧಿಕರಿಸಿದ ವ್ಯಕ್ತಿಯು ಸಹಿ ಮಾಡತಕ್ಕದ್ದು.

(3) ವಾದ ಪತ್ರವನ್ನು ತಿದ್ದುಪಡಿ ಮಾಡಿದಲ್ಲಿ ನ್ಯಾಯಾಲಯವು ಅನ್ಯಥಾ ಆದೇಶಿಸಿದ್ದ ಹೊರತು, ತಿದ್ದುಪಡಿಗಳನ್ನು ಉಪನಿಯಮ (1)ರಲ್ಲಿ ಉಲ್ಲೇಖಿಸಿದ ನಮೂನೆಯಲ್ಲಿ ಮತ್ತು ರೀತಿಯಲ್ಲಿ ಸತ್ಯಾಪನೆಗೊಳಿಸತಕ್ಕದ್ದು.

(4) ಉಪನಿಯಮ (1)ರ ಮೇರೆಗೆ ಉಪಬಂಧಿಸಿದ ರೀತಿಯಲ್ಲಿ ವಾದ ಪತ್ರವನ್ನು ಸತ್ಯಾಪನೆ ಮಾಡದಿದ್ದಲ್ಲಿ, ಅಂಥ ವಾದಪತ್ರವನ್ನು ಅಥವಾ ಅದರಲ್ಲಿ ವಿವರಿಸಿದ ಯಾವುದೇ ಇತರ ವಿಷಯವನ್ನು ಸಾಕ್ಷ್ಯವಾಗಿ ಆಧರಿಸಲು ಅನುಮತಿಸತಕ್ಕದ್ದಲ್ಲ.

(5) ವಾದಪತ್ರವನ್ನು ಅದು ಸತ್ಯವಾದುದೆಂದು ಅನುಸೂಚಿಯ ಪರಿಶಿಷ್ಟದಲ್ಲಿ ವಿವರಿಸಿದ ಎಂದರೆ, ಅಫಿಡಾವಿಟ್‌ನ ಮೂಲಕ ಸತ್ಯಾಪನೆ ಮಾಡಿರದಿದ್ದಲ್ಲಿ, ನ್ಯಾಯಾಲಯವು ಅದನ್ನು ಹೊಡೆದು ಹಾಕಬಹುದು.".

(ಸಿ) ಕ್ರಮಾದೇಶ VIIರಲ್ಲಿ 2ನೇ ನಿಯಮದ ತರುವಾಯ, ಈ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

"**2ಎ. ದಾವೆಯಲ್ಲಿ ಬಡ್ಡಿಗಾಗಿ ಕೋರಿಕೊಂಡಿದ್ದಲ್ಲಿ.–** (1) ವಾದಿಯು ಬಡ್ಡಿಯನ್ನು ಕೋರಿದ್ದರೆ, ವಾದಪತ್ರವು ಉಪನಿಯಮ (2)ರ ಮತ್ತು (3)ರ ಅಡಿಯಲ್ಲಿ ನಿರೂಪಿಸಿರುವ ವಿವರಗಳ ಸಹಿತ ಆ ಬಗೆಗಿನ ವಿವರಣೆಯನ್ನು ಒಳಗೊಂಡಿರತಕ್ಕದ್ದು.

(2) ವಾದಿಯು ಬಡ್ಡಿಯನ್ನು ಕೋರಿದ್ದರೆ, ವಾದಪತ್ರದಲ್ಲಿ ವಾಣಿಜ್ಯ ವ್ಯವಹಾರಕ್ಕೆ ಸಂಬಂಧಿಸಿದಂತೆ ವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5)ರ 34ನೇ ಪ್ರಕರಣದಲ್ಲಿ ಅರ್ಥೈಸಿದಂತೆ ಬಡ್ಡಿಯನ್ನು ಕೋರಿದ್ದಾನೆಯೇ ಎಂಬುದನ್ನು ಹೇಳಿರಬೇಕು ಮತ್ತು ವಾದಿಯು ಕರಾರಿನ ನಿಬಂಧನೆಗಳಂತೆ ಅಥವಾ ಯಾವುದಾದರೂ ಅಧಿನಿಯಮದ ಅಡಿಯಲ್ಲಿ ಹಾಗೆ ಕೋರಿಕೊಂಡಿದ್ದರೆ ವಾದ ಪತ್ರದಲ್ಲಿ ಅಧಿನಿಯಮವನ್ನು ಅಥವಾ ಇನ್ನಿತರ ಆಧಾರವನ್ನು ಸ್ಪಷ್ಟಪಡಿಸಿರತಕ್ಕದ್ದು ಮತ್ತು ಅದಕ್ಕೆ ಆಧಾರವನ್ನು ಹೇಳಿರತಕ್ಕದ್ದು.

(3) ವಾದ ಪ್ರತಿವಾದ ಪತ್ರಗಳು ಈ ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು,–

(ಎ) ಯಾವ ದರದಲ್ಲಿ ಬಡ್ಡಿಯನ್ನು ಕ್ಲೇಮು ಮಾಡಬಹುದೋ ಆ ದರ;

(ಬಿ) ಯಾವ ದಿನಾಂಕದಿಂದ ಕ್ಲೇಮು ಮಾಡಬಹುದೋ ಆ ದಿನಾಂಕ;

(ಸಿ) ಯಾವ ದಿನಾಂಕದಿಂದ ಲೆಕ್ಕ ಹಾಕಲಾಗಿದೆಯೋ ಆ ದಿನಾಂಕ;

(ಡಿ) ಯಾವ ದಿನಾಂಕದಿಂದ ಲೆಕ್ಕ ಹಾಕಿದ ಕ್ಲೇಮು ಮಾಡಲಾದ ಬಡ್ಡಿಯ ಒಟ್ಟು ಮೊತ್ತ; ಮತ್ತು

(ಇ) ವಾಯಿದೆ ದಿನಾಂಕದ ನಂತರದ ದಿನಗಳ ಬಡ್ಡಿಯ ದರ."

(ಡಿ) ಕ್ರಮಾದೇಶ VIIIರಲ್ಲಿ,–

(i) 1ನೇ ನಿಯಮದಲ್ಲಿನ, ಪರಂತುಕಕ್ಕೆ ಈ ಮುಂದಿನ ಪರಂತುಕವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"ಪರಂತು, ಪ್ರತಿವಾದಿಯು ಸದರಿ ಮೂವತ್ತು ದಿನಗಳ ಅವಧಿಯೊಳಗೆ ಲಿಖಿತ ಹೇಳಿಕೆಯನ್ನು ದಾಖಲ್ಮಾಡಲು ತಪ್ಪಿದಲ್ಲಿ, ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ ಮತ್ತು ನ್ಯಾಯಾಲಯವು ಸೂಕ್ತವೆಂದು ಅದು ಭಾವಿಸುವಂಥ ವೆಚ್ಚಗಳನ್ನು ಸಂದಾಯ ಮಾಡಿದ ಮೇಲೆ, ನ್ಯಾಯಾಲಯವು ನಿರ್ದಿಷ್ಟಪಡಿಸಬಹುದಾದಂಥ ಇತರ ದಿನದಂದು ಲಿಖಿತ ಹೇಳಿಕೆಯನ್ನು ದಾಖಲ್ಮಾಡಲು ಅವನಿಗೆ ಅನುಮತಿಸತಕ್ಕದ್ದು. ಆದರೆ ಆ ದಿನವು, ಸಮನನ್ನು ಜಾರಿಗೊಳಿಸಿದ ದಿನಾಂಕದಿಂದ ಒಂದು ನೂರಾ ಇಪ್ಪತ್ತು ದಿನಗಳಿಗೆ ಮೀರದ ದಿನವಾಗಿರತಕ್ಕದ್ದು ಮತ್ತು ಸಮನ್ ಜಾರಿಗೊಳಿಸಿದ ದಿನಾಂಕದಿಂದ ಒಂದು ನೂರಾ ಇಪ್ಪತ್ತು ದಿನಗಳು ಮುಕ್ತಾಯವಾದ ತರುವಾಯ, ಪ್ರತಿವಾದಿಯು, ಲಿಖಿತ ಹೇಳಿಕೆಯನ್ನು ದಾಖಲಿಸುವ ಆತನ ಹಕ್ಕು ಮುಟ್ಟುಗೋಲಾಗತಕ್ಕದ್ದು ಮತ್ತು ನ್ಯಾಯಾಲಯವು ಲಿಖಿತ ಹೇಳಿಕೆಯನ್ನು ದಾಖಲೆಯ ಮೇಲೆ ತೆಗೆದುಕೊಳ್ಳಲು ಅನುಮತಿಸತಕ್ಕದ್ದಲ್ಲ.";

(ii) 3ನೇ ನಿಯಮದ ತರುವಾಯ, ಈ ಕೆಳಕಂಡ ನಿಯಮವನ್ನು ಸೇರಿಸತಕ್ಕದ್ದು, ಎಂದರೆ:–

"**3ಎ. ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗದ ಅಥವಾ ವಾಣಿಜ್ಯ ನ್ಯಾಯಾಲಯದ ಮುಂದೆ ಇರುವ ದಾವೆಗಳ ಸಂಬಂಧದಲ್ಲಿ ಪ್ರತಿವಾದಿಯ ನಿರಾಕರಣೆ.–** (1) ನಿರಾಕರಣೆಯನ್ನು ಈ ನಿಯಮದ (2), (3), (4) ಮತ್ತು (5)ನೇ ಉಪನಿಯಮಗಳಲ್ಲಿ ಉಪಬಂಧಿಸಿರುವ ರೀತಿಯಲ್ಲಿ ಮಾಡತಕ್ಕದ್ದು.

(2) ಪ್ರತಿವಾದಿಯು, ತನ್ನ ಪ್ರತಿರಕ್ಷೆಯ ಲಿಖಿತ ಹೇಳಿಕೆಯಲ್ಲಿ, ವಾದಪತ್ರದಲ್ಲಿನ ವಿವರಗಳಲ್ಲಿ ಹೇಳಿದ ಯಾವ ಆಪಾದನೆಯನ್ನು ನಿರಾಕರಿಸುತ್ತಾನೆಂಬುದನ್ನು, ಯಾವ ಆಪಾದನೆಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲವೆಂಬುದನ್ನು ಅಥವಾ ನಿರಾಕರಿಸುತ್ತಾನೆಂಬುದನ್ನು ತಿಳಿಸತಕ್ಕದ್ದು. ಆದರೆ, ಯಾವುದನ್ನು ವಾದಿಯು ರುಜುವಾತುಪಡಿಸಬೇಕಾಗುತ್ತದೆ ಮತ್ತು ಯಾವ ಆಪಾದನೆಯನ್ನು ಆತನು ಒಪ್ಪಿಕೊಳ್ಳುತ್ತಾನೆ ಎಂಬುದನ್ನು ತಿಳಿಸತಕ್ಕದ್ದು.

(3) ವಾದಪತ್ರದಲ್ಲಿಯ ವಾಸ್ತವಾಂಶಗಳ ಆಪಾದನೆಯನ್ನು ನಿರಾಕರಿಸಿದಲ್ಲಿ, ಹಾಗೆ ನಿರಾಕರಿಸುವುದಕ್ಕಾಗಿ ಇರುವ ಕಾರಣಗಳನ್ನು ತಿಳಿಸಲೇಬೇಕು ಮತ್ತು ವಾದಿಯು ಕೊಟ್ಟಿರುವ ಸಂಗತಿಗಳಿಗಿಂತ ಭಿನ್ನವಾದ ಸನ್ನಿವೇಶಗಳ ಹೇಳಿಕೆಗಳನ್ನು ಮುಂದಿಡಲು ಉದ್ದೇಶಿಸಿದರೆ, ಆತನು ತನ್ನ ಸ್ವಂತ ಹೇಳಿಕೆಯನ್ನು ತಿಳಿಸಲೇಬೇಕು.

(4) ಪ್ರತಿವಾದಿಯು, ನ್ಯಾಯಾಲಯದ ಅಧಿಕಾರವ್ಯಾಪ್ತಿಯನ್ನು ವಿವಾದಿಸಿದರೆ, ಹಾಗೆ ಮಾಡುವುದಕ್ಕೆ ಕಾರಣಗಳನ್ನು ತಿಳಿಸಲೇಬೇಕು ಮತ್ತು ಸಮರ್ಥನಿದ್ದರೆ, ಯಾವ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿದೆ ಎಂಬ ಬಗ್ಗೆ ತನ್ನ ಸ್ವಂತ ಹೇಳಿಕೆಯನ್ನು ಕೊಡಬೇಕು.

(5) ವಾದಿಯ ದಾವೆಯ ಮೌಲ್ಯಮಾಪನದ ಬಗ್ಗೆ ಪ್ರತಿವಾದಿಯು ವಿವಾದಿಸಿದರೆ, ಹಾಗೆ ಮಾಡುವುದಕ್ಕಾಗಿ ಇರುವ ಕಾರಣಗಳನ್ನು ಆತನು ತಿಳಿಸಲೇಬೇಕು ಮತ್ತು ಸಮರ್ಥನಾಗಿದ್ದರೆ ದಾವೆಯ ಮೌಲ್ಯಮಾಪನದ ಬಗ್ಗೆ ತನ್ನ ಸ್ವಂತ ಹೇಳಿಕೆಯನ್ನು ಕೊಡಬೇಕು.".

(iii) 5ನೇ ನಿಯಮದಲ್ಲಿ, (1)ನೇ ಉಪನಿಯಮದಲ್ಲಿ, ಮೊದಲನೇ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ವಾದ ಪತ್ರದಲ್ಲಿ ಸಂಗತಿಯ ಪ್ರತಿಯೊಂದು ಆಪಾದನೆಯನ್ನು, ಈ ಕ್ರಮಾದೇಶದ 3ಎ ನಿಯಮದ ಅಡಿಯಲ್ಲಿ ಉಪಬಂಧಿಸಿರುವ ರೀತಿಯಲ್ಲಿ ನಿರಾಕರಿಸದಿದ್ದರೆ, ಅಸಮರ್ಥತೆಗೊಳಗಾದ ವ್ಯಕ್ತಿಯ ವಿರುದ್ಧವಾಗಿರುವ ಹೊರತು, ಒಪ್ಪಿಕೊಂಡಿದ್ದಾನೆಂದು ತಿಳಿಯತಕ್ಕದ್ದು."

(iv) 10ನೇ ನಿಯಮದಲ್ಲಿ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಪರಂತು, ಯಾವುದೇ ನ್ಯಾಯಾಲಯವು, ಪ್ರಮಾಣಪೂರ್ವಕ ಹೇಳಿಕೆಯನ್ನು ದಾಖಲ್ಮಾಡುವುದಕ್ಕಾಗಿ ಈ ಕ್ರಮಾದೇಶದ 1ನೇ ನಿಯಮದ ಅಡಿಯಲ್ಲಿ ಉಪಬಂಧಿಸಿದ ಅವಧಿಯನ್ನು ವಿಸ್ತರಿಸತಕ್ಕದ್ದಲ್ಲ.";

(ಇ) ಸಂಹಿತೆಯ XIನೇ ಕ್ರಮಾದೇಶಕ್ಕೆ ಈ ಮುಂದಿನ ಕ್ರಮಾದೇಶವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

**"ಕ್ರಮಾದೇಶ XI**

**ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗದ ಅಥವಾ ವಾಣಿಜ್ಯ ನ್ಯಾಯಾಲಯದ ಮುಂದಿರುವ ದಾವೆಗಳಲ್ಲಿ ದಸ್ತಾವೇಜುಗಳ ಪ್ರಕಟಿಸುವಿಕೆ, ಬಹಿರಂಗಪಡಿಸುವಿಕೆ ಮತ್ತು ಪರಿಶೀಲನೆ**

**1. ದಸ್ತಾವೇಜುಗಳ ಪ್ರಕಟಿಸುವಿಕೆ ಮತ್ತು ಬಹಿರಂಗಪಡಿಸುವಿಕೆ.–** (1) ವಾದಿಯು, ದಾವೆಗೆ ಸಂಬಂಧಿಸಿದಂತೆ, ವಾದಪ್ರತಿವಾದ ಪತ್ರಗಳ ಜೊತೆಗೆ ಈ ಮುಂದಿನವು ಒಳಗೊಂಡಂತೆ, ತನ್ನ ಅಧಿಕಾರದಲ್ಲಿ ಇರುವ, ಸ್ವಾಧೀನತೆಯಲ್ಲಿರುವ, ಎಲ್ಲಾ ದಸ್ತಾವೇಜುಗಳ ಮತ್ತು ಎಲ್ಲಾ ದಸ್ತಾವೇಜುಗಳ ಫೋಟೋ ಪ್ರತಿಗಳ ಪಟ್ಟಿಯನ್ನು ಸಲ್ಲಿಸತಕ್ಕದ್ದು, ಎಂದರೆ:–

(ಎ) ವಾದಪ್ರತಿವಾದ ಪತ್ರದಲ್ಲಿ ವಾದಿಯು ಉಲ್ಲೇಖಿಸಿದ ಅಥವಾ ಆಧಾರವಾಗಿ ತೆಗೆದುಕೊಂಡಿರುವ ದಸ್ತಾವೇಜುಗಳು;

(ಬಿ) ವ್ಯವಹರಣೆಗಳಲ್ಲಿ ಪ್ರಶ್ನಿತವಾದ ಯಾವುದೇ ವಿಷಯಕ್ಕೆ ಸಂಬಂಧಿಸಿದ ದಸ್ತಾವೇಜುಗಳು. ಅವು ವಾದಿಯ ಮೊಕದ್ದಮೆಗೆ ಪೂರಕವಾಗಿರಲಿ ಅಥವಾ ಪ್ರತಿಕೂಲವಾಗಿರಲಿ, ಅದು ಏನೇ ಇದ್ದರೂ, ವಾದಪ್ರತಿವಾದ ಪತ್ರವನ್ನು ಸಲ್ಲಿಸುವ ದಿನಾಂಕದಂದು, ವಾದಿಯ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿ ಇರುವಂಥ ದಸ್ತಾವೇಜುಗಳು;

(ಸಿ) ಈ ನಿಯಮದಲ್ಲಿ ಇರುವುದಾವುದೂ, ವಾದಿಗಳು ಒದಗಿಸಿದ ದಸ್ತಾವೇಜುಗಳಿಗೆ ಅನ್ವಯವಾಗತಕ್ಕದ್ದಲ್ಲ: ಮತ್ತು,–

(i) ಪ್ರತಿವಾದಿ ಸಾಕ್ಷಿದಾರರ ಪಾಟೀ–ಸವಾಲಿಗಾಗಿ ಸುಸಂಗತವಾದ; ಅಥವಾ

(ii) ವಾದ ಪ್ರತಿವಾದ ಪತ್ರವನ್ನು ಪ್ರತಿವಾದಿಯು ಸಲ್ಲಿಸಿದ ತರುವಾಯ ಸಿದ್ಧಪಡಿಸಿದ ಯಾವುದೇ ವಾದ ಸಮರ್ಥನೆಗೆ ಉತ್ತರವಾಗಿ ಮಾತ್ರ ಸುಸಂಗತವಾದ; ಅಥವಾ

(iii) ಸಾಕ್ಷಿದಾರರು ನೆನಪು ಮಾಡಿಕೊಳ್ಳಲು ಮಾತ್ರವೇ ಸುಸಂಗತವಾದ ದಸ್ತಾವೇಜುಗಳಿಗೆ

– ಅನ್ವಯವಾಗತಕ್ಕದ್ದಲ್ಲ.

(2) ವಾದಿಯು ಸಲ್ಲಿಸಿದ ದಸ್ತಾವೇಜುಗಳ ಪಟ್ಟಿಯಲ್ಲಿ, ವಾದಿಯ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿರುವ ದಸ್ತಾವೇಜುಗಳು, ಮೂಲ ಪ್ರತಿಗಳೇ, ಕಚೇರಿ ಪ್ರತಿಗಳೇ ಅಥವಾ ಫೋಟೋ ಪ್ರತಿಗಳೇ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಪಟ್ಟಿಯಲ್ಲಿ, ಪ್ರತಿಯೊಂದು ದಸ್ತಾವೇಜಿಗೆ ಸಂಬಂಧಿಸಿದಂತೆ ವಿವರಗಳನ್ನು, ಜಾರಿಗೊಳಿಸುವ ವಿಧಾನ, ನೀಡಿಕೆ ಅಥವಾ ಸ್ವೀಕೃತಿ ಮತ್ತು ಪ್ರತಿಯೊಂದು ದಸ್ತಾವೇಜಿನ ಅಭಿರಕ್ಷೆಯ ಶ್ರೇಣಿಯನ್ನು ನಿರ್ದಿಷ್ಟಪಡಿಸತಕ್ಕದ್ದು.

(3) ವಾದ ಪತ್ರವು, ವಾದಿಯು ತಾನು ಪ್ರಾರಂಭಿಸಿದ, ವ್ಯವಹಾರಗಳ ಸಂಗತಿಗಳಿಗೆ ಮತ್ತು ಸನ್ನಿವೇಶಗಳಿಗೆ ಸಂಬಂಧಿಸಿದಂತೆ ವಾದಿಯ ಅಧಿಕಾರ, ಸ್ವಾಧೀನತೆ, ನಿಯಂತ್ರಣ ಅಥವಾ ಅಭಿರಕ್ಷೆಯಲ್ಲಿರುವ ಎಲ್ಲ ದಸ್ತಾವೇಜುಗಳನ್ನು ಬಹಿರಂಗಪಡಿಸಲಾಗಿದೆಯೆಂದು ಮತ್ತು ಅವುಗಳ ಪ್ರತಿಗಳನ್ನು ವಾದಪತ್ರಕ್ಕೆ ಲಗತ್ತಿಸಲಾಗಿದೆಯೆಂದು ಮತ್ತು ವಾದಿಯು, ತನ್ನ ಅಧಿಕಾರದಲ್ಲಿ, ಸ್ವಾಧೀನದಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿ ಇತರ ಯಾವುದೇ ದಸ್ತಾವೇಜನ್ನು ಇಟ್ಟುಕೊಂಡಿಲ್ಲವೆಂದೂ ಅವನು ಪ್ರಮಾಣ ಮಾಡಿ ಹೇಳಿದ ಘೋಷಣೆಯನ್ನು ಒಳಗೊಂಡಿರತಕ್ಕದ್ದು.

**ವಿವರಣೆ.–** ಪರಿಶಿಷ್ಟದಲ್ಲಿ ವಿವರಿಸಿದಂತೆ ಈ ಉಪನಿಯಮದ ಅಡಿಯಲ್ಲಿ ಮಾಡಿದ ಪ್ರಮಾಣದ ಘೋಷಣೆಯು ಅಂಥ ಸತ್ಯತಾ ಹೇಳಿಕೆಯನ್ನು ಒಳಗೊಂಡಿರತಕ್ಕದ್ದು.

(4) ತುರ್ತಾಗಿ ಸಲ್ಲಿಸಬೇಕಾದ ಸಂದರ್ಭದಲ್ಲಿ, ವಾದಿಯು ಮೇಲ್ಕಂಡ ಘೋಷಣೆಯ ಭಾಗವಾಗಿ ಪ್ರಮಾಣದ ಮೇಲೆ ಹೆಚ್ಚು ದಾಖಲೆಗಳನ್ನು ಆಧಾರವಾಗಿ ತೆಗೆದುಕೊಳ್ಳುವುದಕ್ಕೆ ಅನುಮತಿ ಕೋರಬಹುದು ಮತ್ತು ನ್ಯಾಯಾಲಯದ ಅಂಥ ಅನುಮತಿಗೆ ಒಳಪಟ್ಟು, ವಾದಿಯು ಪ್ರಾರಂಭಿಸಿದ್ದ ವ್ಯವಹರಣೆಗಳ ಸಂಗತಿಗಳಿಗೆ ಮತ್ತು ಸಂದರ್ಭ ಸನ್ನಿವೇಶಗಳಿಗೆ ಸಂಬಂಧಿಸಿದ, ತನ್ನ ಅಧಿಕಾರದಲ್ಲಿರುವ, ಸ್ವಾಧೀನತೆಯಲ್ಲಿರುವ, ನಿಯಂತ್ರಣದಲ್ಲಿರುವ ಮತ್ತು ಅಭಿರಕ್ಷೆಯಲ್ಲಿರುವ ಎಲ್ಲಾ ದಾಖಲೆಗಳನ್ನು ಹಾಜರುಪಡಿಸಲಾಗಿದೆಯೆಂದೂ ಮತ್ತು ತನ್ನ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿ ಇತರ ಯಾವುದೇ ದಾಖಲೆಗಳಿಲ್ಲ ಎಂದು ಪ್ರಮಾಣ ಮಾಡಿ ಹೇಳಿದ ಘೋಷಣೆಯೊಂದಿಗೆ, ದಾವೆಯನ್ನು ಸಲ್ಲಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ನ್ಯಾಯಾಲಯದಲ್ಲಿ ಅಂಥ ಹೆಚ್ಚಿನ ದಾಖಲೆಗಳನ್ನು ಸಲ್ಲಿಸತಕ್ಕದ್ದು.

(5) ವಾದಿಯ ಅಧಿಕಾರದಲ್ಲಿದ್ದ, ಸ್ವಾಧೀನತೆಯಲ್ಲಿದ್ದ, ನಿಯಂತ್ರಣದಲ್ಲಿದ್ದ ಅಥವಾ ಅಭಿರಕ್ಷೆಯಲ್ಲಿದ್ದ ಮತ್ತು ವಾದಪತ್ರದಲ್ಲಿ ಅಥವಾ ಮೇಲೆ ವಿವರಿಸಿದ ವಿಸ್ತರಿಸಿದ ಅವಧಿಯೊಳಗೆ ಬಹಿರಂಗಪಡಿಸದಿದ್ದ ದಾಖಲೆಗಳನ್ನು ಆಧಾರವಾಗಿ ತೆಗೆದುಕೊಳ್ಳಲು ನ್ಯಾಯಾಲಯದ ಅನುಮತಿಯನ್ನುಳಿದು ಮತ್ತು ಅದರ ಹೊರತಾಗಿ, ವಾದಿಗೆ ಅನುಮತಿಸತಕ್ಕದ್ದಲ್ಲ ಮತ್ತು ವಾದಪತ್ರದಲ್ಲಿ ದಾಖಲೆಗಳನ್ನು ಬಹಿರಂಗಪಡಿಸದಿರುವುದಕ್ಕಾಗಿ ಸೂಕ್ತ ಕಾರಣಗಳನ್ನು ವಾದಿಯು ರುಜುವಾತುಪಡಿಸಿದ ಮೇಲೆ ಮಾತ್ರ ಅನುಮತಿ ನೀಡತಕ್ಕದ್ದು.

(6) ಯಾವ ದಸ್ತಾವೇಜುಗಳು ಪ್ರತಿವಾದಿಯ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿ ಇವೆ ಎಂದು ವಾದಿಯು ನಂಬಿರುತ್ತಾನೆಯೋ ಮತ್ತು ವಾದಿಯು ಅವುಗಳನ್ನು ಆಧಾರವಾಗಿ ತೆಗೆದುಕೊಳ್ಳಲು ಇಚ್ಛಿಸುತ್ತಾನೆಯೋ ಮತ್ತು ಸದರಿ ಪ್ರತಿವಾದಿಯು ಅವುಗಳನ್ನು ಹಾಜರುಪಡಿಸಬೇಕೆಂದು ಅನುಮತಿಯನ್ನು ಕೋರುತ್ತಾನೆಯೋ ಆ ದಸ್ತಾವೇಜುಗಳ ವಿವರಗಳನ್ನು ವಾದಪತ್ರದಲ್ಲಿ ವಿವರಿಸತಕ್ಕದ್ದು.

(7) ಪ್ರತಿವಾದಿಯು ದಾವೆಗೆ ಸಂಬಂಧಪಟ್ಟಂತೆ ತನ್ನ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿರುವ, ಪ್ರಮಾಣಪೂರ್ವಕವಾಗಿ ನೀಡಿದ ಲಿಖಿತ ಹೇಳಿಕೆ ಅಥವಾ ಎದುರು ಕ್ಲೇಮು ಯಾವುದಾದರೂ ಇದ್ದರೆ ಅದರ ಜೊತೆಗೆ, ಈ ಮುಂದಿನವು ಎಂದರೆ:–

(ಎ) ಪ್ರತಿವಾದಿಯು ಪ್ರಮಾಣಪೂರ್ವಕ ಲಿಖಿತ ಹೇಳಿಕೆಯಲ್ಲಿ ಉಲ್ಲೇಖಿಸಿದ ಮತ್ತು ಅವನು ಆಧರಿಸಿರುವ ದಸ್ತಾವೇಜುಗಳು;

(ಬಿ) ವ್ಯವಹರಣೆಗಳಲ್ಲಿ ಪ್ರಶ್ನಿತವಾದ ಯಾವುದೇ ವಿಷಯಕ್ಕೆ ಸಂಬಂಧಿಸಿದ ದಸ್ತಾವೇಜುಗಳು, ಅವು ಪ್ರತಿವಾದಿಯ ಮೊಕದ್ದಮೆಗೆ ಪೂರಕವಾಗಿರಲಿ ಅಥವಾ ಪ್ರತಿಕೂಲವಾಗಿರಲಿ ಅದು ಏನೇ ಇದ್ದರೂ ಪ್ರತಿವಾದಿಯ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿರುವ ದಸ್ತಾವೇಜುಗಳು

– ಇವುಗಳನ್ನು ಒಳಗೊಂಡಿರತಕ್ಕದ್ದು.

(ಸಿ) ಈ ನಿಯಮದಲ್ಲಿ ಇರುವುದು ಯಾವುದೂ ಪ್ರತಿವಾದಿಗಳು ಒದಗಿಸಿದ ಮತ್ತು

(i) ವಾದಿಯ ಸಾಕ್ಷಿದಾರರ ಪಾಟೀ ಸವಾಲಿಗೆ ಮಾತ್ರ ಸುಸಂಗತವಾದ;

(ii) ವಾದ ಪ್ರತಿವಾದ ಪತ್ರವನ್ನು ಸಲ್ಲಿಸಿದ ತರುವಾಯ ವಾದಿಯು ನಿರೂಪಿಸುವ ಯಾವುದೇ ವಾದದ ಸಮರ್ಥನೆಗೆ ಉತ್ತರಿಸುವುದಕ್ಕಾಗಿ ಮಾತ್ರ ಸುಸಂಗತವಾದ; ಅಥವಾ

(iii) ಸಾಕ್ಷಿದಾರರು ನೆನಪು ಮಾಡಿಕೊಳ್ಳಲು ಮಾತ್ರವೇ ಸುಸಂಗತವಾದ

– ದಸ್ತಾವೇಜುಗಳಿಗೆ ಅನ್ವಯವಾಗತಕ್ಕದ್ದಲ್ಲ.

(8) ಪ್ರಮಾಣ ಮಾಡಿ ನೀಡಿದ ಲಿಖಿತ ಹೇಳಿಕೆಯ ಜೊತೆ ದಾಖಲ್ಮಾಡಿದ ದಸ್ತಾವೇಜುಗಳ ಪಟ್ಟಿಯಲ್ಲಿ, ಪ್ರತಿವಾದಿಯ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿರುವ ದಸ್ತಾವೇಜುಗಳು, ಮೂಲ ಪ್ರತಿಗಳೇ, ಕಚೇರಿ ಪ್ರತಿಗಳೇ ಅಥವಾ ಫೋಟೋ ಪ್ರತಿಗಳೇ ಎಂಬುದನ್ನು ನಿರ್ದಿಷ್ಟಪಡಿಸತಕ್ಕದ್ದು ಮತ್ತು ಪಟ್ಟಿಯಲ್ಲಿ ಪ್ರತಿವಾದಿಯು ಒದಗಿಸಿದ ಪ್ರತಿಯೊಂದು ದಸ್ತಾವೇಜಿನ ಪಕ್ಷಕಾರರ ವಿವರಗಳನ್ನು, ಅಮಲ್ಜಾರಿಯ ವಿಧಾನ, ನೀಡಿಕೆ ಅಥವಾ ಸ್ವೀಕೃತಿ ಮತ್ತು ಪ್ರತಿಯೊಂದು ದಸ್ತಾವೇಜಿನ ಶ್ರೇಣಿಯನ್ನು ನಿರ್ದಿಷ್ಟಪಡಿಸತಕ್ಕದ್ದು.

(9) ಲಿಖಿತ ಪ್ರಮಾಣಪೂರ್ವಕ ಹೇಳಿಕೆಯ ಅಥವಾ ಎದುರು ಕ್ಲೇಮು, ವಾದಿಯು ಪ್ರಾರಂಭಿಸಿದ ವ್ಯವಹರಣೆಗಳ ಸಂಗತಿಗಳಿಗೆ ಮತ್ತು ಸಂದರ್ಭ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ಉಪನಿಯಮ 7(ಸಿ)(iii)ರಲ್ಲಿ ಅಥವಾ ಎದುರು ಕ್ಲೇಮಿನಲ್ಲಿ ವಿವರಿಸಿದವುಗಳನ್ನುಳಿದು ಮತ್ತು ಅವುಗಳ ಹೊರತಾಗಿ, ಪ್ರತಿವಾದಿಯ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿ ಇರುವ ಎಲ್ಲಾ ದಸ್ತಾವೇಜುಗಳನ್ನು ಬಹಿರಂಗಪಡಿಸಲಾಗಿದೆ ಎಂದು ಮತ್ತು ಪ್ರಮಾಣಪೂರ್ವಕ ನೀಡಿದ ಹೇಳಿಕೆಯ ಅಥವಾ ಎದುರು ಕ್ಲೇಮಿನ ಜೊತೆಗೆ ಅದರ ಪ್ರತಿಗಳನ್ನು ಲಗತ್ತಿಸಲಾಗಿದೆ ಎಂದು ಮತ್ತು ಪ್ರತಿವಾದಿಯು ತನ್ನ ಅಧಿಕಾರ, ಸ್ವಾಧೀನತೆ, ನಿಯಂತ್ರಣ ಅಥವಾ ಅಭಿರಕ್ಷೆಯಲ್ಲಿ ಇತರ ಯಾವುದೇ ದಸ್ತಾವೇಜುಗಳನ್ನು ತನ್ನಲ್ಲಿ ಇಲ್ಲ ಎಂದು ಹೇಳಿಕೆದಾರನು ಪ್ರಮಾಣ ಮಾಡಿ ನೀಡಿದ ಘೋಷಣೆಯನ್ನು ಒಳಗೊಂಡಿರತಕ್ಕದ್ದು.

(10) ಉಪನಿಯಮ (7)(ಸಿ)(iii)– ಇದನ್ನುಳಿದು ಮತ್ತು ಹೊರತಾಗಿ, ಪ್ರತಿವಾದಿಯು ತನ್ನ ಅಧಿಕಾರದಲ್ಲಿದ್ದ, ಸ್ವಾಧೀನತೆಯಲ್ಲಿದ್ದ, ನಿಯಂತ್ರಣದಲ್ಲಿದ್ದ ಅಥವಾ ಪ್ರತಿರಕ್ಷೆಯಲ್ಲಿದ್ದ ಮತ್ತು ಪ್ರಮಾಣಪೂರ್ವಕ ಲಿಖಿತ ಹೇಳಿಕೆಯ ಅಥವಾ ಎದುರು ಕ್ಲೇಮಿನ ಜೊತೆಗೆ, ಬಹಿರಂಗಪಡಿಸದಿದ್ದ, ದಾಖಲೆಗಳನ್ನು ನ್ಯಾಯಾಲಯದ ಅನುಮತಿಯನ್ನುಳಿದು ಮತ್ತು ಹೊರತಾಗಿ ಅನುಮತಿಸತಕ್ಕದ್ದಲ್ಲ ಮತ್ತು ಅಂಥ ಅನುಮತಿಯನ್ನು, ಪ್ರಮಾಣಪೂರ್ವಕ ಲಿಖಿತ ಹೇಳಿಕೆಯ ಅಥವಾ ಪ್ರತಿ ಕ್ಲೇಮಿನ ಜೊತೆಗೆ ಬಹಿರಂಗಪಡಿಸದಿರುವುದಕ್ಕಾಗಿ ಪ್ರತಿವಾದಿಯು ಸೂಕ್ತ ಕಾರಣಗಳನ್ನು ರುಜುವಾತುಪಡಿಸಿದ ಮೇಲೆ ಮಾತ್ರವೇ ನೀಡತಕ್ಕದ್ದು.

(11) ಲಿಖಿತ ಹೇಳಿಕೆಯಲ್ಲಿ ಅಥವಾ ಎದುರು ಕ್ಲೇಮಿನಲ್ಲಿ, ಪ್ರತಿವಾದಿಯು ತಾನು ಆಧಾರವಾಗಿ ತೆಗೆದುಕೊಳ್ಳಲು ಇಚ್ಛಿಸುವ ಮತ್ತು ವಾದ ಪತ್ರದಲ್ಲಿ ಬಹಿರಂಗಪಡಿಸದಿದ್ದ, ವಾದಿಯ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿರುವ ದಸ್ತಾವೇಜಿನ ವಿವರಗಳನ್ನು ತಿಳಿಸತಕ್ಕದ್ದು ಮತ್ತು ಅವುಗಳನ್ನು ವಾದಿಯು ಹಾಜರುಪಡಿಸುವಂತೆ ಕೇಳತಕ್ಕದ್ದು.

(12) ಪಕ್ಷಕಾರನ ಗಮನಕ್ಕೆ ಬಂದ ದಸ್ತಾವೇಜುಗಳನ್ನು ಬಹಿರಂಗಪಡಿಸುವ ಕರ್ತವ್ಯವು, ದಾವೆಯು ವಿಲೆಯಾಗುವವರೆಗೆ ಮುಂದುವರಿಯತಕ್ಕದ್ದು.

**2. ಪರಿಪ್ರಶ್ನೆಗಳ ಮೂಲಕ ಕಂಡುಹಿಡಿಯುವಿಕೆ.–** (1) ಯಾವುದೇ ದಾವೆಯಲ್ಲಿ ವಾದಿಯು ಅಥವಾ ಪ್ರತಿವಾದಿಯು, ನ್ಯಾಯಾಲಯದ ಅನುಮತಿ ಪಡೆದು ಎದುರು ಪಕ್ಷಕಾರರನ್ನು ಅಥವಾ ಅಂಥ ಪಕ್ಷಕಾರರಲ್ಲಿ ಯಾರೇ ಒಬ್ಬನನ್ನು ಅಥವಾ ಹೆಚ್ಚು ಜನರನ್ನು ವಿಚಾರಣೆ ಮಾಡುವುದಕ್ಕಾಗಿ ಲಿಖಿತ ಪರಿಪ್ರಶ್ನೆಗಳನ್ನು ಕೊಡಬಹುದು ಮತ್ತು ಅಂಥ ಪರಿಪ್ರಶ್ನೆಗಳನ್ನು ಕೊಟ್ಟಾಗ, ಅಂಥ ಪರಿಪ್ರಶ್ನೆಗಳ ಪೈಕಿ ಯಾವುದನ್ನು ಅಂಥ ವ್ಯಕ್ತಿಗಳಲ್ಲಿ ಪ್ರತಿಯೊಬ್ಬರೂ ಉತ್ತರಿಸಬೇಕಾಗಿದೆ ಎಂಬುದನ್ನು ತಿಳಿಸುವ ಅಡಿಟಿಪ್ಪಣಿಯು ಇರತಕ್ಕದ್ದು:

ಪರಂತು, ಯಾರೊಬ್ಬ ಪಕ್ಷಕಾರನು, ಆ ಉದ್ದೇಶಕ್ಕಾಗಿ ಆದೇಶವಿಲ್ಲದೆಯೇ ಅದೇ ಪಕ್ಷಕಾರನಿಗೆ ಒಂದಕ್ಕಿಂತ ಹೆಚ್ಚು ಪರಿಪ್ರಶ್ನೆಗಳ ಸೆಟ್‌ನ್ನು ಕೊಡತಕ್ಕದ್ದಲ್ಲ:

ಮತ್ತು ಪರಂತು, ದಾವೆಯಲ್ಲಿ ಪ್ರಶ್ನಿಸಿರುವ ಯಾವುದೇ ವಿಷಯಕ್ಕೆ ಯಾವ ಪರಿಪ್ರಶ್ನೆಗಳು ಸಂಬಂಧಪಟ್ಟಿಲ್ಲವೋ ಅವುಗಳನ್ನು, ಸಾಕ್ಷಿದಾರನ ಮೌಖಿಕ ಪಾಟೀ ಸವಾಲಿಗಾಗಿ ಅಂಗೀಕಾರಾರ್ಹವಾಗಬಹುದಾಗಿದ್ದರೂ, ಅವು ಅಸಂಬದ್ಧವೆಂದು ಭಾವಿಸತಕ್ಕದ್ದು.

(2) ಪರಿಪ್ರಶ್ನೆಗಳನ್ನು ಕೊಡಲು ಅನುಮತಿಗಾಗಿ ಅರ್ಜಿಯನ್ನು ಸಲ್ಲಿಸಿದಾಗ, ಕೊಡಬೇಕೆಂದು ಉದ್ದೇಶಿಸಿರುವ ನಿರ್ದಿಷ್ಟ ಪರಿಪ್ರಶ್ನೆಗಳನ್ನು ನ್ಯಾಯಾಲಯಕ್ಕೆ ಒಪ್ಪಿಸತಕ್ಕದ್ದು ಮತ್ತು ಸದರಿ ಅರ್ಜಿಯನ್ನು ಸಲ್ಲಿಸಿದ ಏಳು ದಿನಗಳೊಳಗಾಗಿ ತೀರ್ಮಾನಿಸತಕ್ಕದ್ದು. ಅಂಥ ಅರ್ಜಿಯನ್ನು ತೀರ್ಮಾನಿಸುವಲ್ಲಿ ಯಾವ ಪಕ್ಷಕಾರನನ್ನು ಪ್ರಶ್ನಿಸಬೇಕಾಗಿದೆಯೋ ಆ ಪಕ್ಷಕಾರನು, ಪ್ರಶ್ನೆಯಲ್ಲಿರುವ ವಿಷಯಗಳಿಗೆ ಅಥವಾ ಅವುಗಳಲ್ಲಿ ಯಾವುದಕ್ಕಾದರೂ ಸಂಬಂಧಿಸಿದ ವಿವರಗಳನ್ನು ಕೊಡುವುದಾಗಿ ಅಥವಾ ಒಪ್ಪುವುದಾಗಿ ಅಥವಾ ದಸ್ತಾವೇಜುಗಳನ್ನು ಹಾಜರುಪಡಿಸುವುದಾಗಿ ಹೇಳಿದರೆ, ಹಾಗೆ ಹೇಳುವುದನ್ನು ನ್ಯಾಯಾಲಯವು ಪರಿಗಣನೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಹಾಗೆ ಒಪ್ಪಿಸಲಾದ ಪರಿಪ್ರಶ್ನೆಗಳಲ್ಲಿ ದಾವೆಯನ್ನು ನ್ಯಾಯಯುತವಾಗಿ ವಿಲೆ ಮಾಡಲು ಅಥವಾ ಖರ್ಚುಗಳನ್ನು, ಉಳಿಸಲು ಅವಶ್ಯಕವೆಂದು ಅದು ಪರ್ಯಾಲೋಚಿಸುವಂಥ ಪರಿಪ್ರಶ್ನೆಗಳಿಗೆ ಮಾತ್ರವೇ ನ್ಯಾಯಾಲಯವು ಅನುಮತಿಯನ್ನು ಕೊಡತಕ್ಕದ್ದು.

(3) ದಾವೆಯ ಖರ್ಚನ್ನು ಹೊಂದಾಣಿಕೆ ಮಾಡುವಲ್ಲಿ ಅಂಥ ಪರಿಪ್ರಶ್ನೆಗಳನ್ನು ಹಾಜರುಪಡಿಸುವುದರ ಔಚಿತ್ಯದ ಬಗ್ಗೆ ಯಾರೇ ಪಕ್ಷಕಾರನ ಕೋರಿಕೆಯ ಮೇರೆಗೆ ವಿಚಾರಣೆ ಮಾಡತಕ್ಕದ್ದು ಮತ್ತು ವಿಚಾರಣೆ ಮಾಡಬೇಕೆಂದು ಅರ್ಜಿ ಸಲ್ಲಿಸಿರಲಿ ಅಥವಾ ಇಲ್ಲದಿರಲಿ ಅನುಚಿತವಾಗಿ ಕಿರುಕುಳಕಾರಿ ಅಥವಾ ಅನುಚಿತವಾದ ದೊಡ್ಡದೊಡ್ಡ ಪರಿಪ್ರಶ್ನೆಗಳನ್ನು ಹಾಜರುಪಡಿಸಲಾಗಿದೆ ಎಂದು ಖರ್ಚನ್ನು ನಿರ್ಧಾರಣೆ ಮಾಡುವ ಅಧಿಕಾರಿಯು ಅಥವಾ ನ್ಯಾಯಾಲಯವು ಅಭಿಪ್ರಾಯಪಟ್ಟರೆ ಸದರಿ ಪರಿಪ್ರಶ್ನೆಗಳಿಗೆ ಮತ್ತು ಅವುಗಳ ಉತ್ತರಗಳಿಗೆ ತಗುಲಿದ ಖರ್ಚನ್ನು ಯಾವುದೇ ಸಂದರ್ಭದಲ್ಲಿ ತಪ್ಪಿತಸ್ಥ ಪಕ್ಷಕಾರನು ಸಂದಾಯ ಮಾಡತಕ್ಕದ್ದು.

(4) ಪ್ರರಿಪ್ರಶ್ನೆಗಳು, ಸಂದರ್ಭಗಳು ಅಗತ್ಯಪಡಿಸಬಹುದಾದಂಥ ವ್ಯತ್ಯಾಸಗಳ ಸಹಿತ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ರಲ್ಲಿ ಒದಗಿಸಿರುವ ಪರಿಶಿಷ್ಟ 'ಸಿ' ಯ ನಮೂನೆ '2' ರ ಪ್ರಕಾರ ಇರತಕ್ಕದ್ದು.

(5) ದಾವೆಯ ಯಾರೇ ಪಕ್ಷಕಾರನು, ತನ್ನ ಹೆಸರಿನಲ್ಲಿ ಅಥವಾ ಇತರ ಯಾರೇ ಅಧಿಕಾರಿಯ ಅಥವಾ ಇತರ ವ್ಯಕ್ತಿಯ ಹೆಸರಿನಲ್ಲಿ ದಾವೆ ಹೂಡಲು ಅಥವಾ ದಾವೆಗೆ ಗುರಿಯಾಗಲು ಕಾನೂನಿನ ಮೂಲಕ ಅಧಿಕಾರ ಪಡೆದಿರುವಲ್ಲಿ, ಆ ಯಾವುದೇ ಪಕ್ಷಕಾರನು ನಿಗಮಿತವಾಗಿರುವ ಅಥವಾ ನಿಗಮಿತವಾಗಿರದ ನಿಗಮವಾಗಿರುವಲ್ಲಿ ಅಥವಾ ವ್ಯಕ್ತಿಗಳ ನಿಕಾಯವಾಗಿರುವಲ್ಲಿ, ಅಂಥ ನಿಗಮದ ಅಥವಾ ನಿಕಾಯದ ಯಾರೇ ಸದಸ್ಯನಿಗೆ ಅಥವಾ ಅಧಿಕಾರಿಗೆ, ಪರಿಪ್ರಶ್ನೆಗಳನ್ನು ಕೊಡಲು ತನಗೆ ಅನುಮತಿ ಕೊಡುವ ಆದೇಶವನ್ನು ಮಾಡಬೇಕೆಂದು ಯಾರೇ ಎದುರು ಪಕ್ಷಕಾರನು ಅರ್ಜಿಯನ್ನು ಸಲ್ಲಿಸಬಹುದು ಮತ್ತು ತದನುಸಾರವಾಗಿ ಆದೇಶವನ್ನು ಮಾಡಬಹುದು.

(6) ಯಾವುದೇ ಪರಿಪ್ರಶ್ನೆಯು, ನಿಂದನೆಯಿಂದ ಕೂಡಿದ ಅಥವಾ ಅಪ್ರಸ್ತುತ ಅಥವಾ ದಾವೆಯ ಉದ್ದೇಶಕ್ಕಾಗಿ ಅದು ಸದ್ಭಾವನೆಯಿಂದ ಕೊಡಲಾಗಿಲ್ಲ ಅಥವಾ ವಿಚಾರಣೆ ಮಾಡಿದ ವಿಷಯಗಳು ಆ ಹಂತದಲ್ಲಿ ಸಾಕಷ್ಟು ಮಹತ್ವದವುಗಳಲ್ಲ ಎಂಬ ಆಧಾರದ ಮೇಲೆ ಅಥವಾ ಇತರ ಯಾವುದೇ ಆಧಾರದ ಮೇಲೆ, ಅದಕ್ಕೆ ಉತ್ತರ ಕೊಡಲು ಆಕ್ಷೇಪಿಸಿದರೆ, ಉತ್ತರ ನೀಡುವುದಕ್ಕಾಗಿ ಅಫಿಡಾವಿಟ್ ಮೂಲಕ ಹಾಗೆ ಆಕ್ಷೇಪಣೆಯನ್ನು ಮಾಡಬಹುದು.

(7) ಯಾವುದೇ ಪರಿಪ್ರಶ್ನೆಗಳನ್ನು, ಅವು ಅನುಚಿತ ಅಥವಾ ಕಿರುಕುಳಕಾರಿಯಾಗಿದೆಯೆಂಬ ಆಧಾರದ ಮೇಲೆ ಅವುಗಳನ್ನು ತಳ್ಳಿ ಹಾಕಬಹುದು ಅಥವಾ ಅವು ಪ್ರಶ್ನೆಗಳೆಂಬ ಪೀಡನಕಾರಿಯಾದವು, ಅನಾವಶ್ಯಕವಾದವು ಅಥವಾ ನಿಂದನೆಯಿಂದ ಕೂಡಿದವುಗಳೆಂಬ ಆಧಾರದ ಮೇಲೆ ಅವುಗಳನ್ನು ತೆಗೆದುಹಾಕಬಹುದು ಮತ್ತು ಪರಿಪ್ರಶ್ನೆಗಳನ್ನು ಜಾರಿಗೊಳಿಸಿದ ಏಳು ದಿನಗಳೊಳಗಾಗಿ ಈ ಉದ್ದೇಶಕ್ಕಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಬಹುದು.

(8) ಭರ್ತಿ ಮಾಡಿದ ಅಫಿಡಾವಿಟ್ ಮೂಲಕ ಪ್ರಶ್ನಾವಳಿಗಳಿಗೆ ಹತ್ತು ದಿನಗಳೊಳಗೆ ಅಥವಾ ನ್ಯಾಯಾಲಯವು ಸಮ್ಮತಿಸಬಹುದಾದ ಕಾಲದೊಳಗೆ ಉತ್ತರಿಸತಕ್ಕದ್ದು.

(9) ಪ್ರಶ್ನಾವಳಿಗಳಿಗೆ ಕೊಟ್ಟ ಉತ್ತರದ ಅಫಿಡಾವಿಟ್ ಸಂದರ್ಭಗಳು ಅಗತ್ಯಪಡಿಸಬಹುದಾದಂಥ ವ್ಯತ್ಯಾಸಗಳ ಸಹಿತ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ರಲ್ಲಿ ಒದಗಿಸಿರುವ ನಮೂನೆ 3 ಪರಿಶಿಷ್ಟ–ಸಿ ಪ್ರಕಾರ ಇರತಕ್ಕದ್ದು.

(10) ಉತ್ತರ ರೂಪವಾಗಿರುವ ಯಾವುದೇ ಅಫಿಡಾವಿಟ್ ಬಗ್ಗೆ ಆಕ್ಷೇಪವನ್ನು ಮಾಡತಕ್ಕದ್ದಲ್ಲ, ಆದರೆ ಅಂಥ ಯಾವುದೇ ಅಫಿಡಾವಿಟ್ ಅಪರಿಪೂರ್ಣವಾಗಿದೆಯೆಂದು ಆಕ್ಷೇಪಿಸಿರುವಲ್ಲಿ, ಅದು ಅಪರಿಪೂರ್ಣವಾಗಿದೆಯೇ ಅಥವಾ ಅಪರಿಪೂರ್ಣವಾಗಿಲ್ಲವೇ ಎಂಬುದನ್ನು ನ್ಯಾಯಾಲಯವು ನಿರ್ಧರಿಸತಕ್ಕದ್ದು.

(11) ಯಾರಿಗೆ ಪರಿಪ್ರಶ್ನೆಗಳನ್ನು ಕೇಳಲಾಗಿದೆಯೋ ಆ ವ್ಯಕ್ತಿಯು ಉತ್ತರಿಸಲು ತಪ್ಪಿದರೆ ಅಥವಾ ನೀಡಬೇಕಾದಷ್ಟು ಉತ್ತರ ನೀಡದಿದ್ದರೆ, ಪರಿಪ್ರಶ್ನೆ ಮಾಡಿರುವ ಪಕ್ಷಕಾರನು, ಸಂದರ್ಭಾನುಸಾರ, ಆ ವ್ಯಕ್ತಿಯು ಉತ್ತರಿಸುವಂತೆ ಅಥವಾ ಇನ್ನಷ್ಟು ಉತ್ತರಿಸುವಂತೆ ಅಗತ್ಯಪಡಿಸುವ ಆದೇಶವನ್ನು ನೀಡಬೇಕೆಂದು ಕೋರಿ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಬಹುದು ಮತ್ತು ನ್ಯಾಯಾಲಯವು ನಿರ್ದೇಶಿಸಬಹುದಾದಂತೆ ಅಫಿಡಾವಿಟ್ ಮೂಲಕ ಅಥವಾ ಮೌಖಿಕ ವಿಚಾರಣೆಯ ಮೂಲಕ ಉತ್ತರಿಸಬೇಕೆಂದು ಅಥವಾ ಇನ್ನಷ್ಟು ಉತ್ತರಿಸಬೇಕೆಂದು ಅವನನ್ನು ಅಗತ್ಯಪಡಿಸಿ ಆದೇಶವನ್ನು ನೀಡಬಹುದು.

**3. ಪರಿಶೀಲನೆ.–** (1) ಪ್ರಮಾಣಪೂರ್ವಕವಾಗಿ ನೀಡಿದ ಲಿಖಿತ ಹೇಳಿಕೆಯನ್ನು ಅಥವಾ ಎದುರು ಕ್ಲೇಮಿಗೆ ಸಂಬಂಧಿಸಿದಂತೆ ಪ್ರಮಾಣಪೂರ್ವಕವಾಗಿ ನೀಡಿದ ಲಿಖಿಕ ಹೇಳಿಕೆಯನ್ನು – ಇವುಗಳಲ್ಲಿ ಯಾವುದನ್ನು ನಂತರದಲ್ಲಿ ಸಲ್ಲಿಸಲಾಗಿದೆಯೋ ಆ ದಿನದಿಂದ ಮೂವತ್ತು ದಿನಗಳೊಳಗೆ ಬಹಿರಂಗಪಡಿಸಿದ ಎಲ್ಲಾ ದಸ್ತಾವೇಜುಗಳ ಪರಿಶೀಲನೆಯನ್ನು ಎಲ್ಲ ಪಕ್ಷಕಾರರು ಪೂರ್ಣಗೊಳಿಸತಕ್ಕದ್ದು. ಅರ್ಜಿಯನ್ನು ಸಲ್ಲಿಸಿದ ಮೇಲೆ ನ್ಯಾಯಾಲಯವು, ಈ ಕಾಲಮಿತಿಯನ್ನು ವಿಸ್ತರಿಸಬಹುದು. ಆದರೆ ಯಾವುದೇ ಸಂದರ್ಭದಲ್ಲಿ ಮೂವತ್ತು ದಿನಗಳಿಗಿಂತ ಹೆಚ್ಚಿಗೆ ವಿಸ್ತರಿಸತಕ್ಕದ್ದಲ್ಲ.

(2) ವ್ಯವಹರಣೆಗಳ ಯಾವ ಇತರ ಪಕ್ಷಕಾರನು, ಯಾವ ದಸ್ತಾವೇಜುಗಳ ಪರಿಶೀಲನೆಗಾಗಿ ನಿರಾಕರಿಸಿದ್ದನೋ ಅಥವಾ ಹಾಜರುಪಡಿಸುವಂತೆ ನೋಟೀಸ್ ಕೊಡಲಾಗಿದ್ದರೂ ಹಾಜರುಪಡಿಸದಿದ್ದ ಅಂಥ ಪಕ್ಷಕಾರನು ಆ ದಸ್ತಾವೇಜುಗಳನ್ನು ಪರಿಶೀಲನೆಗಾಗಿ ಅಂಥ ದಸ್ತಾವೇಜುಗಳನ್ನು ಹಾಜರುಪಡಿಸುವಂತೆ ವ್ಯವಹರಣೆಗಳ ಯಾವುದೇ ಹಂತದಲ್ಲಿ ನ್ಯಾಯಾಲಯದಿಂದ ನಿರ್ದೇಶನಗಳನ್ನು ಕೋರಬಹುದು.

(3) ಉತ್ತರಗಳು ಮತ್ತು ಪ್ರತ್ಯುತ್ತರಗಳು (ನ್ಯಾಯಾಲಯವು ಅನುಮತಿಸಿದ್ದಲ್ಲಿ) ಮತ್ತು ವಿಚಾರಣೆಯೂ ಒಳಗೊಂಡಂತೆ ಅಂಥ ಅರ್ಜಿಗೆ ಸಂಬಂಧಿಸಿದ ಆದೇಶವನ್ನು, ಅಂಥ ಅರ್ಜಿಯನ್ನು ಸಲ್ಲಿಸಿದ ಮೂವತ್ತು ದಿನಗಳೊಳಗೆ ವಿಲೆ ಮಾಡತಕ್ಕದ್ದು.

(4) ಮೇಲ್ಕಂಡ ಅರ್ಜಿಯನ್ನು ಪುರಸ್ಕರಿಸಿದರೆ, ದಸ್ತಾವೇಜುಗಳ ಪರಿಶೀಲನೆಗಾಗಿ ಅದರ ಪ್ರತಿಗಳನ್ನು, ಅವುಗಳನ್ನು ಕೋರುವ ಪಕ್ಷಕಾರನಿಗೆ ಅಂಥ ಆದೇಶದ ಐದು ದಿನಗಳೊಳಗೆ ಒದಗಿಸತಕ್ಕದ್ದು.

(5) ಯಾವ ದಸ್ತಾವೇಜುಗಳನ್ನು ಬಹಿರಂಗಪಡಿಸಿಲ್ಲವೋ ಅಥವಾ ಪರಿಶೀಲನೆಗೆ ಕೊಟ್ಟಿಲ್ಲವೋ ಅವುಗಳನ್ನು, ನ್ಯಾಯಾಲಯದ ಅನುಮತಿಯನ್ನುಳಿದು ಮತ್ತು ಹೊರತಾಗಿ, ಆ ದಸ್ತಾವೇಜುಗಳನ್ನು ಆಧರಿಸಲು ಯಾರೇ ಪಕ್ಷಕಾರನಿಗೆ ಅನುಮತಿ ನೀಡತಕ್ಕದ್ದಲ್ಲ.

(6) ನ್ಯಾಯಾಲಯವು, ಯಾವ ಪಕ್ಷಕಾರನು ಉದ್ದೇಶಪೂರ್ವಕವಾಗಿ ಅಥವಾ ನಿರ್ಲಕ್ಷ್ಯದಿಂದ ದಾವೆಗೆ ಸಂಬಂಧಿಸಿದ ಅಥವಾ ಅದರ ಬಗ್ಗೆ ತೀರ್ಮಾನಿಸಲು ಅತ್ಯಾವಶ್ಯಕವಾಗಿರುವ ಮತ್ತು ಯಾವ ದಸ್ತಾವೇಜುಗಳು ಅವನ ಅಧಿಕಾರದಲ್ಲಿ, ಸ್ವಾಧೀನತೆಯಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿ ಇವೆಯೋ ಅಥವಾ ಆ ಯಾವುದೇ ದಸ್ತಾವೇಜುಗಳ ಪ್ರತಿಗಳನ್ನು,

ತಪ್ಪಾಗಿ ಅಥವಾ ಅನುಚಿತವಾಗಿ ತಡೆಹಿಡಿಯಲಾಗಿದೆಯೋ ಅಥವಾ ನಿರಾಕರಿಸಲಾಗಿದೆಯೋ ಆ ಎಲ್ಲಾ ದಸ್ತಾವೇಜುಗಳನ್ನು ಬಹಿರಂಗಪಡಿಸಲು ವಿಫಲನಾದ ಆ ತಪ್ಪಿತಸ್ಥ ಪಕ್ಷಕಾರನ ಮೇಲೆ ಹೆಚ್ಚಿನ ಖರ್ಚುಗಳನ್ನು ವಿಧಿಸಬಹುದು.

**4. ದಸ್ತಾವೇಜುಗಳ ಒಪ್ಪಿಗೆ ಮತ್ತು ನಿರಾಕರಣೆ.–** (1) ಪ್ರತಿಯೊಬ್ಬ ಪಕ್ಷಕಾರನು, ಬಹಿರಂಗಪಡಿಸಲಾಗಿರುವ ಮತ್ತು ಯಾವ ದಸ್ತಾವೇಜುಗಳ ಪರಿಶೀಲನೆಯನ್ನು ಮಾಡಲಾಗಿದೆಯೋ ಆ ದಸ್ತಾವೇಜುಗಳನ್ನು, ಪರಿಶೀಲನೆ ಪೂರ್ಣಗೊಂಡ ದಿನದಿಂದ ಹದಿನೈದು ದಿನಗಳೊಳಗೆ ಅಥವಾ ನ್ಯಾಯಾಲಯವು ನಿಗದಿಪಡಿಸಬಹುದಾದ ದಿನಾಂಕದೊಳಗೆ ಎಲ್ಲಾ ದಸ್ತಾವೇಜುಗಳಿಗೆ ಒಪ್ಪಿಗೆ ನೀಡುವ ಅಥವಾ ನಿರಾಕರಿಸುವ ಬಗ್ಗೆ ಪ್ರಮಾಣಪೂರ್ವಕ ಹೇಳಿಕೆಯನ್ನು ಸಲ್ಲಿಸತಕ್ಕದ್ದು.

(2) ಒಪ್ಪಿಗೆ ನೀಡುವ ಅಥವಾ ನಿರಾಕರಿಸುವ ಬಗ್ಗೆ ಪ್ರಮಾಣಪೂರ್ವಕ ಹೇಳಿಕೆಯನ್ನು, ಅಂಥ ಪಕ್ಷಕಾರನು,–

(ಎ) ದಸ್ತಾವೇಜುಗಳಲ್ಲಿರುವ ವಿಷಯದ ಸರಿತನವನ್ನು;

(ಬಿ) ದಸ್ತಾವೇಜುಗಳ ಅಸ್ತಿತ್ವವನ್ನು;

(ಸಿ) ದಸ್ತಾವೇಜುಗಳ ಅಮಲ್ಜಾರಿಗೊಳಿಸುವಿಕೆಯನ್ನು;

(ಡಿ) ದಸ್ತಾವೇಜುಗಳ ಹೊರಡಿಸುವುದನ್ನು ಅಥವಾ ಸ್ವೀಕರಿಸುವುದನ್ನು; ಮತ್ತು

(ಇ) ದಸ್ತಾವೇಜಿನ ಅಭಿರಕ್ಷೆಯನ್ನು

– ಒಪ್ಪಿಕೊಂಡಿರುವನೋ ಅಥವಾ ನಿರಾಕರಿಸುವನೋ ಎಂಬುದನ್ನು ಸ್ಪಷ್ಟವಾಗಿ ವಿವರಿಸತಕ್ಕದ್ದು.

**ವಿವರಣೆ.–** ಉಪನಿಯಮ (2) (ಬಿ) ಅನುಸಾರ ಮಾಡಿದ ದಸ್ತಾವೇಜಿನ ಅಸ್ತಿತ್ವದ ಬಗ್ಗೆ ಒಪ್ಪಿಗೆ ಅಥವಾ ನಿರಾಕರಣೆಯು, ದಸ್ತಾವೇಜಿನಲ್ಲಿ ಒಳಾಂಶಗಳ ಒಪ್ಪಿಗೆ ಅಥವಾ ನಿರಾಕರಣೆಯನ್ನು ಒಳಗೊಳ್ಳತಕ್ಕದ್ದು.

(3) ಪ್ರತಿಯೊಬ್ಬ ಪಕ್ಷಕಾರನು, ಮೇಲ್ಕಂಡವುಗಳ ಪೈಕಿ ಯಾವುದೇ ದಸ್ತಾವೇಜನ್ನು ನಿರಾಕರಿಸುವುದಕ್ಕಾಗಿನ ಕಾರಣಗಳನ್ನು ವಿವರಿಸತಕ್ಕದ್ದು ಮತ್ತು ಕೇವಲ ನಿರಾಕರಣೆಗಳನ್ನು ಮತ್ತು ಸಮರ್ಥಿಸಲಾಗದಿದ್ದ ನಿರಾಕರಣೆಗಳನ್ನು, ದಸ್ತಾವೇಜಿನ ನಿರಾಕರಣೆಗಳಾಗಿವೆ ಎಂದು ಭಾವಿಸತಕ್ಕದ್ದಲ್ಲ ಮತ್ತು ಅಂಥ ದಸ್ತಾವೇಜುಗಳ ರುಜುವಾತಿನ ಬಗ್ಗೆ ನ್ಯಾಯಾಲಯವು ವಿವೇಚನೆಯ ಪ್ರಕಾರ ವಿನಾಯಿತಿ ನೀಡಬಹುದು.

(4) ಆದಾಗ್ಯೂ ಯಾರೇ ಪಕ್ಷಕಾರನು, ನಿರಾಕರಿಸುವ ಪಕ್ಷಕಾರನು, ಯಾವ ದಸ್ತಾವೇಜುಗಳ ಸಂಬಂಧದಲ್ಲಿ ಮೂರನೇ ಪಕ್ಷಕಾರನಾಗಿರುವನೋ, ಆ ದಸ್ತಾವೇಜುಗಳ ಬಗ್ಗೆ ಖುದ್ದಾಗಿ ತಿಳಿಯದಿರುವ ಮತ್ತು ನಿರಾಕರಿಸುವ ಪಕ್ಷಕಾರನು ಯಾವ ದಸ್ತಾವೇಜುಗಳಿಗೆ ಯಾವುದೇ ರೀತಿಯಲ್ಲಿ ಪಕ್ಷಕಾರನಾಗಿಲ್ಲವೋ ಆ ದಸ್ತಾವೇಜುಗಳ ನಿರಾಕರಣೆಯನ್ನು ಮಾತ್ರವೇ ಸಲ್ಲಿಸಬಹುದು.

(5) ಒಪ್ಪಿಗೆಗಳ ಮತ್ತು ನಿರಾಕರಣೆಗಳ ಪ್ರಮಾಣಪೂರ್ವಕ ಹೇಳಿಕೆಗೆ ಸಮರ್ಥನೆಯಾಗಿ, ಪ್ರಮಾಣಪೂರ್ವಕ ಹೇಳಿಕೆಯ ವಿಷಯಗಳ ಸರಿತನವನ್ನು ಸ್ಥಿರೀಕರಿಸಿ ಅಫಿಡಾವಿಟ್‌ನ್ನು ಸಲ್ಲಿಸತಕ್ಕದ್ದು.

(6) ಮೇಲ್ಕಂಡ ಯಾವುದೇ ಮಾನದಂಡಗಳ ಪ್ರಕಾರ, ದಸ್ತಾವೇಜನ್ನು ಒಪ್ಪಿಕೊಳ್ಳಲು ಅನುಚಿತವಾಗಿ ನಿರಾಕರಿಸಿದ್ದಾನೆಂದು ನ್ಯಾಯಾಲಯವು ತೀರ್ಮಾನಿಸಿದರೆ, ದಸ್ತಾವೇಜನ್ನು ಒಪ್ಪಿಕೊಳ್ಳುವುದನ್ನು ನಿರ್ಧರಿಸುವುದಕ್ಕಾಗಿ (ಹೆಚ್ಚಿನ ಖರ್ಚುಗಳೂ ಒಳಗೊಂಡಂತೆ) ಖರ್ಚುಗಳನ್ನು ಅಂಥ ಪಕ್ಷಕಾರನಿಗೆ ನ್ಯಾಯಾಲಯವು ವಿಧಿಸಬಹುದು.

(7) ನ್ಯಾಯಾಲಯವು, ಯಾವುದೇ ದಸ್ತಾವೇಜುಗಳ ಬಗ್ಗೆ ಮತ್ತಷ್ಟು ರುಜುವಾತನ್ನು ವಿನಾಯಿತಿಸುವುದೋ ಅಥವಾ ನಿರಾಕರಿಸುವುದೋ, ಅದೂ ಒಳಗೊಂಡಂತೆ, ದಸ್ತಾವೇಜುಗಳನ್ನು ಒಪ್ಪಿಕೊಳ್ಳುವುದಕ್ಕೆ ಸಂಬಂಧಿಸಿದ ಆದೇಶವನ್ನು ಮಾಡಬಹುದು.

**5. ದಸ್ತಾವೇಜುಗಳನ್ನು ಹಾಜರುಪಡಿಸುವುದು.–** (1) ವ್ಯವಹರಣೆಯ ಯಾರೇ ಪಕ್ಷಕಾರನು, ಯಾವುದೇ ದಾವೆಯು ಇತ್ಯರ್ಥದಲ್ಲಿರುವ ಯಾವುದೇ ಕಾಲದಲ್ಲಿ, ದಾವೆಯಲ್ಲಿ ಪ್ರಶ್ನಿತವಾಗಿರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ದಸ್ತಾವೇಜುಗಳು ಯಾರ ಸ್ವಾಧೀನದಲ್ಲಿವೆಯೋ ಆ ಪಕ್ಷಕಾರನು ಅವುಗಳನ್ನು ಹಾಜರುಪಡಿಸುವಂತೆ ಕೋರಬಹುದು ಅಥವಾ ನ್ಯಾಯಾಲಯವು ಆದೇಶ ಮಾಡಬಹುದು.

(2) ಅಂಥ ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿ ನೋಟೀಸನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ರ ಪರಿಶಿಷ್ಟ 'ಸಿ' ಯಲ್ಲಿ ಕೊಟ್ಟಿರುವ ನಮೂನೆ–7 ರಲ್ಲಿ ನೀಡತಕ್ಕದ್ದು.

(3) ದಸ್ತಾವೇಜನ್ನು ಹಾಜರುಪಡಿಸುವಂತೆ ಯಾರಿಗೆ ಅಂಥ ನೋಟೀಸನ್ನು ಕೊಡಲಾಗಿದೆಯೋ ಆ ಯಾರೇ ಪಕ್ಷಕಾರನಿಗೆ ಅಥವಾ ವ್ಯಕ್ತಿಗೆ ಏಳು ದಿನಗಳಿಗೆ ಕಡಿಮೆಯಲ್ಲದ ನೋಟೀಸನ್ನು ನೀಡತಕ್ಕದ್ದು ಮತ್ತು ಅಂಥ ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿ ಅಥವಾ ಅಂಥ ದಸ್ತಾವೇಜನ್ನು ಹಾಜರುಪಡಿಸುವುದಕ್ಕೆ ಅವರಿಗೆ ಸಾಧ್ಯವಾಗದಿರುವುದಕ್ಕಾಗಿ ಉತ್ತರ ನೀಡಲು ಹದಿನೈದು ದಿನಗಳಿಗಿಂತ ಹೆಚ್ಚಿನ ಕಾಲವನ್ನು ನೀಡತಕ್ಕದ್ದಲ್ಲ.

(4) ನ್ಯಾಯಾಲಯವು, ದಸ್ತಾವೇಜನ್ನು ಹಾಜರುಪಡಿಸುವುದಕ್ಕಾಗಿ ನೋಟೀಸ್ ನೀಡಿದ ತರುವಾಯ ಅಂಥ ದಸ್ತಾವೇಜನ್ನು ಹಾಜರುಪಡಿಸಲು ನಿರಾಕರಿಸುವ ಮತ್ತು ಹಾಗೆ ಹಾಜರುಪಡಿಸದಿರುವುದಕ್ಕಾಗಿ ಸಾಕಷ್ಟು ಕಾರಣಗಳನ್ನು ಕೊಡದಿದ್ದಲ್ಲಿ ಪಕ್ಷಕಾರನ ವಿರುದ್ಧ ಪ್ರತಿಕೂಲ ತೀರ್ಮಾನಕ್ಕೆ ಬರಬಹುದು ಮತ್ತು ಖರ್ಚಿಗಾಗಿ ಆದೇಶ ಮಾಡಬಹುದು.

**6. ವಿದ್ಯುನ್ಮಾನ ದಾಖಲೆಗಳು.–** (1) ವಿದ್ಯುನ್ಮಾನ ದಾಖಲೆಗಳನ್ನು ಪ್ರಕಟಪಡಿಸುವ ಮತ್ತು ಪರಿಶೀಲನಾ ಸಂದರ್ಭದಲ್ಲಿ ಮಾಹಿತಿ ತಂತ್ರಜ್ಞಾನ ಅಧಿನಿಯಮ, 2000 (2000 ದ 21) ದಲ್ಲಿ ಪರಿಭಾಷಿಸಿದಂತೆ ಮುದ್ರಿತ ಪ್ರತಿಗಳನ್ನು ಒದಗಿಸುವ ಸಂದರ್ಭದಲ್ಲಿ, ಮೇಲ್ಕಂಡ ಉಪಬಂಧಗಳನ್ನು ಪರ್ಯಾಪ್ತವಾಗಿ ಪಾಲಿಸತಕ್ಕದ್ದು.

(2) ಪಕ್ಷಕಾರರ ವಿವೇಚನೆಯಂತೆ ಅಥವಾ ಅಗತ್ಯಪಡಿಸಿದಲ್ಲಿ (ಆಡಿಯೋ ಅಥವಾ ವಿಡಿಯೋದಲ್ಲಿರುವ ವಿಷಯಗಳನ್ನು ಆಧರಿಸಲು ಇಚ್ಛಿಸಿದ್ದಾಗ) ವಿದ್ಯುನ್ಮಾನ ದಾಖಲೆಗಳ ಪ್ರತಿಗಳನ್ನು, ಮುದ್ರಿತ ಪ್ರತಿಗಳ ಜೊತೆಗೆ ಅಥವಾ ಅವುಗಳ ಬದಲಾಗಿ ಒದಗಿಸಬಹುದು.

(3) ವಿದ್ಯುನ್ಮಾನ ದಾಖಲೆಗಳು ಪ್ರಕಟಪಡಿಸಿದ ದಸ್ತಾವೇಜುಗಳ ಭಾಗವಾಗಿರುವಲ್ಲಿ, ಪಕ್ಷಕಾರನು ಪ್ರಮಾಣ ಮಾಡಿ ಸಲ್ಲಿಸಬೇಕಾದ ಘೋಷಣೆಯಲ್ಲಿ,–

(ಎ) ಅಂಥ ವಿದ್ಯುನ್ಮಾನ ದಾಖಲೆಗಳಿಗೆ ಪಕ್ಷಕಾರರಾಗಿರುವವರನ್ನು;

(ಬಿ) ಯಾವ ರೀತಿಯಲ್ಲಿ ಅಂಥ ವಿದ್ಯುನ್ಮಾನ ದಾಖಲೆಯನ್ನು ಹಾಜರುಪಡಿಸಲಾಗಿದೆ ಮತ್ತು ಅದನ್ನು ಯಾರು ಹಾಜರುಪಡಿಸಿದರು ಎಂಬುದನ್ನು;

(ಸಿ) ವಿದ್ಯುನ್ಮಾನ ದಾಖಲೆಗಳಲ್ಲಿ ಪ್ರತಿಯೊಂದು ದಾಖಲೆಯನ್ನು ಸಿದ್ಧಪಡಿಸಿದ ಅಥವಾ ಸ್ಟೋರ್ ಮಾಡಿದ ಅಥವಾ ನೀಡಿದ ಅಥವಾ ಸ್ವೀಕರಿಸಿದ ದಿನಾಂಕಗಳನ್ನು ಮತ್ತು ಸಮಯವನ್ನು;

(ಡಿ) ಅಂಥ ವಿದ್ಯುನ್ಮಾನ ದಾಖಲೆಗಳ ಮೂಲವನ್ನು ಮತ್ತು ವಿದ್ಯುನ್ಮಾನ ದಾಖಲೆಯನ್ನು ಮುದ್ರಿಸಲಾದ ದಿನಾಂಕ ಮತ್ತು ಸಮಯವನ್ನು;

(ಇ) ಇ–ಮೇಲ್ ಐಡಿಗಳ ಸಂದರ್ಭದಲ್ಲಿ ಅಂಥ ಇ–ಮೇಲ್ ಐಡಿಗಳ ಮಾಲೀಕತ್ವ, ಅಭಿರಕ್ಷೆ ಮತ್ತು ಪ್ರವೇಶ ಇವುಗಳನ್ನು;

(ಎಫ್) ಗಣಕಯಂತ್ರದಲ್ಲಿ ಅಥವಾ ಗಣಕಯಂತ್ರ ರಿಸೋರ್ಸ್‌ನಲ್ಲಿ (ಹೊರಗಿನ ಸರ್ವರ್‌ಗಳ ಅಥವಾ ಕ್ಲೌಡ್‌ಗಳೂ ಒಳಗೊಂಡಂತೆ) ಸ್ಟೋರ್ ಮಾಡಿದ ದಸ್ತಾವೇಜುಗಳ ಸಂದರ್ಭದಲ್ಲಿ ಮಾಲೀಕತ್ವದ ವಿವರಗಳು;

ಕಂಪ್ಯೂಟರ್‌ನಲ್ಲಿಯ ಅಥವಾ ಕಂಪ್ಯೂಟರ್ ರಿಸೋರ್ಸ್‌ನಲ್ಲಿನ ಅಂಥ ದತ್ತಾಂಶ (ಡಾಟಾ) ಗಳ ಅಭಿರಕ್ಷೆ ಮತ್ತು ಪ್ರವೇಶ– ಇವುಗಳ ವಿವರಗಳನ್ನು;

(ಜಿ) ಒಳಾಂಶಗಳ ಮತ್ತು ಅವುಗಳ ಸರಿತನದ ಬಗ್ಗೆ ಹೇಳಿಕೆದಾರನ ತಿಳುವಳಿಕೆಯನ್ನು;

(ಹೆಚ್) ಅಂಥ ದಸ್ತಾವೇಜುಗಳನ್ನು ಅಥವಾ ದತ್ತಾಂಶಗಳನ್ನು ಸಿದ್ಧಪಡಿಸುವುದಕ್ಕಾಗಿ ಅಥವಾ ಸ್ವೀಕರಿಸುವುದಕ್ಕಾಗಿ ಅಥವಾ ಸ್ಟೋರ್ ಮಾಡುವುದಕ್ಕಾಗಿ ಬಳಸಿದ ಕಂಪ್ಯೂಟರ್ ಅಥವಾ ಕಂಪ್ಯೂಟರ್ ರಿಸೋರ್ಸ್ ಸರಿಯಾಗಿ ಕಾರ್ಯನಿರ್ವಹಿಸುತ್ತಿತ್ತೋ ಎಂಬುದನ್ನು ಅಥವಾ ದೋಷಪೂರಿತವಾಗಿತ್ತೇ ಎಂದರೆ ಸ್ಟೋರ್ ಮಾಡಿದ ದಸ್ತಾವೇಜಿಗೆ ಬಾಧಕವಾಗದಂತೆ ದೋಷಪೂರಿತವಾಗಿತ್ತೇ ಎಂಬುದನ್ನು,

(ಐ) ಒದಗಿಸಲಾದ ಮುದ್ರಿತ ಪ್ರತಿಯನ್ನು ಅಥವಾ ಪ್ರತಿಯನ್ನು, ಮೂಲ ಕಂಪ್ಯೂಟರಿನಿಂದ ಅಥವಾ ಅಥವಾ ಕಂಪ್ಯೂಟರ್ ರಿಸೋರ್ಸ್‌ನಿಂದ ತೆಗೆದುಕೊಳ್ಳಲಾಗಿತ್ತೇ ಎಂಬುದನ್ನು

– ನಿರ್ದಿಷ್ಟಪಡಿಸತಕ್ಕದ್ದು.

(4) ಯಾವುದೇ ವಿದ್ಯುನ್ಮಾನ ದಾಖಲೆಗಳಲ್ಲಿರುವ ಮುದ್ರಿತ ಪ್ರತಿಗಳನ್ನು ಅಥವಾ ಪ್ರತಿಯನ್ನು ಆಧರಿಸಿರುವ ಪಕ್ಷಕಾರರು, ವಿದ್ಯುನ್ಮಾನ ದಾಖಲೆಗಳನ್ನು ಪರಿಶೀಲನೆಗಾಗಿ ಕೊಡುವಂತೆ ಅಗತ್ಯಪಡಿಸತಕ್ಕದ್ದಲ್ಲ: ಪರಂತು, ಹಾಜರುಪಡಿಸಿರುವ ಪ್ರತಿಯೊಂದು ಅಂಥ ಪ್ರತಿಯನ್ನು ಮೂಲ ವಿದ್ಯುನ್ಮಾನ ದಾಖಲೆಯಿಂದ ಸಿದ್ಧಪಡಿಸಲಾಗಿದೆ ಎಂದು ಅಂಥ ಪಕ್ಷಕಾರನು ಘೋಷಣೆಯನ್ನು ಮಾಡತಕ್ಕದ್ದು.

(5) ವ್ಯವಹರಣೆಗಳ ಯಾವುದೇ ಹಂತದಲ್ಲಿ ವಿದ್ಯುನ್ಮಾನ ದಾಖಲೆಗಳ ಅಂಗೀಕಾರಾರ್ಹತೆಗಾಗಿ ನ್ಯಾಯಾಲಯವು ನಿರ್ದೇಶನವನ್ನು ನೀಡಬಹುದು.

(6) ಯಾರೇ ಪಕ್ಷಕಾರನು ನ್ಯಾಯಾಲಯದಿಂದ ನಿರ್ದೇಶನಗಳನ್ನು ಕೋರಬಹುದು ಮತ್ತು ಅಂಥ ವಿದ್ಯುನ್ಮಾನ ದಾಖಲೆಯನ್ನು ಅಂಗೀಕರಿಸುವುದಕ್ಕೆ ಮೊದಲು, ಮೆಟಾಡೇಟಾ ಅಥವಾ ಲಾಗ್‌ಗಳು ಒಳಗೊಂಡಂತೆ ಯಾವುದೇ ವಿದ್ಯುನ್ಮಾನ ದಾಖಲೆಯ ಹೆಚ್ಚಿನ ರುಜುವಾತನ್ನು ಸಲ್ಲಿಸುವುದಕ್ಕಾಗಿ ನ್ಯಾಯಾಲಯವು ತನ್ನ ವಿವೇಚನೆಯಂತೆ ನಿರ್ದೇಶನಗಳನ್ನು ನೀಡಬಹುದು.

**7. ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ ಕೆಲವು ಉಪಬಂಧಗಳು ಅನ್ವಯವಾಗತಕ್ಕದ್ದಲ್ಲ.–** ಸಂದೇಹ ನಿವಾರಣೆಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ರ ಕ್ರಮಾದೇಶ XIII, ನಿಯಮ 1, ಕ್ರಮಾದೇಶ VII ನಿಯಮ 14 ಮತ್ತು ಕ್ರಮಾದೇಶ VIII, ನಿಯಮ 1ಎ ಇವು ಉಚ್ಚ ನ್ಯಾಯಾಲಯದ ವಾಣಿಜ್ಯ ವಿಭಾಗಗಳ ಅಥವಾ ವಾಣಿಜ್ಯ ನ್ಯಾಯಾಲಯಗಳ ಮುಂದೆ ಇರುವ ದಾವೆಗಳಿಗೆ ಅಥವಾ ಅರ್ಜಿಗಳಿಗೆ ಅನ್ವಯವಾಗತಕ್ಕದ್ದಲ್ಲವೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ.".

**5. ಹೊಸ ಕ್ರಮಾದೇಶ XIII–ಎ ಅನ್ನು ಸೇರಿಸುವುದು.–** ಸಂಹಿತೆಯ ಕ್ರಮಾದೇಶ XIIIರ ತರುವಾಯ, ಕ್ರಮಾದೇಶವನ್ನು ಸೇರಿಸತಕ್ಕದ್ದು, ಎಂದರೆ:–

**"ಕ್ರಮಾದೇಶ XIII–ಎ**

**ಕ್ಷಿಪ್ರ ತೀರ್ಪು**

**1. ಈ ಕ್ರಮಾದೇಶವು ಅನ್ವಯವಾಗುವ ದಾವೆಗಳ ವ್ಯಾಪ್ತಿ ಮತ್ತು ವರ್ಗಗಳು.–** (1) ನ್ಯಾಯಾಲಯವು ಯಾವ ಪ್ರಕ್ರಿಯೆಯ ಮೂಲಕ, ಮೌಖಿಕ ಸಾಕ್ಷ್ಯವನ್ನು ದಾಖಲ್ಮಾಡದೇ ಯಾವುದೇ ವಾಣಿಜ್ಯ ವಿವಾದಕ್ಕೆ ಸಂಬಂಧಿಸಿದ ಕ್ಲೇಮನ್ನು ತೀರ್ಮಾನಿಸಬಹುದೋ ಆ ಪ್ರಕ್ರಿಯೆಯನ್ನು ಈ ಕ್ರಮಾದೇಶದಲ್ಲಿ ವಿವರಿಸಲಾಗಿದೆ.

(2) ಈ ಕ್ರಮಾದೇಶದ ಉದ್ದೇಶಕ್ಕಾಗಿ, "ಕ್ಲೇಮು" ಎಂಬ ಪದವು,–

(ಎ) ಕ್ಲೇಮಿನ ಭಾಗವನ್ನು;

(ಬಿ) ಯಾವ ನಿರ್ದಿಷ್ಟ ಪ್ರಶ್ನೆಯ ಮೇಲೆ ಕ್ಲೇಮು ಅವಲಂಬಿತವಾಗಿದೆಯೋ (ಸಂಪೂರ್ಣವಾಗಿರಲಿ ಅಥವಾ ಭಾಗಶಃ ಆಗಿರಲಿ) ಆ ನಿರ್ದಿಷ್ಟ ಪ್ರಶ್ನೆಯನ್ನು; ಅಥವಾ

(ಸಿ) ಸಂದರ್ಭಾನುಸಾರ, ಎದುರು ಕ್ಲೇಮನ್ನು

– ಒಳಗೊಳ್ಳತಕ್ಕದ್ದು.

(3) ಇದಕ್ಕೆ ವಿರುದ್ಧವಾದುದು ಏನೇ ಇದ್ದಾಗ್ಯೂ, ಈ ಕ್ರಮಾದೇಶದ ಅಡಿಯಲ್ಲಿ ಕ್ಷಿಪ್ರ ತೀರ್ಪಿಗಾಗಿ ಅರ್ಜಿಯನ್ನು, ಕ್ರಮಾದೇಶ XXXVIIರ ಅಡಿಯಲ್ಲಿ ಕ್ಷಿಪ್ರ ದಾವೆಯಾಗಿ ಮೂಲತಃ ಸಲ್ಲಿಸಲಾಗಿರುವ ಯಾವುದೇ ವಾಣಿಜ್ಯ ವಿವಾದದ ಸಂಬಂಧದಲ್ಲಿನ ದಾವೆಯಲ್ಲಿ ಸಲ್ಲಿಸತಕ್ಕದ್ದಲ್ಲ.

**2. ಕ್ಷಿಪ್ರ ತೀರ್ಮಾನಕ್ಕಾಗಿ ಅರ್ಜಿ ಸಲ್ಲಿಸುವ ಹಂತ.–** ಪ್ರತಿವಾದಿಗೆ ಸಮನ್ ಗಳನ್ನು ಜಾರಿಗೊಳಿಸಿದ ತರುವಾಯ, ಯಾವುದೇ ಕಾಲದಲ್ಲಿ ಕ್ಷಿಪ್ರ ತೀರ್ಪಿಗಾಗಿ ಅರ್ಜಿ ಸಲ್ಲಿಸಬಹುದು:

ಪರಂತು, ದಾವೆಯ ಸಂಬಂಧದಲ್ಲಿ ನ್ಯಾಯಾಲಯವು ವಿವಾದಾಂಶಗಳನ್ನು ರೂಪಿಸಿದ ತರುವಾಯ, ಅಂಥ ಅರ್ಜಿದಾರನು ಕ್ಷಿಪ್ರ ತೀರ್ಪಿಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸುವಂತಿಲ್ಲ.

**3. ಕ್ಷಿಪ್ರ ತೀರ್ಪಿಗಾಗಿ ಆಧಾರಗಳು.–** ನ್ಯಾಯಾಲಯವು,–

(ಎ) ಸಂದರ್ಭಾನುಸಾರ ವಾದಿಯು, ಕ್ಲೇಮಿನಲ್ಲಿ ಯಶಸ್ವಿಯಾಗುವ ಸಂಭವವಿರಬಹುದಾದ ಯಾವುದೇ ವಾಸ್ತವಿಕ ಭರವಸೆ ಇಲ್ಲ ಅಥವಾ ಪ್ರತಿವಾದಿಯು ಕ್ಲೇಮನ್ನು ಯಶಸ್ವಿಯಾಗಿ ಸಮರ್ಥಿಸಿಕೊಳ್ಳುವ ವಾಸ್ತವಿಕ ಭರವಸೆ ಇಲ್ಲ; ಮತ್ತು

(ಬಿ) ಮೌಖಿಕ ಸಾಕ್ಷ್ಯವನ್ನು ದಾಖಲಿಸಿಕೊಳ್ಳುವುದಕ್ಕಿಂತ ಮೊದಲು ಕ್ಲೇಮನ್ನು ಏಕೆ ವಿಲೆ ಮಾಡಬಾರದು ಎಂಬುದಕ್ಕೆ ಒತ್ತಾಯಪಡಿಸುವ ಇತರ ಯಾವುದೇ ಕಾರಣ ಇಲ್ಲ

– ಎಂದು ಪರಿಗಣಿಸಿದರೆ ಆ ಕ್ಲೇಮಿನ ಮೇಲೆ ವಾದಿಯ ಅಥವಾ ಪ್ರತಿವಾದಿಯ ವಿರುದ್ಧ ಕ್ಷಿಪ್ರ ತೀರ್ಪನ್ನು ನೀಡಬಹುದು.

**4. ಪ್ರಕ್ರಿಯೆ.–** (1) ಕ್ಷಿಪ್ರ ತೀರ್ಪಿಗಾಗಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವ ಅರ್ಜಿಯು ಅರ್ಜಿದಾರನು ತಾನು ಸುಸಂಗತವೆಂದು ಭಾವಿಸಬಹುದಾದ ಇತರ ಯಾವುದೇ ವಿಷಯಗಳ ಜೊತೆಗೆ, ಈ ಕೆಳಗೆ (ಎ) ದಿಂದ (ಎಫ್) ಉಪಖಂಡಗಳಲ್ಲಿ ವಿವರಿಸಿದ ವಿಷಯಗಳನ್ನು ಒಳಗೊಂಡಿರತಕ್ಕದ್ದು,–

(ಎ) ಈ ಅರ್ಜಿಯು, ಈ ಕ್ರಮಾದೇಶದ ಅಡಿಯಲ್ಲಿ ಕ್ಷಿಪ್ರ ತೀರ್ಪಿಗಾಗಿ ಸಲ್ಲಿಸಿದ ಅರ್ಜಿ ಆಗಿದೆಯೆಂಬ ಹೇಳಿಕೆಯನ್ನು ಒಳಗೊಂಡಿರತಕ್ಕದ್ದು;

(ಬಿ) ಅರ್ಜಿಯಲ್ಲಿ, ಸಂಕ್ಷಿಪ್ತವಾಗಿ ಎಲ್ಲ ಮುಖ್ಯ ವಾಸ್ತವಾಂಶಗಳನ್ನು ತಿಳಿಸಬೇಕು ಮತ್ತು ಕಾನೂನಿನ ಅಂಶ ಯಾವುದೇ ಇದ್ದರೆ ಅದನ್ನು ಗುರುತಿಸಬೇಕು;

(ಸಿ) ಅರ್ಜಿದಾರನು ದಸ್ತಾವೇಜಿನ ಸಾಕ್ಷ್ಯವನ್ನು ಆಧರಿಸಲು ಕೋರಿದ ಸಂದರ್ಭದಲ್ಲಿ,–

(i) ತನ್ನ ಅರ್ಜಿಯಲ್ಲಿ ಅಂಥ ದಸ್ತಾವೇಜಿನ ಸಾಕ್ಷ್ಯವನ್ನು ಸೇರಿಸಬೇಕು;

(ii) ಅರ್ಜಿದಾರನು ಆಧರಿಸಿರುವಂಥ ದಸ್ತಾವೇಜಿನ ಸಾಕ್ಷ್ಯದ ಸುಸಂಗತ ವಿಷಯಗಳನ್ನು ಗುರುತಿಸಬೇಕು;

(ಡಿ) ಅರ್ಜಿಯಲ್ಲಿ, ಸಂದರ್ಭಾನುಸಾರ ಕ್ಲೇಮಿನಲ್ಲಿ ಯಶಸ್ವಿಯಾಗುವ ಅಥವಾ ಕ್ಲೇಮನ್ನು ಸಮರ್ಥಿಸುವ ಯಾವುದೇ ನಿಜವಾದ ಭರವಸೆ ಏಕೆ ಇಲ್ಲ ಎಂಬ ಬಗ್ಗೆ ಕಾರಣವನ್ನು ತಿಳಿಸಬೇಕು;

(ಇ) ಅರ್ಜಿದಾರನು ಯಾವ ಪರಿಹಾರವನ್ನು ಕೋರುತ್ತಿದ್ದಾನೆ ಎಂಬುದನ್ನು ಅರ್ಜಿಯಲ್ಲಿ ತಿಳಿಸಬೇಕು ಮತ್ತು ಅಂಥ ಪರಿಹಾರವನ್ನು ಕೋರುವುದಕ್ಕಾಗಿ ಕಾರಣಗಳನ್ನು ಸಂಕ್ಷಿಪ್ತವಾಗಿ ತಿಳಿಸತಕ್ಕದ್ದು.

(2) ಕ್ಷಿಪ್ರ ತೀರ್ಪಿಗಾಗಿ, ವಿಚಾರಣೆಯನ್ನು ನಿಗದಿಪಡಿಸಿದ್ದಲ್ಲಿ, ಪ್ರತಿವಾದಿಗೆ,-

(ಎ) ವಿಚಾರಣೆಗಾಗಿ ನಿರ್ದಿಷ್ಟಪಡಿಸಿದ ದಿನಾಂಕ ಬಗ್ಗೆ; ಮತ್ತು

(ಬಿ) ಅಂಥ ವಿಚಾರಣೆಯಲ್ಲಿ ನ್ಯಾಯಾಲಯವು ತೀರ್ಮಾನಿಸಬೇಕೆಂದು ಪ್ರಸ್ತಾವಿಸಿರುವ ಕ್ಲೇಮಿನ ಬಗ್ಗೆ

– ಮೂವತ್ತು ದಿನಗಳ ನೋಟೀಸನ್ನು ಕೊಡಬೇಕು.

(3) ಪ್ರತಿವಾದಿಯು, ಕ್ಷಿಪ್ರ ತೀರ್ಪಿಗಾಗಿ ಸಲ್ಲಿಸಿರುವ ಅರ್ಜಿಯ ಬಗೆಗಿನ ನೋಟೀಸನ್ನು ಅಥವಾ ವಿಚಾರಣೆಯ ನೋಟೀಸನ್ನು (ಇವುಗಳಲ್ಲಿ ಯಾವುದು ಮೊದಲೋ ಅದನ್ನು) ಸ್ವೀಕರಿಸಿದ ಮೂವತ್ತು ದಿನಗಳೊಳಗೆ, ಪ್ರತಿವಾದಿಯು ಸುಸಂಗತವೆಂದು ತಾನು ಭಾವಿಸುವ ಇತರ ಯಾವುದೇ ವಿಷಯಗಳ ಜೊತೆಗೆ, (ಎ) ದಿಂದ (ಎಫ್) ವರೆಗೆ ವಿವರಿಸಿದ ವಿಷಯಗಳನ್ನು ಉದ್ದೇಶಿಸಿ ಉತ್ತರವನ್ನು ಸಲ್ಲಿಸಬಹುದು.

(ಎ) ಉತ್ತರದಲ್ಲಿ ನಿಖರವಾಗಿ,-

(i) ಎಲ್ಲಾ ವಾಸ್ತವಾಂಶಗಳನ್ನು ಬಹಿರಂಗಪಡಿಸಬೇಕು;

(ii) ಕಾನೂನಿನ ಅಂಶ ಯಾವುದಾದರೂ ಇದ್ದರೆ ಅದನ್ನು ಗುರುತಿಸಬೇಕು; ಮತ್ತು

(iii) ಅರ್ಜಿದಾರನು ಕೋರಿದ ಪರಿಹಾರವನ್ನು ಏಕೆ ಕೊಡಬಾರದೆಂಬ ಬಗ್ಗೆ ಕಾರಣಗಳನ್ನು ತಿಳಿಸಬೇಕು.

(ಬಿ) ಪ್ರತಿವಾದಿಯು, ತನ್ನ ಉತ್ತರದಲ್ಲಿ ಯಾವುದೇ ದಸ್ತಾವೇಜಿನ ಸಾಕ್ಷ್ಯವನ್ನು ಆಧರಿಸಲು ಕೋರಿದ ಸಂದರ್ಭದಲ್ಲಿ ಪ್ರತಿವಾದಿಯು,-

(i) ತನ್ನ ಉತ್ತರದಲ್ಲಿ ಅಂಥ ದಸ್ತಾವೇಜಿನ ಸಾಕ್ಷ್ಯವನ್ನು ಸೇರಿಸತಕ್ಕದ್ದು; ಮತ್ತು

(ii) ಪ್ರತಿವಾದಿಯು ಆಧರಿಸಿರುವ ಅಂಥ ದಸ್ತಾವೇಜಿನ ಸಾಕ್ಷ್ಯದ ಸಂಬಂಧಪಟ್ಟ ವಿಷಯವನ್ನು ಗುರುತಿಸತಕ್ಕದ್ದು.

(ಸಿ) ಉತ್ತರದಲ್ಲಿ, ಸಂದರ್ಭಾನುಸಾರ ಕ್ಲೇಮಿನ ಸಂಬಂಧದಲ್ಲಿ ಅಥವಾ ಕ್ಲೇಮನ್ನು ಸಮರ್ಥಿಸುವಲ್ಲಿ ಯಶಸ್ವಿಯಾಗುವ ನಿಜವಾದ ಭರವಸೆ ಇರುವ ಬಗ್ಗೆ ಕಾರಣಗಳನ್ನು ತಿಳಿಸಬೇಕು;

(ಡಿ) ಉತ್ತರದಲ್ಲಿ, ಅಧಿವಿಚಾರಣೆಗಾಗಿ ರೂಪಿಸಬೇಕಾದ ವಿವಾದಾಂಶಗಳನ್ನು ಸಂಕ್ಷಿಪ್ತವಾಗಿ ತಿಳಿಸಬೇಕು;

(ಇ) ಉತ್ತರದಲ್ಲಿ, ಯಾವ ಸಾಕ್ಷ್ಯವನ್ನು ಕ್ಷಿಪ್ರ ತೀರ್ಪಿನ ಹಂತದಲ್ಲಿ ದಾಖಲೆಯ ಮೇಲೆ ತರಲಾಗಲಿಲ್ಲವೋ ಅಂಥ ಮತ್ತಷ್ಟು ಸಾಕ್ಷ್ಯವನ್ನು ವಿಚಾರಣೆಯಲ್ಲಿ ದಾಖಲೆಯ ಮೇಲೆ ತರತಕ್ಕದ್ದು ಎಂಬುದನ್ನು ತಿಳಿಸಬೇಕು; ಮತ್ತು

(ಎಫ್) ಉತ್ತರದಲ್ಲಿ, ಸಾಕ್ಷ್ಯದ ಮೇಲೆ ಅಥವಾ ದಾಖಲೆಯ ಮೇಲೆ ಯಾವುದೇ ಮುಖ್ಯಾಂಶಗಳು ಇದ್ದರೆ, ಅವುಗಳ ಹಿನ್ನೆಲೆಯಲ್ಲಿ, ನ್ಯಾಯಾಲಯವು ಕ್ಷಿಪ್ರ ತೀರ್ಪು ನೀಡಲು ಮುಂದುವರಿಯಬಾರದು ಎಂಬುದನ್ನು ತಿಳಿಸಬೇಕು.

**5. ಕ್ಷಿಪ್ರ ತೀರ್ಪಿನ ವಿಚಾರಣೆಗಾಗಿ ಸಾಕ್ಷ್ಯ.–** (1) ಈ ಕ್ರಮಾದೇಶದಲ್ಲಿ ಏನೇ ಒಳಗೊಂಡಿದ್ದರೂ, ಪ್ರತಿವಾದಿಯು ಕ್ಷಿಪ್ರ ತೀರ್ಪಿಗಾಗಿ ಅರ್ಜಿಯ ವಿಚಾರಣೆ ನಡೆಯುವಾಗ ಹೆಚ್ಚಿನ ದಸ್ತಾವೇಜಿನ ಸಾಕ್ಷ್ಯದ ಮೇಲೆ ಆಧರಿಸಲು ಇಚ್ಛಿಸಿದರೆ, ಪ್ರತಿವಾದಿಯು,–

(ಎ) ಅಂಥ ದಸ್ತಾವೇಜಿನ ಸಾಕ್ಷ್ಯವನ್ನು ಸಲ್ಲಿಸಬೇಕು; ಮತ್ತು

(ಬಿ) ದಸ್ತಾವೇಜಿನ ಸಾಕ್ಷ್ಯದ ಪ್ರತಿಗಳನ್ನು ಅರ್ಜಿಗೆ ಪಕ್ಷಕಾರರಾಗಿರುವ ಇತರ ಪ್ರತಿಯೊಬ್ಬ ಪಕ್ಷಕಾರನಿಗೆ ವಿಚಾರಣೆ ದಿನಾಂಕಕ್ಕೆ ಕಡೇ ಪಕ್ಷ ಹದಿನೈದು ದಿನಗಳಿಗೆ ಮೊದಲು ಜಾರಿಗೊಳಿಸಬೇಕು.

(2) ಈ ಕ್ರಮಾದೇಶದಲ್ಲಿ ಏನೇ ಒಳಗೊಂಡಿದ್ದರೂ, ಕ್ಷಿಪ್ರ ತೀರ್ಪಿಗಾಗಿ ಅರ್ಜಿ ಸಲ್ಲಿಸಿರುವ ಅರ್ಜಿದಾರನು, ಪ್ರತಿವಾದಿಯ ದಸ್ತಾವೇಜಿನ ಸಾಕ್ಷ್ಯಕ್ಕೆ ಉತ್ತರವಾಗಿ ದಸ್ತಾವೇಜಿನ ಸಾಕ್ಷ್ಯವನ್ನು ಆಧರಿಸಲು ಇಚ್ಛಿಸಿದರೆ, ಅರ್ಜಿದಾರನು,–

(ಎ) ಉತ್ತರವಾಗಿ ಅಂಥ ದಸ್ತಾವೇಜಿನ ಸಾಕ್ಷ್ಯವನ್ನು ಸಲ್ಲಿಸಬೇಕು; ಮತ್ತು

(ಬಿ) ಅಂಥ ದಸ್ತಾವೇಜಿನ ಸಾಕ್ಷ್ಯದ ಪ್ರತಿಯನ್ನು ವಿಚಾರಣೆಯ ದಿನಾಂಕಕ್ಕೆ ಕಡೇ ಪಕ್ಷ ಐದು ದಿನಗಳಿಗೆ ಮೊದಲು ಪ್ರತಿವಾದಿಗೆ ಜಾರಿಗೊಳಿಸಬೇಕು.

(3) ಉಪನಿಯಮ (1) ಮತ್ತು (2) ರಲ್ಲಿ ತದ್ವಿರುದ್ಧವಾಗಿ ಏನೇ ಒಳಗೊಂಡಿದ್ದರೂ, ದಸ್ತಾವೇಜಿನ ಸಾಕ್ಷ್ಯವನ್ನು,–

(ಎ) ಅಂಥ ದಸ್ತಾವೇಜಿನ ಸಾಕ್ಷ್ಯವನ್ನು ಈಗಾಗಲೇ ಸಲ್ಲಿಸಿದ್ದರೆ, ಫೈಲ್ ಮಾಡಬೇಕೆಂದು; ಅಥವಾ

(ಬಿ) ಈಗಾಗಲೇ ಅದನ್ನು ಯಾವ ಪಕ್ಷಕಾರನಿಗೆ ಜಾರಿಗೊಳಿಸಲಾಗಿದೆಯೋ, ಆ ಪಕ್ಷಕಾರನಿಗೆ ಜಾರಿಗೊಳಿಸಬೇಕೆಂದು

– ಅಗತ್ಯಪಡಿಸತಕ್ಕದ್ದಲ್ಲ.

**6. ನ್ಯಾಯಾಲಯವು ಮಾಡಬಹುದಾದ ಆದೇಶಗಳು.–** (1) ಈ ಕ್ರಮಾದೇಶದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ, ಈ ಮುಂದಿನವುಗಳನ್ನು ಒಳಗೊಂಡಂತೆ, ನ್ಯಾಯಾಲಯವು ತನ್ನ ವಿವೇಚನೆಯಲ್ಲಿ ಅದು ಸೂಕ್ತವೆಂದು ಭಾವಿಸಬಹುದಾದ ಆದೇಶಗಳನ್ನು ಮಾಡಬಹುದು,–

(ಎ) ಕ್ಲೇಮಿನ ಮೇಲಿನ ತೀರ್ಪು;

(ಬಿ) ಇದರಡಿಯಲ್ಲಿ ನಮೂದಿಸಿದ 7ನೇ ನಿಯಮಕ್ಕೆ ಅನುಸಾರವಾಗಿ ಷರತ್ತುಬದ್ಧ ಆದೇಶ;

(ಸಿ) ಅರ್ಜಿಯನ್ನು ವಜಾಗೊಳಿಸುವುದು;

(ಡಿ) ಕ್ಲೇಮಿನ ಒಂದು ಭಾಗವನ್ನು ವಜಾ ಮಾಡುವುದು ಮತ್ತು ವಜಾ ಮಾಡದಿರುವ ಕ್ಲೇಮಿನ ಭಾಗದ ಮೇಲೆ ತೀರ್ಪು ನೀಡುವುದು;

(ಇ) ವಾದ ಪ್ರತಿವಾದ ಪತ್ರಗಳನ್ನು ತೆಗೆದು ಹಾಕುವುದು (ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಲಿ); ಅಥವಾ

(ಎಫ್) ಕ್ರಮಾದೇಶ XV–ಎ ಅಡಿಯಲ್ಲಿ ಮೊಕದ್ದಮೆಯ ನಿರ್ವಹಣೆಗಾಗಿ ಮುಂದುವರಿಯಲು ಮತ್ತಷ್ಟು ನಿದರ್ಶನಗಳು.

(2) ನ್ಯಾಯಾಲಯವು, ಉಪನಿಯಮ (1) (ಎ) ಇಂದ (ಎಫ್) ವರೆಗೆ ವಿವರಿಸಿದ ಆದೇಶಗಳ ಪೈಕಿ ಯಾವುದೇ ಆದೇಶವನ್ನು ಮಾಡಿದಲ್ಲಿ, ನ್ಯಾಯಾಲಯವು, ಅಂಥ ಆದೇಶವನ್ನು ಮಾಡುವುದಕ್ಕೆ ಕಾರಣಗಳನ್ನು ದಾಖಲಿಸತಕ್ಕದ್ದು.

7. **ಷರತ್ತುಬದ್ಧ ಆದೇಶ.–** (1) ಕ್ಲೇಮ್ ಅಥವಾ ಪ್ರತಿವಾದ ರಕ್ಷಣೆಯಲ್ಲಿ ಯಶಸ್ವಿಯಾಗುವುದು ಸಾಧ್ಯವಾಗಬಹುದೆಂದು, ಆದರೆ, ಹಾಗೆ ಮಾಡಲು ಸಾಧ್ಯವಾಗುವುದಿಲ್ಲವೆಂದು ನ್ಯಾಯಾಲಯಕ್ಕೆ ಕಂಡುಬಂದರೆ, ನಿಯಮ 6(1)(ಬಿ) ಯಲ್ಲಿ ವಿವರಿಸಿದಂತೆ ನ್ಯಾಯಾಲಯವು ಷರತ್ತುಬದ್ಧ ಆದೇಶ ಮಾಡಬಹುದು.

(2) ನ್ಯಾಯಾಲಯವು ಷರತ್ತುಬದ್ಧ ಆದೇಶ ಮಾಡಿದಲ್ಲಿ, ಅದು,–

(ಎ) ಈ ಮುಂದಿನ ಎಲ್ಲ ಅಥವಾ ಯಾವುದೇ ಷರತ್ತಿಗೆ ಒಳಪಟ್ಟು,–

(i) ಪಕ್ಷಕಾರನು ಒಂದು ಮೊತ್ತದ ಹಣವನ್ನು ನ್ಯಾಯಾಲಯದಲ್ಲಿ ಠೇವಣಿ ಇಡಬೇಕೆಂದು ಅಗತ್ಯಪಡಿಸುವ ಆದೇಶವನ್ನು;

(ii) ಪಕ್ಷಕಾರನು, ಸಂದರ್ಭಾನುಸಾರ ಕ್ಲೇಮಿಗೆ ಅಥವಾ ಪ್ರತಿರಕ್ಷೆಗೆ ಸಂಬಂಧಿಸಿದಂತೆ ನಿರ್ದಿಷ್ಟ ಕ್ರಮ ಕೈಗೊಳ್ಳಬೇಕೆಂದು ಪಕ್ಷಕಾರನನ್ನು ಅಗತ್ಯಪಡಿಸುವ ಆದೇಶವನ್ನು;

(iii) ಪಕ್ಷಕಾರನು, ಸಂದರ್ಭಾನುಸಾರ ಭದ್ರತೆಯನ್ನು ಕೊಡುವಂತೆ ಅಥವಾ ನ್ಯಾಯಾಲಯವು ಸೂಕ್ತವೆಂದು ಮತ್ತು ಸರಿಯಾದುದೆಂದು ಭಾವಿಸುವ ಖರ್ಚುಗಳನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ಭದ್ರತೆ ಒದಗಿಸುವಂತೆ ಅಗತ್ಯಪಡಿಸುವ ಆದೇಶವನ್ನು;

(iv) ದಾವೆಯು ಇತ್ಯರ್ಥದಲ್ಲಿರುವಾಗ ಯಾರೇ ಪಕ್ಷಕಾರನಿಗೆ ಉಂಟಾಗಬಹುದಾದ ನಷ್ಟವನ್ನು ತುಂಬಿಕೊಡುವುದಕ್ಕಾಗಿ, ನ್ಯಾಯಾಲಯವು ತನ್ನ ವಿವೇಚನೆಯಂತೆ ಸೂಕ್ತವೆಂದು ಭಾವಿಸುವ ಭದ್ರತೆಯನ್ನು ಒದಗಿಸುವುದೂ ಒಳಗೊಂಡಂತೆ, ಇತರ ಅಂಥ ಷರತ್ತುಗಳನ್ನು ವಿಧಿಸುವ ಆದೇಶವನ್ನು

– ಮಾಡಬಹುದು; ಮತ್ತು

(ಬಿ) ಷರತ್ತುಬದ್ಧ ಆದೇಶವನ್ನು ಪಾಲಿಸಲು ತಪ್ಪುವ ಪಕ್ಷಕಾರನ ವಿರುದ್ಧ ತೀರ್ಪು ನೀಡುವುದೂ ಒಳಗೊಂಡಂತೆ, ಷರತ್ತುಬದ್ಧ ಆದೇಶವನ್ನು ಪಾಲಿಸಲು ತಪ್ಪುವುದರಿಂದ ಉಂಟಾಗುವ ಪರಿಣಾಮಗಳನ್ನು ನಿರ್ದಿಷ್ಟಪಡಿಸಬಹುದು.

8. **ಖರ್ಚುಗಳನ್ನು ವಿಧಿಸುವುದಕ್ಕೆ ಅಧಿಕಾರ.–** ಸಂಹಿತೆಯ 35ನೇ ಮತ್ತು 35ಎ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಕ್ಷಿಪ್ರ ತೀರ್ಪಿಗಾಗಿನ ಅರ್ಜಿಯಲ್ಲಿ ಹೇಳಿದ ಖರ್ಚುಗಳ ಸಂದಾಯಕ್ಕೆ ನ್ಯಾಯಾಲಯವು ಆದೇಶ ಮಾಡಬಹುದು.".

6. **ಕ್ರಮಾದೇಶ XV ಅನ್ನು ಬಿಟ್ಟುಬಿಡತಕ್ಕದ್ದು.–** ಸಂಹಿತೆಯ ಕ್ರಮಾದೇಶ XV ಅನ್ನು ಬಿಟ್ಟುಬಿಡತಕ್ಕದ್ದು.

7. **ಕ್ರಮಾದೇಶ XV-ಎ ಅನ್ನು ಸೇರಿಸುವುದು.–** ಕ್ರಮಾದೇಶ XVನ ನಂತರ ಈ ಮುಂದಿನ ಕ್ರಮಾದೇಶವನ್ನು ಸೇರಿಸತಕ್ಕದ್ದು, ಎಂದರೆ:–

**"ಕ್ರಮಾದೇಶ XVಎ**

**ಮೊಕದ್ದಮೆ ನಿರ್ವಹಣೆಯ ವಿಚಾರಣೆ**

1. **ಮೊಕದ್ದಮೆ ನಿರ್ವಹಣೆಯ ಮೊದಲನೇ ವಿಚಾರಣೆ.–** ನ್ಯಾಯಾಲಯವು, ಮೊಕದ್ದಮೆ ನಿರ್ವಹಣೆಯ ಮೊದಲನೇ ವಿಚಾರಣೆಯನ್ನು, ದಾವೆಯ ಎಲ್ಲಾ ಪಕ್ಷಕಾರರು, ದಸ್ತಾವೇಜಿನ ಒಪ್ಪಿಗೆ ಅಥವಾ ನಿರಾಕರಣೆಗಾಗಿನ ಅಫಿಡಾವಿಟ್ ಅನ್ನು ಸಲ್ಲಿಸಿದ ದಿನಾಂಕದಿಂದ ನಾಲ್ಕು ವಾರಗಳಿಗೆ ಮೀರದ ದಿನದಂದು ಮೊಕದ್ದಮೆ ನಿರ್ವಹಣೆಯ ಮೊದಲನೇ ವಿಚಾರಣೆ ನಡೆಸತಕ್ಕದ್ದು.

**2. ಮೊಕದ್ದಮೆ ನಿರ್ವಹಣೆಯ ವಿಚಾರಣೆಯಲ್ಲಿ ಮಾಡಬೇಕಾದ ಆದೇಶಗಳು.–** ಮೊಕದ್ದಮೆ ನಿರ್ವಹಣೆಯ ವಿಚಾರಣೆ, ಪಕ್ಷಕಾರರ ವಿಚಾರಣೆ ಮಾಡಿದ ತರುವಾಯ ಅಧಿವಿಚಾರಣೆ ಮಾಡಬೇಕಾದ ಸಂಗತಿ ಮತ್ತು ಕಾನೂನಿನ ವಿವಾದಾಂಶಗಳು ಇವೆ ಎಂದು ಒಮ್ಮೆ ಕಂಡುಬಂದರೆ, ನ್ಯಾಯಾಲಯವು,–

(ಎ) ವಾದ ಪ್ರತಿವಾದ ಪತ್ರಗಳನ್ನು, ದಸ್ತಾವೇಜುಗಳನ್ನು ಮತ್ತು ಅದರ ಮುಂದೆ ಹಾಜರುಪಡಿಸಿದ ದಸ್ತಾವೇಜುಗಳನ್ನು ಪರೀಕ್ಷಿಸಿದ ಮೇಲೆ ಮತ್ತು ಕ್ರಮಾದೇಶ Xರ ನಿಯಮ 2ರ ಅಡಿಯಲ್ಲಿ ನ್ಯಾಯಾಲಯವು ಪರೀಕ್ಷಿಸುವುದು ಅಗತ್ಯವಾಗಿದ್ದರೆ, ಪರೀಕ್ಷಿಸಿದ ತರುವಾಯ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5)ರ ಕ್ರಮಾದೇಶ XIV ಕ್ಕೆ ಅನುಸಾರವಾಗಿ ಪಕ್ಷಕಾರರ ನಡುವೆ ವಿವಾದಾಂಶಗಳನ್ನು ರೂಪಿಸಿ;

(ಬಿ) ಪಕ್ಷಕಾರರು ಪರೀಕ್ಷಿಸಬೇಕಾದ ಸಾಕ್ಷಿದಾರರ ಪಟ್ಟಿ ಮಾಡಿ;

(ಸಿ) ಪಕ್ಷಕಾರರು ಯಾವ ದಿನಾಂಕದಂದು ಸಾಕ್ಷ್ಯವನ್ನು ಸಲ್ಲಿಸಬೇಕೋ ಆ ದಿನಾಂಕವನ್ನು ನಿಗದಿಪಡಿಸಿ;

(ಡಿ) ಯಾವ ದಿನಾಂಕದಂದು ಪಕ್ಷಕಾರರ ಸಾಕ್ಷ್ಯವನ್ನು ದಾಖಲಿಸಬೇಕಾಗಿದೆಯೋ ಆ ದಿನಾಂಕವನ್ನು ನಿಗದಿಪಡಿಸಿ;

(ಇ) ಯಾವ ದಿನಾಂಕದಂದು ಪಕ್ಷಕಾರರು, ಲಿಖಿತ ವಾದಗಳನ್ನು ನ್ಯಾಯಾಲಯದ ಮುಂದೆ ಫೈಲು ಮಾಡಬೇಕಾಗಿದೆಯೋ ಆ ದಿನಾಂಕವನ್ನು ನಿಗದಿಪಡಿಸಿ;

(ಎಫ್) ಯಾವ ದಿನಾಂಕದಂದು ವಾದಗಳನ್ನು ನ್ಯಾಯಾಲಯವು ವಿಚಾರಣೆ ಮಾಡುವುದೋ ಆ ದಿನಾಂಕವನ್ನು ನಿಗದಿಪಡಿಸಿ; ಮತ್ತು

(ಜಿ) ಪಕ್ಷಕಾರರು ಮತ್ತು ಅವರ ನ್ಯಾಯವಾದಿಗಳು ಮೌಖಿಕ ವಾದಗಳನ್ನು ಮಂಡಿಸಲು ಕಾಲಮಿತಿಯನ್ನು ಗೊತ್ತುಪಡಿಸಿ

– ಆದೇಶ ಮಾಡಬಹುದು.

**3. ಅಧಿವಿಚಾರಣೆ ಪೂರ್ಣಗೊಳಿಸುವುದಕ್ಕಾಗಿ ಕಾಲಮಿತಿ.–** ಈ ಕ್ರಮಾದೇಶದ ನಿಯಮ 2 ರ ಉದ್ದೇಶಕ್ಕಾಗಿ, ದಿನಾಂಕಗಳನ್ನು ನಿಗದಿ ಮಾಡುವಲ್ಲಿ ಅಥವಾ ಕಾಲಮಿತಿಯನ್ನು ಗೊತ್ತುಪಡಿಸುವಲ್ಲಿ, ನ್ಯಾಯಾಲಯವು ಮೊಕದ್ದಮೆ ನಿರ್ವಹಣೆಯ ಪ್ರಥಮ ವಿಚಾರಣೆಯ ದಿನಾಂಕದಿಂದ ಆರು ತಿಂಗಳನ್ನು ಮೀರದ ಅವಧಿಯೊಳಗೆ ವಾದ ಪ್ರತಿವಾದಗಳನ್ನು ಮುಕ್ತಾಯಗೊಳಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**4. ದೈನಂದಿನ ಆಧಾರದ ಮೇಲೆ ಮೌಖಿಕ ಸಾಕ್ಷ್ಯವನ್ನು ದಾಖಲಿಸುವುದು.–** ನ್ಯಾಯಾಲಯವು, ಸಾಧ್ಯವಾದಷ್ಟು ಮಟ್ಟಿಗೆ, ಸಾಕ್ಷ್ಯವನ್ನು ದಾಖಲಿಸುವುದನ್ನು ಎಲ್ಲಾ ಸಾಕ್ಷಿದಾರರ ಪಾಟೀ ಸವಾಲು ಪೂರ್ಣಗೊಳ್ಳುವವರೆಗೆ ದೈನಂದಿನ ಆಧಾರದ ಮೇಲೆ ನಡೆಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

**5. ಅಧಿವಿಚಾರಣೆ ನಡೆಯುವಾಗ ಮೊಕದ್ದಮೆಯ ನಿರ್ವಹಣಾ ವಿಚಾರಣೆ.–** ನ್ಯಾಯಾಲಯವು ಅಗತ್ಯವಿದ್ದರೆ, ನಿಯಮ 2ರ ಅಡಿಯಲ್ಲಿ ನಿಗದಿಪಡಿಸಿದ ದಿನಾಂಕಗಳನ್ನು ಪಕ್ಷಕಾರರು ಪಾಲಿಸುತ್ತಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕಾಗಿ ಮತ್ತು ದಾವೆಯ ತ್ವರಿತ ವಿಲೇವಾರಿಗೆ ಅನುಕೂಲ ಕಲ್ಪಿಸುವುದಕ್ಕಾಗಿ ಸೂಕ್ತ ಆದೇಶಗಳನ್ನು ಹೊರಡಿಸುವುದಕ್ಕೆ ಅಧಿವಿಚಾರಣೆ ನಡೆಯುವಾಗ ಯಾವುದೇ ಕಾಲದಲ್ಲಿ ಮೊಕದ್ದಮೆ ನಿರ್ವಹಣಾ ವಿಚಾರಣೆ ನಡೆಸಬಹುದು.

**6. ಮೊಕದ್ದಮೆಯ ನಿರ್ವಹಣೆ ವಿಚಾರಣೆಯಲ್ಲಿ ನ್ಯಾಯಾಲಯದ ಅಧಿಕಾರಗಳು.–** (1) ಈ ಕ್ರಮಾದೇಶದ ಅಡಿಯಲ್ಲಿ ನಡೆಸಿದ ಯಾವುದೇ ಮೊಕದ್ದಮೆ ನಿರ್ವಹಣಾ ವಿಚಾರಣೆಯಲ್ಲಿ, ನ್ಯಾಯಾಲಯವು,–

(ಎ) ವಿವಾದಾಂಶಗಳನ್ನು ರೂಪಿಸುವುದಕ್ಕೆ ಮೊದಲು, ಕ್ರಮಾದೇಶ XIIIಎ ಅಡಿಯಲ್ಲಿ ಪಕ್ಷಕಾರರು ಸಲ್ಲಿಸಿದ್ದ ಯಾವುದೇ ಅರ್ಜಿಯು ಇತ್ಯರ್ಥದಲ್ಲಿದ್ದರೆ ಆ ಬಗ್ಗೆ ವಿಚಾರಣೆ ನಡೆಸತಕ್ಕದ್ದು ಮತ್ತು ತೀರ್ಮಾನಿಸಲು;

(ಬಿ) ವಿವಾದಾಂಶಗಳನ್ನು ರೂಪಿಸುವುದಕ್ಕಾಗಿ ಸುಸಂಗತವಾದ ಮತ್ತು ಅವಶ್ಯಕವಾದ ದಸ್ತಾವೇಜುಗಳ ಮತ್ತು ವಾದ ವಿವಾದ ಪತ್ರಗಳ ಸಂಕಲನ ಮಾಡಿ ಸಲ್ಲಿಸುವಂತೆ ಪಕ್ಷಕಾರರಿಗೆ ನಿರ್ದೇಶಿಸಲು;

(ಸಿ) ಯಾವುದೇ ರೂಢಿ, ನಿರ್ದೇಶನ ಅಥವಾ ನ್ಯಾಯಾಲಯದ ಆದೇಶವನ್ನು ಪಾಲಿಸುವುದಕ್ಕಾಗಿ ಅವಧಿಯನ್ನು ವಿಸ್ತರಿಸುವುದಕ್ಕೆ ಅಥವಾ ಕಡಿತಗೊಳಿಸುವುದಕ್ಕೆ ಸಾಕಷ್ಟು ಕಾರಣಗಳಿವೆ ಎಂದು ಅದಕ್ಕೆ ಕಂಡುಬಂದರೆ, ಹಾಗೆ ವಿಸ್ತರಿಸಲು ಅಥವಾ ಕಡಿತಗೊಳಿಸಲು;

(ಡಿ) ವಿಚಾರಣೆಯನ್ನು ಮುಂದೂಡುವುದಕ್ಕೆ ಅಥವಾ ಅದರ ಮುಂದೆ ತರುವುದಕ್ಕೆ ಸಾಕಷ್ಟು ಕಾರಣಗಳಿವೆ ಎಂದು ಕಂಡುಬಂದರೆ, ಹಾಗೆ ಮುಂದೂಡಲು ಅಥವಾ ಅದರ ಮುಂದೆ ತರಲು;

(ಇ) ಕ್ರಮಾದೇಶ Xರ ನಿಯಮ 2ರ ಅಡಿಯಲ್ಲಿ ಪರೀಕ್ಷೆಯ ಉದ್ದೇಶಕ್ಕಾಗಿ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಪಕ್ಷಕಾರನಿಗೆ ನಿರ್ದೇಶಿಸಲು;

(ಎಫ್) ವ್ಯವಹರಣೆಗಳನ್ನು ಕ್ರೋಢೀಕರಿಸಲು;

(ಜಿ) ರೂಪಿಸಲಾದ ವಿವಾದಾಂಶಗಳಿಗೆ ಸುಸಂಗತವಾಗಿಲ್ಲವೆಂದು ಅದು ಭಾವಿಸಿದರೆ ಯಾರೇ ಸಾಕ್ಷಿದಾರನ ಹೆಸರನ್ನು ಅಥವಾ ಸಾಕ್ಷ್ಯವನ್ನು ತೆಗೆದುಹಾಕಲು;

(ಹೆಚ್) ಯಾವುದೇ ವಿವಾದಾಂಶದ ಪ್ರತ್ಯೇಕ ವಿಚಾರಣೆ ಮಾಡುವುದಕ್ಕೆ ನಿರ್ದೇಶಿಸಲು;

(ಐ) ಅಧಿವಿಚಾರಣೆ ಮಾಡಬೇಕಾದ ವಿವಾದಾಂಶಗಳ ಕ್ರಮವನ್ನು ನಿರ್ಧರಿಸಲು;

(ಜೆ) ವಿವಾದಾಂಶವನ್ನು ಪರಿಗಣನೆಯಿಂದ ಹೊರತುಪಡಿಸಲು;

(ಕೆ) ಪ್ರಾರಂಭಿಕ ವಿವಾದಾಂಶಗಳ ಮೇಲೆ ತೀರ್ಮಾನ ಕೈಗೊಂಡ ತರುವಾಯ ಕ್ಲೇಮನ್ನು ವಜಾ ಮಾಡಲು ಅಥವಾ ತೀರ್ಪನ್ನು ಕೊಡಲು;

(ಎಲ್) ಕ್ರಮಾದೇಶ XXVIರ ಅನುಸಾರವಾಗಿ, ಅವಶ್ಯವಿದ್ದಲ್ಲಿ, ಆಯೋಗವು ಸಾಕ್ಷ್ಯವನ್ನು ದಾಖಲಿಸಬೇಕೆಂದು ನಿರ್ದೇಶಿಸಲು;

(ಎಮ್) ಅಸಂಗತವಾದ, ಅಂಗೀಕಾರಾರ್ಹವಲ್ಲದ ಅಥವಾ ವಾದಾತ್ಮಕ ವಿಷಯಗಳನ್ನು ಒಳಗೊಂಡಿದ್ದಕ್ಕಾಗಿ, ಪಕ್ಷಕಾರರು ಸಲ್ಲಿಸಿದ ಸಾಕ್ಷ್ಯದ ಯಾವುದೇ ಅಫಿಡಾವಿಟ್ ಅನ್ನು ತಿರಸ್ಕರಿಸಲು;

(ಎನ್) ಪಕ್ಷಕಾರರು ಸಲ್ಲಿಸಿದ್ದ ಅಸಂಗತವಾದ, ಅಂಗೀಕಾರಾರ್ಹವಲ್ಲದ ಅಥವಾ ವಿವಾದಾತ್ಮಕ ವಿಷಯಗಳನ್ನು ಒಳಗೊಂಡ, ಸಾಕ್ಷ್ಯದ ಅಫಿಡಾವಿಟ್‌ನ ಯಾವುದೇ ಭಾಗಗಳನ್ನು ತೆಗೆದುಹಾಕಲು;

(ಓ) ಈ ಉದ್ದೇಶಕ್ಕಾಗಿ ನ್ಯಾಯಾಲಯವು ನೇಮಕ ಮಾಡಿದಂಥ ಪ್ರಾಧಿಕಾರಿಗೆ ಸಾಕ್ಷ್ಯ ದಾಖಲಿಸುವುದನ್ನು ಪ್ರತ್ಯಾಯೋಜಿಸಲು;

(ಪಿ) ಆಯೋಗವು ಅಥವಾ ಯಾವುದೇ ಇತರ ಪ್ರಾಧಿಕಾರವು, ಸಾಕ್ಷ್ಯವನ್ನು ದಾಖಲಿಸುವುದರ ಮೇಲ್ವಿಚಾರಣೆ ಮಾಡುವುದಕ್ಕೆ ಸಂಬಂಧಿಸಿದ ಯಾವುದೇ ಆದೇಶವನ್ನು ಹೊರಡಿಸಲು;

(ಕ್ಯೂ) ಖರ್ಚಿನ ಬಜೆಟ್ ಅನ್ನು ಸಲ್ಲಿಸುವುದಕ್ಕೆ ಮತ್ತು ವಿನಿಮಯ ಮಾಡಿಕೊಳ್ಳುವುದಕ್ಕೆ ಯಾರೇ ಪಕ್ಷಕಾರರಿಗೆ ಆದೇಶ ಮಾಡಲು;

(ಆರ್) ಮೊಕದ್ದಮೆಯನ್ನು ನಿರ್ವಹಿಸುವುದಕ್ಕಾಗಿ ಮತ್ತು ದಾವೆಯನ್ನು ದಕ್ಷತೆಯಿಂದ ವಿಲೆ ಮಾಡುವುದನ್ನು ಖಚಿತಪಡಿಸಿಕೊಳ್ಳುವ ಅಧ್ಯಾರೋಹಿ ಉದ್ದೇಶವನ್ನು ಮುಂದುವರಿಸುವುದಕ್ಕಾಗಿ ನಿರ್ದೇಶನಗಳನ್ನು ನೀಡಲು ಅಥವಾ ಯಾವುದೇ ಆದೇಶವನ್ನು ಮಾಡಲು

– ಅಧಿಕಾರ ಹೊಂದಿರತಕ್ಕದ್ದು.

(2) ಈ ಕ್ರಮಾದೇಶದ ಅಡಿಯಲ್ಲಿ ನ್ಯಾಯಾಲಯವು, ತನ್ನ ಅಧಿಕಾರಗಳನ್ನು ಚಲಾಯಿಸಿ ಆದೇಶವನ್ನು ಹೊರಡಿಸುವಾಗ,–

(ಎ) ನ್ಯಾಯಾಲಯಕ್ಕೆ ಹಣದ ಮೊತ್ತವನ್ನು ಸಂದಾಯ ಮಾಡುವ ಷರತ್ತು ಒಳಗೊಂಡಂತೆ, ಅದನ್ನು ಇತರ ಷರತ್ತುಗಳಿಗೆ ಒಳಪಟ್ಟು ಮಾಡಬಹುದು; ಮತ್ತು

(ಬಿ) ಆದೇಶವನ್ನು ಅಥವಾ ಷರತ್ತನ್ನು ಪಾಲಿಸಲು ತಪ್ಪಿದುದರ ಪರಿಣಾಮವನ್ನು ನಿರ್ದಿಷ್ಟಪಡಿಸಬಹುದು.

(3) ಮೊಕದ್ದಮೆಯ ನಿರ್ವಹಣೆಯ ವಿಚಾರಣೆಗಾಗಿ ದಿನಾಂಕವನ್ನು ನಿಗದಿ ಮಾಡುವಾಗ, ನ್ಯಾಯಾಲಯವು ಪಕ್ಷಕಾರರ ನಡುವೆ ಇತ್ಯರ್ಥವಾಗುವ ಸಾಧ್ಯತೆ ಇದೆಯೆಂದು ಅಭಿಪ್ರಾಯಪಟ್ಟರೆ, ಪಕ್ಷಕಾರರು ಅಂಥ ಮೊಕದ್ದಮೆಯ ನಿರ್ವಹಣೆಯ ವಿಚಾರಣೆಯಲ್ಲಿ ಉಪಸ್ಥಿತರಿರತಕ್ಕದ್ದೆಂದು ನಿರ್ದೇಶಿಸಬಹುದು.

**7. ಮೊಕದ್ದಮೆ ನಿರ್ವಹಣೆಯ ವಿಚಾರಣೆಯನ್ನು ಮುಂದೂಡುವುದು.–** (1) ನ್ಯಾಯಾಲಯವು, ಪಕ್ಷಕಾರರ ಪರವಾಗಿ ಹಾಜರಾಗುವ ನ್ಯಾಯವಾದಿಯು, ಉಪಸ್ಥಿತನಾಗಿಲ್ಲ ಎಂಬ ಏಕೈಕ ಕಾರಣಕ್ಕಾಗಿ ಮೊಕದ್ದಮೆಯ ನಿರ್ವಹಣೆಯ ವಿಚಾರಣೆಯನ್ನು ಮುಂದೂಡತಕ್ಕದ್ದಲ್ಲ:

ಪರಂತು, ವಿಚಾರಣೆಯ ಮುಂದೂಡಿಕೆಗಾಗಿ ಮುಂಚಿತವಾಗಿ ಅರ್ಜಿ ಸಲ್ಲಿಸಿ ಕೋರಿಕೊಂಡಿದ್ದರೆ, ನ್ಯಾಯಾಲಯವು, ಸೂಕ್ತವೆಂದು ಭಾವಿಸುವಂಥ ಖರ್ಚನ್ನು ಅಂಥ ಅರ್ಜಿಯನ್ನು ಸಲ್ಲಿಸುವ ಪಕ್ಷಕಾರನು ಸಂದಾಯ ಮಾಡಿದ ಮೇಲೆ ವಿಚಾರಣೆಯನ್ನು ಮುಂದೂಡಬಹುದು.

(2) ಈ ನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ನ್ಯಾಯವಾದಿಯು ಗೈರುಹಾಜರಾಗಿರುವುದಕ್ಕೆ ಸಮರ್ಥಿಸಬಹುದಾದ ಕಾರಣವಿದೆ ಎಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ತಾನು ಸೂಕ್ತವೆಂದು ಭಾವಿಸಬಹುದಾದಂಥ ನಿಬಂಧನೆಗಳ ಮತ್ತು ಷರತ್ತುಗಳ ಮೇಲೆ, ವಿಚಾರಣೆಯನ್ನು ಮತ್ತೊಂದು ದಿನಾಂಕಕ್ಕೆ ಮುಂದೂಡಬಹುದು.

**8. ಆದೇಶಗಳನ್ನು ಪಾಲಿಸದಿದ್ದುದರ ಪರಿಣಾಮಗಳು.–** ಮೊಕದ್ದಮೆಯ ನಿರ್ವಹಣೆ ವಿಚಾರಣೆಯಲ್ಲಿ ನ್ಯಾಯಾಲಯವು ಹೊರಡಿಸಿದ ಆದೇಶವನ್ನು ಪಾಲಿಸಲು ಯಾರೇ ಪಕ್ಷಕಾರನು ತಪ್ಪಿದಲ್ಲಿ, ನ್ಯಾಯಾಲಯವು,–

(ಎ) ನ್ಯಾಯಾಲಯಕ್ಕೆ ವೆಚ್ಚಗಳನ್ನು ಸಂದಾಯ ಮಾಡಿದ ಮೇಲೆ ಪಾಲಿಸದಿರುವುದನ್ನು ಮನ್ನಾ ಮಾಡುವುದಕ್ಕೆ;

(ಬಿ) ಪಾಲಿಸದಿರುವುದರ ಸಂಬಂಧದಲ್ಲಿ ಸಂದರ್ಭಾನುಸಾರ ಅಫಿಡಾವಿಟ್‌ಗಳನ್ನು ಸಲ್ಲಿಸುವುದಕ್ಕೆ, ಸಾಕ್ಷಿದಾರರ ಪಾಟೀ ಸವಾಲನ್ನು ನಡೆಸುವುದಕ್ಕೆ, ಲಿಖಿತ ಪ್ರಮಾಣಪೂರ್ವಕ ಹೇಳಿಕೆಯನ್ನು, ಮೌಖಿಕ ವಾದ ವಿವಾದಗಳನ್ನು ಮಂಡಿಸುವುದಕ್ಕೆ ಅಥವಾ ಮತ್ತಷ್ಟು ವಾದಗಳನ್ನು ಮಾಡುವುದಕ್ಕೆ ಪಕ್ಷಕಾರರ ಹಕ್ಕನ್ನು ರದ್ದು ಮಾಡುವುದಕ್ಕೆ; ಅಥವಾ

(ಸಿ) ಅಂಥ ಪಾಲಿಸದಿರುವಿಕೆಯು ಉದ್ದೇಶಪೂರ್ವಕವಾಗಿದ್ದಲ್ಲಿ, ಪುನರುಕ್ತಿಯಾಗಿದ್ದಲ್ಲಿ ಮತ್ತು ವೆಚ್ಚವನ್ನು ವಿಧಿಸುವುದಾಗಿದ್ದಲ್ಲಿ, ಅದು ಪಾಲಿಸದಿರುವುದರ ಖಚಿತತೆಗೆ ಸಾಕಷ್ಟಾಗಿಲ್ಲದಿದ್ದಲ್ಲಿ, ವಾದ ಪತ್ರವನ್ನು ವಜಾ ಮಾಡುವುದಕ್ಕೆ ಅಥವಾ ಅನುಮತಿಸುವುದಕ್ಕೆ

– ಅಧಿಕಾರ ಹೊಂದಿರತಕ್ಕದ್ದು.".

**8. ಕ್ರಮಾದೇಶ XVIII ರ ತಿದ್ದುಪಡಿ.–** ಕ್ರಮಾದೇಶ XVIII ರಲ್ಲಿ, 2ನೇ ನಿಯಮದಲ್ಲಿ, (3ಎ), (3ಬಿ), (3ಸಿ), (3ಡಿ), (3ಇ) ಮತ್ತು (3ಎಫ್)ನೇ ಉಪನಿಯಮಗಳ ಬದಲಾಗಿ ಈ ಕೆಳಕಂಡವುಗಳನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(3ಎ) ಯಾರೇ ಪಕ್ಷಕಾರನು, ಮೌಖಿಕ ವಾದಗಳನ್ನು ಪ್ರಾರಂಭಿಸುವುದಕ್ಕೆ ಮೊದಲಿನ ನಾಲ್ಕು ವಾರಗಳೊಳಗೆ ಮೊಕದ್ದಮೆಯ ಸಮರ್ಥನೆಯಾಗಿ ಲಿಖಿತ ವಾದ ಪ್ರತಿಗಳನ್ನು ಸಂಕ್ಷಿಪ್ತವಾಗಿ ಹಾಗೂ ಪ್ರತ್ಯೇಕ ಶೀರ್ಷಿಕೆಯ ಅಡಿಯಲ್ಲಿ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು ಮತ್ತು ಅಂಥ ಲಿಖಿತ ವಾದ ಪ್ರತಿವಾದಗಳು ದಾಖಲೆಯ ಭಾಗವಾಗಿರತಕ್ಕದ್ದು.

(3ಬಿ) ಲಿಖಿತ ವಾದಪ್ರತಿಗಳಲ್ಲಿ, ವಾದಗಳ ಸಮರ್ಥನೆಯಾಗಿ ಕಾನೂನಿನ ಉಪಬಂಧಗಳನ್ನು ಮತ್ತು ಪಕ್ಷಕಾರನು ಆಧಾರವಾಗಿ ತೆಗೆದುಕೊಂಡ ತೀರ್ಪುಗಳ ಉಲ್ಲೇಖಗಳನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು ಮತ್ತು ಪಕ್ಷಕಾರನು ಆಧಾರವಾಗಿ ತೆಗೆದುಕೊಂಡಿರುವ ಅಂಥ ತೀರ್ಪುಗಳ ಪ್ರತಿಗಳನ್ನು ಒಳಗೊಳ್ಳತಕ್ಕದ್ದು.

(3ಸಿ) ಅಂಥ ವಾದ ಪ್ರತಿವಾದಗಳ ಪ್ರತಿಯನ್ನು, ಎದುರು ಪಕ್ಷಕಾರನಿಗೆ ಏಕಕಾಲಕ್ಕೆ ಒದಗಿಸತಕ್ಕದ್ದು.

(3ಡಿ) ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಿದರೆ, ವಾದ ಪ್ರತಿವಾದಗಳು ಮುಕ್ತಾಯವಾದ ದಿನಾಂಕದ ನಂತರ, ವಾದ ಪ್ರತಿವಾದಗಳು ಮುಕ್ತಾಯವಾದ ದಿನಾಂಕದಿಂದ ಒಂದು ವಾರಕ್ಕೆ ಮೀರದ ಅವಧಿಯೊಳಗೆ, ಪರಿಷ್ಕೃತ ಲಿಖಿತ ವಾದ ಪ್ರತಿವಾದಗಳನ್ನು ಸಲ್ಲಿಸಲು ಪಕ್ಷಕಾರರಿಗೆ ಅನುಮತಿ ನೀಡಬಹುದು.

(3ಇ) ನ್ಯಾಯಾಲಯವು, ಅಂಥ ಮುಂದೂಡಿಕೆಗಳನ್ನು ಮಂಜೂರಾಡ್ಮಲು ಅವಶ್ಯವೆಂದು ತಾನು ಭಾವಿಸುವ ಕಾರಣಗಳನ್ನು ದಾಖಲಿಸಿದ ಹೊರತು, ಲಿಖಿತ ವಾದ ಪ್ರತಿವಾದಗಳನ್ನು ಸಲ್ಲಿಸುವ ಉದ್ದೇಶಕ್ಕಾಗಿ ಯಾವುದೇ ಮುಂದೂಡಿಕೆಗಳನ್ನು ನೀಡತಕ್ಕದ್ದಲ್ಲ.

(3ಎಫ್) ವಿಷಯದ ಸ್ವರೂಪದ ಮತ್ತು ಸಂಕೀರ್ಣತೆಯನ್ನು ಗಮನಿಸಿ ಮೌಖಿಕ ಮನವಿಗಳಿಗೆ ಕಾಲಾವಕಾಶವನ್ನು ಸೀಮಿತಗೊಳಿಸುವುದಕ್ಕೆ ನ್ಯಾಯಾಲಯಕ್ಕೆ ಅವಕಾಶವಿರತಕ್ಕದ್ದು.".

**9. ಕ್ರಮಾದೇಶದ XVIIIರ ತಿದ್ದುಪಡಿ.–** ಸಂಹಿತೆಯ ಕ್ರಮಾದೇಶ XVIIIರಲ್ಲಿ, 4ನೇ ನಿಯಮದಲ್ಲಿ, (1)ನೇ ಉಪನಿಯಮದ ತರುವಾಯ, ಈ ಕೆಳಕಂಡ ಉಪನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:–

"(1ಎ) ಯಾರ ಸಾಕ್ಷ್ಯವನ್ನು ಮುಂದಿಡಬೇಕೆಂದು ಪ್ರಸ್ತಾವಿಸಲಾಗಿದೆಯೋ, ಆ ಎಲ್ಲಾ ಸಾಕ್ಷಿದಾರರ ಸಾಕ್ಷ್ಯದ ಅಫಿಡಾವಿಟ್ಟನ್ನು, ಮೊಕದ್ದಮೆ ನಿರ್ವಹಣೆಯ ಪ್ರಥಮ ವಿಚಾರಣೆಯಲ್ಲಿ ನಿರ್ದೇಶಿಸಿದ ಕಾಲದಲ್ಲಿ, ಆ ಪಕ್ಷಕಾರನು ಏಕಕಾಲದಲ್ಲಿ ಸಲ್ಲಿಸತಕ್ಕದ್ದು.

(1ಬಿ) ಒಬ್ಬ ಪಕ್ಷಕಾರನು, ಯಾರೇ ಸಾಕ್ಷಿದಾರನ (ಈಗಾಗಲೇ ಅಫಿಡಾವಿಟ್ಟನ್ನು ಸಲ್ಲಿಸಿರುವ ಸಾಕ್ಷಿದಾರನೂ ಒಳಗೊಂಡಂತೆ) ಅಫಿಡಾವಿಟ್ ಮೂಲಕ ಹೆಚ್ಚುವರಿ ಸಾಕ್ಷ್ಯವನ್ನು ಮುಂದಿಡುವ ಉದ್ದೇಶಕ್ಕಾಗಿ ಅರ್ಜಿಯಲ್ಲಿ ಸಾಕಷ್ಟು ಕಾರಣವನ್ನು ತಿಳಿಸಿರುವ ಮತ್ತು ಕಾರಣಗಳನ್ನು ನೀಡಿ, ಅಂಥ ಹೆಚ್ಚಿನ ಅಫಿಡಾವಿಟ್ಟನ್ನು ಅನುಮತಿಸಿ ನ್ಯಾಯಾಲಯವು ಆದೇಶ ಹೊರಡಿಸಿದ್ದ ಹೊರತು, ಹೆಚ್ಚುವರಿ ಸಾಕ್ಷ್ಯವನ್ನು ಮುಂದಿಡತಕ್ಕದ್ದಲ್ಲ.

(1ಸಿ) ಆದಾಗ್ಯೂ, ಪಕ್ಷಕಾರನು, ಆ ಸಾಕ್ಷಿದಾರನ ಪಾಟೀ–ಸವಾಲನ್ನು ಪ್ರಾರಂಭಿಸುವುದಕ್ಕೆ ಮೊದಲು ಯಾವುದೇ ಕಾಲದಲ್ಲಿ, ಅಂಥ ಅಫಿಡಾವಿಟ್ ಮೇಲೆ ಯಾವುದೇ ಪ್ರತಿಕೂಲ ತೀರ್ಮಾನ ಮಾಡದೇ, ಹಾಗೆ ಸಲ್ಲಿಸಿದ್ದ ಅಫಿಡಾವಿಟ್‌ಗಳಲ್ಲಿ ಯಾವುದೇ ಅಫಿಡಾವಿಟ್ಟನ್ನು ಹಿಂತೆಗೆದುಕೊಳ್ಳಲು ಅಧಿಕಾರ ಹೊಂದಿರತಕ್ಕದ್ದು:

ಪರಂತು, ಇತರೆ ಯಾರೇ ಪಕ್ಷಕಾರನು ಹಾಗೆ ಹಿಂಪಡೆದಂಥ ಅಫಿಡಾವಿಟ್ಟಿನಲ್ಲಿ ನೀಡಿದ ಯಾವುದೇ ಒಪ್ಪಿಗೆಯನ್ನು ಸಾಕ್ಷ್ಯವಾಗಿ ನೀಡಲು ಮತ್ತು ಅದರ ಮೇಲೆ ಅವಲಂಬಿಸಲು ಹಕ್ಕುಳ್ಳವನಾಗಿರತಕ್ಕದ್ದು.".

**10. ಕ್ರಮಾದೇಶ XIX ಕ್ಕೆ ತಿದ್ದುಪಡಿ.–** ಸಂಹಿತೆಯ ಕ್ರಮಾದೇಶ XIX ನಲ್ಲಿ 3ನೇ ನಿಯಮದ ತರುವಾಯ, ಈ ಕೆಳಕಂಡ ನಿಯಮಗಳನ್ನು ಸೇರಿಸತಕ್ಕದ್ದು, ಎಂದರೆ:–

"**4. ನ್ಯಾಯಾಲಯವು ಸಾಕ್ಷ್ಯವನ್ನು ನಿಯಂತ್ರಿಸುವುದು.–** (1) ನ್ಯಾಯಾಲಯವು, ನಿರ್ದೇಶನಗಳ ಮೂಲಕ, ಯಾವ ವಿವಾದಾಂಶಗಳ ಮೇಲೆ ಸಾಕ್ಷ್ಯವನ್ನು ಅಗತ್ಯಪಡಿಸಲಾಗಿದೆಯೋ ಆ ವಿವಾದಾಂಶಗಳ ಮೇಲಿನ ಸಾಕ್ಷ್ಯವನ್ನು ಮತ್ತು ಯಾವ ವಿಧಾನದಲ್ಲಿ ಸಾಕ್ಷ್ಯವನ್ನು ನ್ಯಾಯಾಲಯದ ಮುಂದಿಡಬೇಕಾಗಿದೆಯೋ ಆ ವಿಧಾನವನ್ನು ಮೂಲಕ ನಿಯಂತ್ರಿಸಬಹುದು.

(2) ನ್ಯಾಯಾಲಯವು, ತನ್ನ ವಿವೇಚನಾನುಸಾರ ಮತ್ತು ಕಾರಣಗಳನ್ನು ಲಿಖಿತದಲ್ಲಿ ದಾಖಲಿಸಿ, ಪಕ್ಷಕಾರರು ಅನ್ಯಥಾ ಹಾಜರುಪಡಿಸಬಹುದಾದ ಸಾಕ್ಷ್ಯವನ್ನು ಹೊರತುಪಡಿಸಬಹುದು.

**5. ಸಾಕ್ಷ್ಯವನ್ನು ಪರಿಷ್ಕರಿಸುವುದು ಅಥವಾ ನಿರಾಕರಿಸುವುದು.–** ನ್ಯಾಯಾಲಯವು, ತನ್ನ ವಿವೇಚನೆಯಂತೆ, ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ,–

(i) ಮುಖ್ಯ ಪರೀಕ್ಷೆಯಲ್ಲಿನ ಅಫಿಡಾವಿಟ್‌ನ ಯಾವ ಭಾಗವು, ಸಾಕ್ಷ್ಯ ಆಗುವುದಿಲ್ಲವೆಂದು ನ್ಯಾಯಾಲಯವು ಅಭಿಪ್ರಾಯಪಡುತ್ತದೆಯೋ ಅಂಥ ಭಾಗವನ್ನು ಪರಿಷ್ಕರಿಸಬಹುದು ಅಥವಾ ಪರಿಷ್ಕರಿಸಲು ಆದೇಶಿಸಬಹುದು; ಅಥವಾ

(ii) ಮುಖ್ಯ ಪರೀಕ್ಷೆಯಲ್ಲಿನ ಅಫಿಡಾವಿಟ್ ಅಂಗೀಕಾರಾರ್ಹ ಸಾಕ್ಷ್ಯವಾಗದಿದ್ದರೆ ಅದನ್ನು ಹಿಂದಿರುಗಿಸಬಹುದು ಅಥವಾ ನಿರಾಕರಿಸಬಹುದು.

**6. ಸಾಕ್ಷ್ಯದ ಅಫಿಡಾವಿಟ್‌ನ ನಮೂನೆ ಮತ್ತು ಮಾರ್ಗಸೂಚಿಗಳು.–** ಅಫಿಡಾವಿಟ್, ಈ ಕೆಳಗೆ ವಿವರಿಸಿದ ನಮೂನೆಯನ್ನು ಮತ್ತು ಅಗತ್ಯತೆಗಳನ್ನು ಪಾಲಿಸತಕ್ಕದ್ದು, ಎಂದರೆ:–

(ಎ) ಅಂಥ ಅಫಿಡಾವಿಟ್, ಯಾವುದೇ ಸಂಗತಿಯನ್ನು ಅಥವಾ ವ್ಯವಹರಿಸಿರುವ ಇತರ ವಿಷಯವನ್ನು ರುಜುವಾತುಪಡಿಸುವುದಕ್ಕೆ ಸುಸಂಗತವಾದ ದಿನಾಂಕಗಳಿಗೆ ಮತ್ತು ಘಟನೆಗಳಿಗೆ ಸೀಮಿತವಾಗಿರತಕ್ಕದ್ದು ಮತ್ತು ಕಾಲಾನುಕ್ರಮ ಘಟನಾವಳಿಗಳ ಅನುಸಾರವಾಗಿ ಇರತಕ್ಕದ್ದು;

(ಬಿ) ಅಫಿಡಾವಿಟ್‌ನಲ್ಲಿ ವಾದ ಪ್ರತಿವಾದಗಳನ್ನಷ್ಟೇ ಪುನಃ ಹೇಳಲಾಗಿದೆ ಎಂದು ಅಥವಾ ಯಾವುದೇ ಪಕ್ಷದ ಮೊಕದ್ದಮೆಯು ಕಾನೂನು ಆಧಾರಗಳನ್ನು ಒಳಗೊಂಡಿದೆ ಎಂದು ನ್ಯಾಯಾಲಯವು ಅಭಿಪ್ರಾಯಪಟ್ಟಲ್ಲಿ, ಅದು ಸೂಕ್ತವೆಂದು ಅದು ಭಾವಿಸುವಂತೆ, ಅಫಿಡಾವಿಟ್ ಅನ್ನು ಅಥವಾ ಅದರ ಯಾವುದೇ ಭಾಗವನ್ನು ಹೊಡೆದು ಹಾಕಬಹುದು;

(ಸಿ) ಅಫಿಡಾವಿಟ್‌ನ ಪ್ರತಿಯೊಂದು ಪ್ಯಾರಾವು ಸಾಧ್ಯವಾದಷ್ಟು ಮಟ್ಟಿಗೆ ವಿಷಯದ ವಿಶಿಷ್ಟ ಭಾಗಕ್ಕೆ ಸೀಮಿತವಾಗಿರತಕ್ಕದ್ದು;

(ಡಿ) ಅಫಿಡಾವಿಟ್‌ನಲ್ಲಿ,–

(i) ಅದರಲ್ಲಿ ಯಾವ ಹೇಳಿಕೆಗಳನ್ನು ಪ್ರತಿವಾದಿಯು ತನ್ನ ಸ್ವಂತ ತಿಳುವಳಿಕೆಯಿಂದ ಪ್ರಮಾಣಪೂರ್ವಕವಾಗಿ ಹೇಳಿದ್ದಾನೆಂಬುದನ್ನು ಮತ್ತು ಯಾವ ಹೇಳಿಕೆಗಳು ಮಾಹಿತಿಯ ಅಥವಾ ನಂಬಿಕೆಯ ಹೇಳಿಕೆಗಳಾಗಿವೆಯೇ ಎಂಬುದನ್ನು; ಮತ್ತು

(ii) ಮಾಹಿತಿಯ ಅಥವಾ ನಂಬಿಕೆಯ ಯಾವುದೇ ವಿಷಯಗಳ ಮೂಲವನ್ನು

– ತಿಳಿಸತಕ್ಕದ್ದು.

(ಇ) ಅಫಿಡಾವಿಟ್‌ಗೆ,–

(i) ಅದು ಪ್ರತ್ಯೇಕ ದಾಖಲೆ ಎಂಬಂತೆ (ಅಥವಾ ಒಂದು ಕಡತದಲ್ಲಿ ಒಳಗೊಂಡ ದಸ್ತಾವೇಜುಗಳಲ್ಲಿ ಒಂದು ದಸ್ತಾವೇಜು ಎಂಬಂತೆ) ಅನುಕ್ರಮವಾಗಿ ಸಂಖ್ಯೆಯನ್ನು ಹಾಕಿರತಕ್ಕದ್ದು;

(ii) ಅದನ್ನು ಸಂಖ್ಯೆ ಕೊಡಲಾದ ಪ್ಯಾರಾಗಳಾಗಿ ವಿಭಾಗಿರಿಸತಕ್ಕದ್ದು;

(iii) ಅಂಕಿಗಳಲ್ಲಿ ತಿಳಿಸಿದ ದಿನಾಂಕಗಳೂ ಸೇರಿದಂತೆ, ಎಲ್ಲವುಗಳಿಗೂ ಸಂಖ್ಯೆ ಕೊಟ್ಟಿರತಕ್ಕದ್ದು; ಮತ್ತು

(iv) ಅಫಿಡಾವಿಟ್‌ನ ಒಡಲಿನಲ್ಲಿ ಉಲ್ಲೇಖಿಸಿದ ದಸ್ತಾವೇಜುಗಳ ಪೈಕಿ ಯಾವುದೇ ದಸ್ತಾವೇಜುಗಳನ್ನು ಅಫಿಡಾವಿಟ್‌ಗೆ ಅಥವಾ ಇತರ ವಾದ ಪತ್ರಗಳಿಗೆ ಲಗತ್ತಿಸಲಾಗಿದ್ದರೆ, ಆಧಾರವಾಗಿ ತೆಗೆದುಕೊಳ್ಳಲಾದ ಅಂಥ ದಸ್ತಾವೇಜುಗಳ ಅನುಬಂಧಗಳನ್ನು ಕೊಡತಕ್ಕದ್ದು ಮತ್ತು ಅವುಗಳಿಗೆ ಪುಟ ಸಂಖ್ಯೆಯನ್ನು ಕೊಟ್ಟಿರತಕ್ಕದ್ದು.".

**11. ಕ್ರಮಾದೇಶ XX ರ ತಿದ್ದುಪಡಿ.–** ಸಂಹಿತೆಯ ಕ್ರಮಾದೇಶ XX ರಲ್ಲಿ 1ನೇ ನಿಯಮದ ಬದಲಾಗಿ ಈ ಕೆಳಕಂಡ ನಿಯಮವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"(1) ವಾಣಿಜ್ಯ ನ್ಯಾಯಾಲಯ, ವಾಣಿಜ್ಯ ಅಪೀಲು ನ್ಯಾಯಾಲಯ, ವಾಣಿಜ್ಯ ವಿಭಾಗ ಅಥವಾ ಸಂದರ್ಭಾನುಸಾರ ವಾಣಿಜ್ಯ ಅಪೀಲು ವಿಚಾರಣಾ ವಿಭಾಗವು, ವಾದಗಳು ಮುಕ್ತಾಯವಾದ ತೊಂಬತ್ತು ದಿನಗಳೊಳಗೆ ತೀರ್ಪನ್ನು ಉದ್ಘೋಷಿಸತಕ್ಕದ್ದು ಮತ್ತು ಅದರ ಪ್ರತಿಗಳನ್ನು, ವಿದ್ಯುನ್ಮಾನ ಅಂಚೆಯ ಮೂಲಕ ಅಥವಾ ಇತರ ರೀತಿಯಲ್ಲಿ ವಿವಾದದ ಎಲ್ಲಾ ಪಕ್ಷಕಾರರಿಗೆ ನೀಡತಕ್ಕದ್ದು.".

12. ಅನುಬಂಧ–ಹೆಚ್‌ನ ತರುವಾಯ, ಈ ಮುಂದಿನ ಅನುಬಂಧವನ್ನು ಸೇರಿಸತಕ್ಕದ್ದು, ಎಂದರೆ:–

"ಪರಿಶಿಷ್ಟ ಐ

ಸತ್ಯ ಹೇಳಿಕೆ

(ಮೊದಲನೇ ಅನುಸೂಚಿಯ VIನೇ ಕ್ರಮಾದೇಶದ 15ಎ ನಿಯಮ ಮತ್ತು XIನೇ ಕ್ರಮಾದೇಶದ 3ನೇ ನಿಯಮದ ಮೇರೆಗೆ)

ಹೇಳಿಕೆದಾರನಾದ ನಾನು ------------ಈ ಮೂಲಕ ಕೆಳಗಿನಂತೆ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.

1. ಮೇಲಿನ ದಾವೆಯಲ್ಲಿ ನಾನು ಪಕ್ಷಕಾರನಾಗಿದ್ದೇನೆ ಮತ್ತು ಈ ಅಫಿಡಾವಿಟ್ಟನ್ನು ಪ್ರಮಾಣ ಮಾಡಲು ಸಕ್ಷಮನಾಗಿದ್ದೇನೆ.

2. ನಾನು, ಮೊಕದ್ದಮೆಯ ಸಂಗತಿಗಳನ್ನು ಸಾಕಷ್ಟು ತಿಳಿದಿದ್ದೇನೆ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಸುಸಂಗತ ದಸ್ತಾವೇಜುಗಳನ್ನು ಮತ್ತು ದಾಖಲೆಗಳನ್ನು ಸಹ ಪರೀಕ್ಷಿಸಿದ್ದೇನೆ.

3. ...................................... ಪ್ಯಾರಾಗಳಲ್ಲಿ ಹೇಳಿದ ಹೇಳಿಕೆಗಳು ನಾನು ತಿಳಿದಿರುವಷ್ಟರಮಟ್ಟಿಗೆ ನಿಜವಾದವುಗಳೆಂದು ಮತ್ತು ...........................ಪ್ಯಾರಾಗಳಲ್ಲಿ ಹೇಳಿದ ಹೇಳಿಕೆಗಳು, ನನಗೆ ತಿಳಿದುಬಂದ ಮಾಹಿತಿಯ ಆಧಾರದ ಮೇಲೆ ಸರಿಯಾಗಿವೆಯೆಂದು ನಾನು ನಂಬಿದ್ದೇನೆ ಮತ್ತು ........................ ಪ್ಯಾರಾಗಳಲ್ಲಿ ಹೇಳಿದ ಹೇಳಿಕೆಗಳು ಕಾನೂನು ಸಲಹೆ ಮೇಲೆ ಆಧಾರಿತವಾಗಿವೆಯೆಂದು ನಾನು ಹೇಳುತ್ತೇನೆ.

4. ಯಾವುದೇ ಮುಖ್ಯ ಸಂಗತಿ, ದಸ್ತಾವೇಜು ಅಥವಾ ದಾಖಲೆಯ ಸುಳ್ಳು ಹೇಳಿಕೆ ಅಥವಾ ಬಚ್ಚಿಡುವುದು ಯಾವುದೂ ಇರುವುದಿಲ್ಲವೆಂದು ನಾನು ಹೇಳುತ್ತಿದ್ದೇನೆ ಮತ್ತು ನನ್ನ ಪ್ರಕಾರ ಪ್ರಸಕ್ತ ದಾವೆಗೆ ಸುಸಂಗತ ಮಾಹಿತಿಯನ್ನು ನಾನು ಸೇರಿಸಿದ್ದೇನೆ.

5. ನಾನು ಪ್ರಾರಂಭಿಸಿದ್ದ ವ್ಯವಹರಣೆಗಳ ಸಂಗತಿಗಳಿಗೆ ಮತ್ತು ಸಂದರ್ಭಗಳಿಗೆ ಸಂಬಂಧಿಸಿದಂತೆ ನನ್ನ ಅಧಿಕಾರದಲ್ಲಿ, ಸ್ವಾಧೀನದಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿನ ಎಲ್ಲ ದಸ್ತಾವೇಜುಗಳನ್ನು ಬಹಿರಂಗಪಡಿಸಿದ್ದೇನೆಂದು ಮತ್ತು ಅದರ

ಪ್ರತಿಗಳನ್ನು ವಾದಪತ್ರದೊಂದಿಗೆ ಲಗತ್ತಿಸಿದ್ದೇನೆಂದು ಮತ್ತು ನನ್ನ ಅಧಿಕಾರದಲ್ಲಿ, ಸ್ವಾಧೀನದಲ್ಲಿ, ನಿಯಂತ್ರಣದಲ್ಲಿ ಅಥವಾ ಅಭಿರಕ್ಷೆಯಲ್ಲಿನ ಇತರ ಯಾವುವೇ ದಸ್ತಾವೇಜುಗಳೂ ನನ್ನ ಬಳಿ ಇಲ್ಲವೆಂದು ನಾನು ಹೇಳುತ್ತೇನೆ.

6. ಮೇಲೆ ಹೇಳಿದ ವಾದ–ಪ್ರತಿವಾದ ಪತ್ರವು, ಒಟ್ಟು ………………..ಪುಟಗಳನ್ನು ಒಳಗೊಂಡಿದೆಯೆಂದು ಹಾಗೂ ಅವುಗಳ ಪ್ರತಿಯೊಂದು ಪುಟಕ್ಕೆ ನಾನು ಸಹಿ ಮಾಡಿದ್ದೇನೆಂದು ನಾನು ಹೇಳುತ್ತೇನೆ.

7. ಇದಕ್ಕೆ ಅನುಬಂಧಿಸಿದಂತೆ ನಾನು ಉಲ್ಲೇಖಿಸಿದ ಮತ್ತು ಅವಲಂಬಿಸಿದ ದಸ್ತಾವೇಜುಗಳು ಯಥಾಪ್ರತಿಗಳೆಂದು ನಾನು ಹೇಳುತ್ತೇನೆ.

8. ಯಾವುದೇ ಸುಳ್ಳು ಹೇಳಿಕೆಗಾಗಿ ಅಥವಾ ಬಚ್ಚಿಟ್ಟಿರುವುದಕ್ಕಾಗಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ನನ್ನ ವಿರುದ್ಧ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ನಾನು ಬದ್ಧನಾಗಿರುತ್ತೇನೆಂಬುದು ನನಗೆ ತಿಳಿದಿದೆ ಎಂದು ನಾನು ಹೇಳುತ್ತೇನೆ.

ಸ್ಥಳ:

ದಿನಾಂಕ:

ಹೇಳಿಕೆದಾರ

ಸತ್ಯಾಪನೆ

……………………..ನಾನು ಮೇಲೆ ಹೇಳಿದ ಹೇಳಿಕೆಗಳು ನನಗೆ ತಿಳಿದಿರುವಷ್ಟರ ಮಟ್ಟಿಗೆ ಸತ್ಯವಾಗಿವೆ ಎಂದು ಘೋಷಿಸುತ್ತೇನೆ.

………..(ದಿನ) ದಂದು…………………ರಲ್ಲಿ (ಸ್ಥಳ) ಸತ್ಯಾಪನೆ ಮಾಡಲಾಗಿದೆ.

ಹೇಳಿಕೆದಾರ.¨.